ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀಗುರುಭ್ಯೋ ನಮಃ ॥ ಹರಿಃ ಓಂ ॥

ಸರ್ವವಿಘ್ನಹರ್ತೃಗಜಾನನಾಂತರ್ಗತ ಶ್ರೀಪಾರ್ವತೀಪತಿರುದ್ರಾಂತರ್ಗತ
ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನರಸಿಂಹಾಯನಮಃ

॥ ದಶಮೋಧ್ಯಾಯಃ ॥

ದ್ವಾಪರೇಥಯುಗೇ ಪ್ರಾಪ್ತೇ ತ್ವಷ್ಟಾವಿಂಶತಿಮೇಪುನಃ ।
ಸ್ವಯಂಭೂಶರ್ವಶಕ್ರಾದ್ಯಾ ದುಗ್ಧಾಬ್ಧೇಸ್ತೀರಮಾಯಯುಃ ॥ ೧ ॥

ಅಥ=ಶ್ರೀಹರಿಯಕಥಾಂತರವು (ಇನ್ನೊಂದುಕಥೆಯು) ಈಗ ಪ್ರಾರಂಭಿಸಲ್ಪಡುತ್ತದೆ.(ಅದುಏನೆಂದರೆ)ಅಷ್ಟಾವಿಂಶತಿಮೇ= (ವೈವಸ್ವತ ಮನ್ವಂತರದಲ್ಲಿ ಮೊದಲನೆಯ ದ್ವಾಪರ ಯುಗದಿಂದ ಲೆಖ್ಖವಾಡಿದಾಗ) ಇಪ್ಪತ್ತೆಂಟನೆಯದಾದಂಥ ದ್ವಾಪರೇ ಯುಗೇ=ದ್ವಾಪರಯುಗವು ಪ್ರಾಪ್ತೇ=ಪ್ರಕರ್ಷವಾಗಿ ಆಪ್ತ (ವ್ಯಾಪ್ತ)ವಾಗುತ್ತಿರಲು ಅಂದರೆ ಮುಗಿಯುತ್ತಿರಲು ಸ್ವಯಂಭೂಶರ್ವಶಕ್ರಾದ್ಯಾಃ=ಬ್ರಹ್ಮದೇವರು, ರುದ್ರದೇವರು ದೇವೇಂದ್ರ ಇವರೇ ಮೊದಲಾಗಿ ಉಳ್ಳ ದೇವತೆಗಳು ದುಗ್ಧಾಬ್ಧೇಃ=ಕ್ಷೀರಸಮುದ್ರದ ತೀರಂ=ದಂಡೆಯನ್ನು ಕುರಿತು ಪುನಃ=ಮತ್ತೊಮ್ಮೆ ಆಯಯುಃ=ಬಂದರು.

ಪಯೋಬ್ಧೇರುತ್ತರಂ ತೀರಮಾಸಾದ್ಯ ವಿಬುಧರ್ಷಭಾಃ ।
ತುಷ್ಟುವುಃ ಪುಂಡರೀಕಾಕ್ಷಮಕ್ಷಯ್ಯಂ ಪುರುಷೋತ್ತಮಮ್ ॥ ೨ ॥

ವಿಬುಧರ್ಷಭಾಃ=ದೇವತಾಶ್ರೇಷ್ಠರು ಪಯೋಬ್ಧೇಃ=ಕ್ಷೀರಸಮುದ್ರದ ಉತ್ತರಂತೀರಂ=ಉತ್ತರದಿಕ್ಕಿನ ದಂಡೆಯನ್ನು ಆಸಾದ್ಯ=ಹೊಂದಿ ಪುಂಡರೀಕಾಕ್ಷಂ=ಕಮಲದಂತೆ ಕಣ್ಣುಗಳುಳ್ಳ ಅಕ್ಷಯ್ಯಂ=ನಾಶರಹಿತನಾದ ಪುರುಷೋತ್ತಮಂ=ಸರ್ವೋತ್ತಮನಾದ ಶ್ರೀಹರಿಯನ್ನು ತುಷ್ಟುವುಃ=ಸ್ತುತಿಸಿದರು. (ಏನೆಂದು ಸ್ತುತಿಸಿದರು ಎಂದರೆ ಇಲ್ಲಿ ವಿವರಿಸುತ್ತಾಳೆ)–

ನಮೋನಮೋಗಣ್ಯಗುಣೈಕಧಾಮ್ನೇ ಸಮಸ್ತವಿಜ್ಞಾನಮರೀಚಿಮಾಲಿನೇ ॥
ಅನಾದ್ಯವಿಜ್ಞಾನತಮೋನಿಹಂತ್ರೇ ಪರಾಮೃತಾನಂದ ಪದಪ್ರದಾಯಿನೇ ॥ ೩ ॥

ಅಗಣ್ಯಗುಣೈಕಧಾಮ್ನೇ=ಅಗಣ್ಯ=ಗಣನೆ(ಲೆಖ್ಖ)ಮಾಡಲು ಅಶಕ್ಯವಾದ ಗುಣ=ಗುಣಗಳೇ ಏಕ=ಮುಖ್ಯವಾಗಿ ಧಾಮ್ನೇ=ಶರೀರವಾಗಿ ಉಳ್ಳಂತಹ ಸಮಸ್ತವಿಜ್ಞಾನಮರೀಚಿಮಾಲಿನೇ=ಸಮಸ್ತ=ಸಕಲಪದಾರ್ಥಗಳ ವಿಜ್ಞಾನ=ವಿಶೇಷ ಜ್ಞಾನಗಳೆಂಬ ಮರೀಚಿ=ಕಿರಣಗಳಿಂದ ಮಾಲಿನೇ=ಶೋಭಾಯಮಾನನಾದ ಅನಾದ್ಯವಿಜ್ಞಾನತಮೋನಿಹಂತ್ರೇ=ಅನಾದಿ=ಅನಾದಿಕಾಲದಿಂದ ಇರುವ ಅವಿಜ್ಞಾನ=ಅಜ್ಞಾನ ಎಂಬ ತಮಃ=ಕತ್ತಲೆಯನ್ನು ನಿಹಂತ್ರೇ=ನಾಶಮಾಡತಕ್ಕಂತಹ ಪರಾಮೃತಾನಂದಪದಪ್ರದಾಯಿನೇ=ಪರ=ಶ್ರೇಷ್ಠರಾದ ಬ್ರಹ್ಮಾದಿಗಳಿಗೆ ಅಮೃತ=ನಾಶರಹಿತವಾದ ಆನಂದ=ಆನಂದ ಉಳ್ಳಂತಹ ಪದ=ಮೋಕ್ಷ ಎಂಬ ಸ್ಥಾನವನ್ನು ಪ್ರದಾಯಿನೇ=ಕೊಡುವ ಸ್ವಭಾವವುಳ್ಳಂತಹ ಶ್ರೀಹರಿಗೋಸ್ಕರ ನಮೋನಮಃ=ನಮಸ್ಕಾರ, ನಮಸ್ಕಾರವು. (ಶ್ರೀಹರಿಯಲ್ಲಿ ಆತ್ಯಾದರದಿಂದ ನಮಸ್ಕಾರದ ಆವೃತ್ತಿಯು)

(ಈರೀತಿ ಸ್ತುತಿಸಿ ತಮ್ಮನ್ನು ರಕ್ಷಿಸಿದ ಶ್ರೀಹರಿಯ ಮಹಾಮಹಿಮೆಯನ್ನು ಸ್ತೋತ್ರರೂಪವಾಗಿ ವಿಜ್ಞಾಪಿಸುತ್ತಾರೆ.

ಸ್ವದತ್ತವೂಲಾಭುವಿಪಾತಕೋಪತೋ ದುರ್ವಾಸಸಃ ಶಾಪತ ಆಶುಹಿ ಕ್ರಿಯಾ ॥
ಶಕ್ರೇವಿಹೀನೇ ದಿತಿಜೈಃ ಪರಾಜಿತೇ ಪುರಾನಯಂ ತ್ವಾಂ ಶರಣಂಗತಾಸ್ಮಃ ॥ ೪ ॥

(ಹಿಂದೆ ದೇವೇಂದ್ರರು ಐರಾವತದಮೇಲೆ ಹೋಗುತ್ತಿರುವಾಗ ದೂರ್ವಾಸಮುನಿಗಳು ಒಂದು ಹೂವಿನಮಾಲೆಯನ್ನು ದೇವೇಂದ್ರರಿಗೆ ಕೊಟ್ಟರು. ದೇವೇಂದ್ರರು ಈ ಹೂವಿನ ಮಾಲೆಯನ್ನು ಎಕ್ಕೆ(ಅರ್ಕ)ಹೂವಿನ ಮಾಲೆ ಎಂದು ತಿಳಿದು ಅದನ್ನು ಉದಾಸೀನಮಾಡಿ ಐರಾವತ ತಲೆಯ ಮೇಲೆ ಇಟ್ಟುಕೊಂಡು ಹೋಗುತ್ತಿರುವಾಗ ಆ ಮಾಲೆಯು ಭೂಮಿಯ ಮೇಲೆ ಬಿದ್ದಿತು. ಇದನ್ನು ಕಂಡ ದೂರ್ವಾಸಮುನಿಗಳು "ನೀನು ನಿನ್ನ ಐಶ್ವರ್ಯದಿಂದ ಭ್ರಷ್ಟನಾಗು" ಎಂದು ಶಾಪಕೊಟ್ಟರು. ಎಂದು "ಆದಾಯಾಮರರಾಜಾಯ.....ದೂರ್ವಾಸೋಮುನಿಸತ್ತಮ" ಶ್ರೀವಿಷ್ಣುಪುರಾಣದಲ್ಲಿರುವ ಕಥೆಯನ್ನು ಇಲ್ಲಿ ಮೊದಲು ತಿಳಿಯಬೇಕು ನಂತರ)

ಹೇ ಶ್ರೀಹರಿಯೇ=ಸ್ವದತ್ತಮಾಲಾ=ಸ್ವ=ತನ್ನ (ದೂರ್ವಾಸರ) ಮಾಲಾ=ಮಾಲೆಯು ಭುವಿಪಾತಕೋಪತಃ=ಭುವಿ=ಭೂಮಿಯಲ್ಲಿ ಪಾತ=ಬಿದ್ದನಿಮಿತ್ತವಾಗಿ ಕೋಪತಃ=ಸಿಟ್ಟಿನಿಂದ ದೂರ್ವಾಸಸಃ=ದೂರ್ವಾಸಮುನಿಗಳ ದೆಸೆಯಿಂದ (ದೂರ್ವಾಸಮುನಿಗಳಿಂದ ಕೊಡಲ್ಪಟ್ಟ) ಶಾಪತಃ=ಶಾಪದದೆಸೆಯಿಂದ ಅಶು=ಶೀಘ್ರದಲ್ಲಿ ಶಕ್ರೇ=ದೇವೇಂದ್ರನು ಶ್ರಿಯಾ=ತನ್ನ ಐಶ್ವರ್ಯದಿಂದ=ವಿಹೀನೇ(ಸತಿ)=ಭ್ರಷ್ಟನಾಗುತ್ತಿರಲು(ಮತ್ತೆ) ದಿತಿಜೈಃ=ದೈತ್ಯದಿಂದ ಪರಾಜಿತೇ(ಸತಿ)=ಪರಾಜಿತನಾಗುತ್ತಿರಲು ವಯಂ=ನಾವು ತ್ವಾಂ=ನಿನ್ನನ್ನು ಶರಣಂಗತಾಸ್ಮಃ=ರಕ್ಷಕನನ್ನಾಗಿ ಮೊರೆ ಹೊಂದಿದೆವು.

ತ್ವದಾಜ್ಞಯಾ ಬಲಿನಾಸಂದಧಾನಾ ವರಾದ್ಗಿರೀಶಸ್ಯಪರೈರಚಾಲ್ಯಮ್ ॥
ವೃಂದಾರಕಾಮಂದರಮೇತ್ಯಬಾಹುಭಿರ್ನಶೇಕುರುದ್ಧರ್ತುಮಿಮೇಸಮೇತಾಃ ॥ ೫ ॥

ತ್ವದಾಜ್ಞಯಾ=ಸಮುದ್ರಮಥನಕ್ಕಾಗಿ ಬಲಿಯಿಂದ ಸಂಧಿಯನ್ನು ಮಾಡಿಕೊಳ್ಳಿರಿ ಎಂಬ ನಿನ್ನ ಆಜ್ಞಾದಿಂದ ಬಲಿನಾ=ಕರ್ಮದೇವನಾದ ಬಲಿಯಿಂದ(ಬಲಿಚಕ್ರವರ್ತಿ ಪ್ರಹ್ಲಾದರಾಜರಅಜ್ಜ ಅಲ್ಲ) ಸಂದಧಾನಾಃ=ಸಂಧಿಯನ್ನು ಮಾಡಿಕೊಂಡಂತಹ ಇಮೇ=ಈ ವೃಂದಾರಕಾಃ=ದೇವತೆಗಳು ಸಮೇತಾಃ(ಸಂತಃ)=(ದೈತ್ಯರಿಂದ)ಕೂಡಿದವರಾಗಿ ಗಿರೀಶಸ್ಯ=ಈ ರುದ್ರದೇವರ ವರಾತ್=ವರದಿಂದ ಪರೈಃ=ಶ್ರೀಹರಿಯನ್ನು ಬಿಟ್ಟು ಇತರರಿಂದ ಅಚಾಲ್ಯಂ=ಚಲಿಸಲು ಅಶಕ್ಯವಾದಂತಹ ಮಂದರಂ=ಮಂದರಪರ್ವತವನ್ನು ಕುರಿತು ಏತ್ಯ=ಬಂದು ಉದ್ಧರ್ತುಂ=ಈ ಮಂದರಪರ್ವತವನ್ನು ಎತ್ತಲು ನಶೇಕುಃ=ಸಮರ್ಥರಾಗಲಿಲ್ಲ.

ತದಾತ್ವಯಾ ನಿತ್ಯಬಲತ್ವಹೇತುತೋ ಯೋನಂತನಾಮಾ ಗರುಡಸ್ತದಂಸಕೇ॥
ಉತ್ಪಾಟ್ಯ ಚೈಕೇನ ಕರೇಣ ಮಂದರೋ ನಿಧಾಪಿತಸ್ತಂ ಸಸಹತ್ವಯಾವಹತ್ ॥ ೬ ॥

ತದಾ=ಆಗ ನಿತ್ಯಬಲತ್ವಹೇತತಃ=(ನಿನಗೆ) ನಿತ್ಯದಲ್ಲಿ ಪರಿಪೂರ್ಣಬಲವು ಇರುವ ಕಾರಣದಿಂದ ತ್ವಯಾ=ನಿನ್ನಿಂದ ಮಂದರಃ=(ಆ)ಮಂದರಪರ್ವತವು ಉತ್ಪಾಟ್ಯ=ಎತ್ತಲ್ಪಟ್ಟುಯಃಗರುಡಃ=ಯಾವ ಗರುಡನು ಅನಂತನಾಮಾ=ಅನಂತ ಎಂದು ಹೆಸರು ಉಳ್ಳವನೋ ತದಸಂಕೇ=ಆ ಗರುಡನ ಭುಜದಲ್ಲಿ ಏಕೇನ ಕರೇಣಚ=ಒಂದೇ ಕೈಯಿಂದಲೇ ನಿಧಾಪಿತಃ=ಇಡಲ್ಪಟ್ಟಿತು ಸಃ=ಆ ಗರುಡನು ತಂ=ಆ ಪರ್ವತವನ್ನು ತ್ವಯಾಸಹ=ನಿನ್ನಿಂದ ಕೂಡಿಕೊಂಡು ಅವಹತ್=ಹೊತ್ತುಕೊಂಡನು.

ಪುನಃ ಪರೀಕ್ಷ್ಯದ್ಭಿರಸೌ ಗಿರಿಃ ಸುರೈಃ ಸಹಾಸುರೈರುನ್ನಮಿತಾಸ್ತದಂಸತಃ ॥
ವ್ಯಚೂರ್ಣದೀತ್ತಾನಖಿಲಾನ್ಸುನಶ್ಚತೇ ತ್ವಯೇಕ್ಷ್ಯಯಾ ಪೂರ್ವವದುತ್ಥಿತಾಃ ಪ್ರಭೋ ॥ ೭ ॥

ಪ್ರಭೋ=ಹೇ ಸಮರ್ಥನಾದ ಶ್ರೀಹರಿಯೇ ನೀನು ಮಂದರ ಪರ್ವತವನ್ನು ಗರುಡನ ಹೆಗಲ ಮೇಲೆ ಇಟ್ಟ ನಂತರ ಪರೀಕ್ಷದ್ಭಿಃ=(ಈ ಪರ್ವತವು ನಮ್ಮಿಂದ ಈಗಲಾದರೂ ಎತ್ತಲ್ಪಡಬಹುದೇ ನೋಡೋಣ ಎಂದು ತಮ್ಮ ತಮ್ಮ ಶಕ್ತಿಯ ಪರೀಕ್ಷೆಯನ್ನು ಮಾಡತಕ್ಕಂತಹ ಅಸುರೈಃ=ದೈತ್ಯರಿಂದ ಸಹ=ಕೂಡಿಕೊಂಡು ಸುರೈಃ=ದೇವತೆಗಳಿಂದ ಅಸೌ ಗಿರಿಃ=ಈ ಮಂದರ ಪರ್ವತವು ತದರಸತಃ=ಆ ಗರುಡದೇವರ ಹೆಗಲದೆಸೆಯಿಂದ ಉನ್ನಮಿತಃ=(ಸನ್)ಎತ್ತಲ್ಪಟ್ಟದ್ದಾಗಿ ಅಖಿಲಾನ್=ಸಮಸ್ತರಾದ ತಾನ್=ದೇವಾಸುರರನ್ನೂ ವ್ಯಚೂರ್ಣಯತ=ಪುಡಿಪುಡಿ ಮಾಡಿತು(ನಾಶವಾದವರಂತೆ ಮಾಡಿತು) ಪುನಃ=ಮತ್ತು ತೇ=ಆ ದೇವತೆಗಳು, ಅಸುರರು ತ್ವದೀಕ್ಷಯಾ=ನಿನ್ನ ಕೃಪಾದೃಷ್ಟಿಯಿಂದ ಪೂರ್ವವತ್=ಮೊದಲಿನಂತೆ ಉತ್ಥಿತಾಃ=ಮೇಲೆ ಎದ್ದರು.

ಪುನಶ್ಚವಾಮೇನ ಕರೇಣ ವೀಶ್ವರೇ ನಿಧಾಯತಂ ಸ್ಕಂಧಗತಸ್ತ್ವಮಸ್ಯ ।
ಅಗಾಃ ಪಯೋಬ್ಧಿಂ ಸಹಿತಃಸುರಾಸುರೈ ರ್ಮಥ್ನಾಚ ತೇನಾಬ್ಧಿಮಥಾಪ್ಯಮತ್ಸ್ಯಃ ॥ ೮ ॥

ಅಸ್ಯ = ಈ ಗರುಡನ ಸ್ಕಂಧಗತಃ=ಹೆಗಲಮೇಲೆ ಇದ್ದಂತಹ ತ್ವಂ=ನೀನು ಪುನಶ್ಚ=ಮತ್ತೆ ವಾಮೇನಕರೇಣ=ಎಡದ ಕೈಯಿಂದ ತಂ=ಆ ಪರ್ವತವನ್ನು ವೀಶ್ವರೇ=ಗರುಡನ ಮೇಲೆ ನಿಧಾಯ=ಇಟ್ಟು ಸುರಾಸುರೈಃ=ದೇವತೆಗಳಿಂದ ದೈತ್ಯರಿಂದ ಸಹಿತಃ (ಸನ್)=ಕೂಡಿದವನಾಗಿ ಪಯೋಬ್ಧಿಂ=ಕ್ಷೀರ ಸಮುದ್ರವನ್ನು ಕರಿತಂ ಅಗಾಃ=ಹೋಗಿರುವಿ ಅಥಅಪಿ=ಅನಂತರದಲ್ಲಿಯೂ ಕೂಡ ತೇನ=ಮಥ್ನಾಚ=ಅಂತಹ ಕಡೆಗೋಲಾದ ಮಂದರ ಪರ್ವತದಿಂದ ಅಬ್ಧಿಂ=ಕ್ಷೀರ ಸಮುದ್ರವನ್ನು ಅವಥ್ನಾಃ=ಮಥನ ಮಾಡಿಸಿದಿ.

ಕೃತಶ್ಚ ಕದ್ರ್ವಾಸ್ತನಯೋತ್ರ ವಾಸುಕಿರ್ನೇತ್ರಂ ತ್ವಯಾ ಕಶ್ಯಪಜಃ ಸ ನಾಗರಾಟ್ ।
ಮಮುಂಥುರಬ್ಧಿಂ ಸಹಿತಾಸ್ತ್ವಯಾ ಸುರಾಃ ಸಹಾಸುರಾ ದಿವ್ಯಪಯೋ ಘೃತಾಧಿಕಮ್ ॥ ೯ ॥

ಕದ್ರ್ವಾಃ=ಕದ್ರುವಿನ ತನಯಃ=ಮಗನಾದ ಕಶ್ಯಪಜಃ=ಕಶ್ಯಪರಿಂದ ಹುಟ್ಟಿದ ಸಃ=ಆ ಪ್ರಸಿದ್ಧನಾದ ನಾಗರಾಟ್=ಸರ್ಪಗಳಿಗೆ ರಾಜನಾದ ವಾಸುಕಿಃ=ವಾಸುಕಿಯು ತ್ವಯಾ = ನಿನ್ನಿಂದ ಅತ್ರ=ಈ ಸಮುದ್ರ ಮಥನ ವಿಷಯದಲ್ಲಿ ನೇತ್ರಂ=ಹಗ್ಗವಾಗಿ ಕೃತಃ=ಮಾಡಲ್ಪಟ್ಟನು ಚ=ನಿಶ್ಚಯವು ಸಹಾಸುರಾಃ=ದೈತ್ಯಗಳಿಂದ ಸಹಿತರಾದ ಸುರಾಃ = ದೇವತೆಗಳು ತ್ವಯಾ=ನಿನ್ನಿಂದ ಸಹಿತಾಃ(ಸಂತಃ)=ಕೂಡಿದವರಾಗಿ ಘೃತಾಧಿಕಂ=ತುಪ್ಪವೇ ಹೆಚ್ಚಾಗಿ ಇರುವ ದಿವ್ಯಪಯಃ=ಶ್ರೇಷ್ಠವಾದ ಹಾಲು ಉಳ್ಳಂತಹ, ಅಬ್ಧಿಂ = ಸಮುದ್ರವನ್ನು ಮಮುಂಥುಃ=ಕಡೆದರು.

ನೈಚ್ಛಂತ ಪುಚ್ಛಂ ದಿತಿಜಾ ಅಮುಂಗಲಂ ತದಿತ್ಯಥಾಗ್ರಂ ಜಗೃಹುರ್ವಿಷೋಲ್ಬಣಮ್ ।
ಶ್ರಾಂತಾಸ್ತು (ಚ) ತೇಽತೋವಿಬುಧಾಸ್ತು ಪುಚ್ಛಂ ತ್ವಯಾ ಸಮೇತಾ ಜಗೃಹುಸ್ತ್ವದಾಶ್ರಯಾಃ ॥೧೦॥

(ಈ ಮಥನ ಕಾಲದಲ್ಲಿ ವಾಸುಕಿಯ ಬಾಲವನ್ನು ಬಿಟ್ಟು ಮುಖವನ್ನು ಏಕೆ ಹಿಡಿದರು ದೈತ್ಯರು ಎಂಬ ಪ್ರಶ್ನೆಗೆ ಉತ್ತರವನ್ನು ಹೇಳಿತ್ತಾರೆ.) ಅಥ=ಮಂಥನ ಪ್ರಾರಂಭವಾಗುವ ಕಾಲದಲ್ಲಿ ತತ್=ಆ ಪುಚ್ಛಂ=ಬಾಲವು ಅಮುಂಗಲಂ=ಶೋಭಿಸುವದಿಲ್ಲ. (ಪರಾಕ್ರಮಿಗಳು ಮುಖವನ್ನು ಹಿಡಿಯಬೇಕೇ ವಿನಹ ಬಾಲವನ್ನಲ್ಲ) ಇತಿ=ಇಂತೆಂದು ದಿತಿಜಾಃ=ದೈತ್ಯರು ಪುಚ್ಛಂ=ಬಾಲವನ್ನು ನೈಚ್ಛಂತ=ಇಚ್ಛಿಸಲಿಲ್ಲ. (ಮತ್ತು) ವಿಷೋಲ್ಬಣಂ=ವಿಷದಿಂದ ಭಯಂಕರವಾದ, ಅಗ್ರಂ=ಮುಖವನ್ನು ಜಗೃಹುಃ=ಹಿಡಿದರು. ತೇತು=ಆ ದೈತ್ಯರಾದರೂ ಅತಃ=ಈ ವಿಷದ ನಿಮಿತ್ತವಾಗಿ ಶ್ರಾಂತಾಃ=ಶ್ರಮ ಹೊಂದಿದರು. (ಮಥನ ಮಾಡುವಾಗ ವಿಷವು ವಾಸುಕಿ ಸರ್ಪದ ಮುಖದಿಂದ ಹೊರಬಂದದ್ದರಿಂದ) ಶ್ರಾಂತಾಃ=ಶ್ರಮಹೊಂದಿದರು ತ್ವದಾಶ್ರಯಾಃ=ನಿನ್ನನ್ನೇ ಆಶ್ರಯಿಸಿದ. ವಿಬುಧಾಸ್ತು=ದೇವತೆಗಳಾದರೂ ತ್ವಯಾ=ನಿನ್ನಿಂದ ಸಮೇತಾಃ(ಸಂತಃ) ಕೂಡಿಡವರಾಗಿ (ಅತಃ=ದೈತ್ಯರು ಮುಖವನ್ನು ಹಿಡಿದಿದ್ದರಿಂದಲೇ ಅವರಪಾಲಿಗೆ ಬಂದ) ಪುಚ್ಛಂ=ಬಾಲವನ್ನು ಜಗೃಹುಃ = ಹಿಡಿದರು.

ಅಥಾತಿಭಾರಾದವಿಶತ್ ಸುಕಾಂಚನೋ ಗಿರಿಃ ಸಪಾಲಮುಥ್ವಮೇವ ।
ತಂ ಕಚ್ಛಪಾತ್ಮಾತ್ವಭರಃ ಸ್ವಪೃಷ್ಠೇ ಹ್ಯನನ್ಯಧಾರ್ಯಂ ಪುರುಲೀಲಯೈವ ॥ ೧೧ ॥

ಅಥ=ಈ ರೀತಿ ಮಥನ ಪ್ರಾರಂಭವಾದ ನಂತರ ಸುಕಾಂಚನಃ=ಬಂಗಾರದಾ ದಂಥ ಸಃ=ಆ ಗಿರಿಃ=ಮಂದರ ಪರ್ವತವು ಅತಿಭಾರಾತ್=ಬಹಳ ಭಾರವಿದ್ದದ್ದರಿಂದ ಪಾತಾಲಂ = ಪಾತಾಲ ಲೋಕವನ್ನು ಅವಿಶತ್=ಪ್ರವೇಶಿಸಿತು. ಅನನ್ಯಧಾರ್ಯಂ=ನಿನ್ನ ಹೊರತು ಇನ್ನೊಬ್ಬರಿಂದ ಧರಿಸಲು ಅಶಕ್ಯವಾದ ತಂ=ಆ ಮಂದರ ಪರ್ವತವನ್ನು ಕಚ್ಛಪಾತ್ಮಾ=ಕೂರ್ಮರೂಪಿಯಾದ ತ್ವಮೇವ=ನೀನೇ ಸ್ವಪೃಷ್ಠೇ ತು=ನಿನ್ನ ಬೆನ್ನಿನ ಮೇಲೇನೇ ಪುರು ಲೀಲಯೈವ=ಅತ್ಯಂತವಾಗಿ ಆಟದಂತೆ ಅಂದರೆ ಏನೂ ಆಯಾಸವಿಲ್ಲದವನಾಗಿ ಅಭರಃ=ಧರಿಸಿದಿ.

ಉಪರ್ಯಧಶ್ಚಾತ್ಮನಿ ನೇತ್ರಗೋತ್ರಯೋಸ್ತ್ವಯಾ ಪರೇಣಾऽವಿಶತಾ ಸಮೇಧಿತಾಃ ।
ಮಮುಂಥುರಬ್ಧಿಂ ತರಸಾಮದೋತ್ಕಟಾಃ ಸುರಾಸುರಾಃ ಕ್ಷ್ವೇಭಿತನಕ್ರಚಕ್ರಮ್ ॥ ೧೨ ॥

ನೇತ್ರಗೋತ್ರಯೋಃ=ಹಗ್ಗದಂತಿರುವ (ವಾಸುಕಿ) ಶೇಷನಲ್ಲಿ, ಕಡೆಗೋಲುದಂತಿರುವ ಪರ್ವತದಲ್ಲಿ ಉಪರಿ=ಮೇಲೆ ಚ=ಮತ್ತು ಅಧಃ=ಕೆಳಗೆ (ಕಡಗೋಲಾಗಲಿ ಹಗ್ಗವಾಗಲಿ, ಕೆಳಗೆ ಮೇಲೆ ಹೋಗ ಬಾರದು. ಯಾವಭಾಗದಲ್ಲಿಯೂ ತುಂಡಾಗಬಾರದೆಂದು ಮೇಲೆ ಕೆಳಗೆ ಪ್ರವೇಶಿಸಿದನು ಶ್ರೀ ಹರಿಯು)

ಆತ್ಮನಿ=ನಮ್ಮಲ್ಲಿ ವಿಶತಾ=ಪ್ರವಿಷ್ಟನಾದ ಪರೇಣ=ಸರ್ವೋತ್ತಮನಾದ ತ್ವಯಾ=ನಿನ್ನಿಂದ ಸಮೇಧಿತಾಃ=ಸರಿಯಾಗಿ ಅಭಿವೃದ್ಧಿ ಹೊಂದಿದ ಮದೋತ್ಕಟಾಃ=ಸಂತೋಷದಿಂದ ಉತ್ಕೃಷ್ಟರಾದ ಸುರಾಸುರಾಃ=ದೇವತೆಗಳು ದೈತ್ಯರು ಕ್ಷೋಭಿತ=ಸಕ್ರಚಕ್ರಂ=ಕ್ಷೋಭಿತ=ಅಲ್ಲೋಲಕಲ್ಲೋಲವಾದ ನಕ್ರಚಕ್ರಂ=ನಕ್ರ=ಮೊಸಳೆ ಮೊದಲಾದ ಜಲಚರ ಪ್ರಾಣಿಗಳ ಚಕ್ರಂ=ಸಮುದಾಯವುಳ್ಳ ಅಬ್ಧಿಂ=ಸಮುದ್ರವನ್ನು ತರಸಾ=ವೇಗದಿಂದ ಮಮಂಥುಃ=ಮಥನ ಮಾಡಿದರು.

ವಿಶೇಷ:- ಮಥನ ಮಾಡುವಾಗ ಪರ್ವತವು ಮೇಲೆ ಹಾರಬಾರದು ಕೆಳಗೆ ಬೀಳಬಾರದು ದೇವದೈತ್ಯರು ಮಥಿಸಲಿ ಸಮರ್ಥರಾಗಲಿ ಎಂಬ ಉದ್ದೇಶದಿಂದ ಶ್ರೀಹರಿಯು ಎಲ್ಲ ಕಡೆಗೂ ಪ್ರವಿಷ್ಟನಾಗಿ ಮಥನಮಾಡಿಸಿದನು. ಇಲ್ಲಿ ಆತ್ಮನಿ ಎನ್ನುವದು "ಜಾತೌ ಏಕವಚನ" ಎಂದು ತಿಳಿಯಬೇಕು.

ಶ್ರಾಂತೇಷುತೇಷ್ವೇಕ ಉರುಕ್ರಮಸ್ತ್ವಂ ಸುಧಾರಸಾಪ್ಯೈ ಮುದಿತೋಹ್ಯಮಥ್ನಾಃ ॥
ತದಾಜಗದ್ಗ್ರಾಸಿ ವಿಷಂಸಮುತ್ಥಿತಂ ತ್ವದಾಜ್ಞಯಾ ವಾಯುರಧಾತ್ಕರೇನಿಜೇ ॥ ೧೩ ॥

ತದಾ=ಆಗ ತೇಷು=ಆ ದೇವತೆಗಳು ಮತ್ತು ದೈತ್ಯರು ಶ್ರಾಂತೇಷು=ಬಹಳ ಶ್ರಮ ಪಟ್ಟಂದಿದವರು ಆಗಿರಲಿಕ್ಕೆ ಉರುಕ್ರಮಃ=ಉತ್ಕೃಷ್ಟವಾದ ಪರಾಕ್ರಮವುಳ್ಳ ತ್ವಂಏಕಃ=ನೀನೊಬ್ಬನೇ ಮುದಿತಃ=(ದೇವತೆಗಳಿಗೆ ಅಮೃತವನ್ನು ಕೊಡಿಸುವದಕ್ಕೋಸ್ಕರ) ಮುದಾ=ಸಂತೋಷದಿಂದ ಇತಃ=ಕೂಡಿದವನು ಆಗಿದ್ದಿ ಸುಧಾರಸಾಪ್ಯೈ=ಅಮೃತ=ಸುಧಾ ಎಂಬ ರಸ ಪ್ರಾಪ್ತಿಗೊಸ್ಕರ ಅಮಥ್ನಾಃ=ಮಥಿಸಿದರು. ತದಾ=ಆಗ ಜಗದ್ಗ್ರಾಸಿ=ಸರ್ವಜಗನ್ನಾಶಕವಾದ ವಿಷಂ=ವಿಷವು ಸಮುತ್ಥಿತಂ=ಉದ್ಭವಿಸಿತು. ತ್ವದಾಜ್ಞಯಾ=ನಿನ್ನ ಆಜ್ಞಾದಿಂದ ವಾಯುಃ=ಶ್ರೀ ವಾಯುದೇವರು ನಿಜೇ ಕರೇ=ತಮ್ಮ ಕೈಯಲ್ಲಿ ಅಧಾತ್=(ಆ ವಿಷವನ್ನು) ಧರಿಸಿದರು

ಕಲೇಃ ಸ್ವರೂಪಂ ತದತೀವ ದುಃಸಹಂ ವರಾದ್ವಿಧಾತುಃ ಸಕಲೈಶ್ಚ ದುಸ್ಪೃಶಮ್ ॥
ಕರೇ ವಿಮಥ್ಯಾಸ್ತಬಲಂ ವಿಧಾಯ ದದೌ ಸ ಕಿಂಚಿದ್ಗಿರಿಶಾಯ ವಾಯುಃ ॥ ೧೪ ॥

ತತ್=ಆ ವಿಷವು ಕಲೇಃ=ಕಲಿಯ ಸ್ವರೂಪಂ=ಸ್ವರೂಪವಾಗಿದೆ. (ಅಂದರೆ ಕಲಿಯೇ ವಿಷರೂಪದಿಂದ ಉತ್ಪನ್ನನಾದನು.) ಆದ್ದರಿಂದಲೇ ವಿಧಾತುಃ=ಬ್ರಹ್ಮದೇವರ ವರಾತ್=ವರದಿಂದ ಅತೀವ=ಅತ್ಯಂತವಾಗಿ ದುಃಸಹಂ=ಸಹಿಸಲು ಅಶಕ್ಯವಾದದ್ದು ಚ=ಮತ್ತು ಸಕಲೈಃ=ಎಲ್ಲರಿಂದಲೂ ದುಸ್ಪೃಶಂ=ಸ್ಪರ್ಶ ಮಾಡಲೂ ಅಯೋಗ್ಯವಾದದ್ದು. (ತತ್=ಆ ವಿಷವನ್ನು) ಕರೇ=ತನ್ನ ಕೈಯಲ್ಲಿ ವಿಮಥ್ಯ=ತಿಕ್ಕಿ ಅಸ್ತಬಲಂ=ನಷ್ಟವಾದ ಬಲ ಉಳ್ಳದ್ದನ್ನಾಗಿ ವಿಧಾಯ ಮಾಡಿ ಸಃವಾಯುಃ=ಆ ವಾಯುದೇವರು ಕಿಂಚಿತ್=ಸ್ವಲ್ಪವನ್ನು ಮಾತ್ರ ಗಿರಿಶಾಯ=ರುದ್ರದೇವರಿಗೆ ದದೌ=ಕೊಟ್ಟರು.

ವಿಶೇಷ—1) ಮಥನಕಾಲದಲ್ಲಿ ಉದ್ಭವಿಸಿದ ವಿಷವು ಅತೀ ಭಯಂಕರವಾಗಿದೆ. ಅದಕ್ಕೆ ಕಲಿಯು ಅಭಿಮಾನಿ ದೈತ್ಯನು ಅದನ್ನು ಮುಟ್ಟಲೂ ಸಹ ಇತರರಿಗೆ ಶಕ್ಯವಿಲ್ಲ. ಅಂತಹ ವಿಷವನ್ನು ಈ ವಾಯುದೇವರು ತಮ್ಮ ಕೈಯಲ್ಲಿ ತೆಗೆದುಕೊಂಡು ತಿಕ್ಕಿ ಅದರ ಬಲವನ್ನು ನಾಶಮಾಡಿ ಅಂತಹ ದುರ್ಬಲವಾದ ವಿಷದಲ್ಲಿ ಸ್ವಲ್ಪ ಭಾಗವನ್ನು ಶ್ರೀ ರುದ್ರದೇವರಿಗೆ ಕುಡಿಯಲು ಕೊಟ್ಟರು. 2) ಈ ವಿಷಯವು ಶ್ರುತಿ ಸಿದ್ಧವಾಗಿದೆ.

ಸತತ್ಪಿಬನ್ ಕಂಠಗತೇನ ತೇನ ನಿಪಾತಿತೋ ಮೂರ್ಛಿತ ಆಶುರುದ್ರಃ ।
ಹರೇಃ ಕರಸ್ಪರ್ಶ ಬಲಾತ್ಸಸಂಜ್ಞಾಮವಾಪ ನೀಲೋಸ್ಯ ಗಲಸ್ತದಾಸೀತ್ ॥ ೧೫ ॥

ಸಃ ರುದ್ರಃ=ಆ ರುದ್ರದೇವರು ತತ್=ಆ ಸಾರರಹಿತವಾದ ವಿಷವನ್ನು ಪಿಬನ್(ಸನ್)=ಕುಡಿಯುತಕ್ಕವರಾಗಿ ಕಂಠಗತೇನ=(ರುದ್ರದೇವರ)ಕಂಠವನ್ನು ತಲುಪಿದಂತಹ ತೇನ=ಆ ವಿಷದಿಂದ ಮೂರ್ಛಿತಃ(ಸನ್)=ಪ್ರಜ್ಞಾ(ಎಚ್ಚರ)ಇಲ್ಲದವರಾಗಿ ಆಶು=ಶೀಘ್ರದಲ್ಲಿ ನಿಪಾತಿತಃ=ಬೀಳಿಸಲ್ಪಟ್ಟರು. ತದಾ=ಆಗ ಹರೇಃ=ಶ್ರೀಹರಿಯ ಕರಸ್ಪರ್ಶಬಲಾತ್=ಹಸ್ತ ಸ್ಪರ್ಶದ ಬಲದಿಂದ ಸಂಜ್ಞಾಂ=ಜ್ಞಾನವನ್ನು ಅವಾಪ=ಹೊಂದಿದರು. ಅಸ್ಯ=ಈ ರುದ್ರದೇವರ ಗಲಃ=ಕಂಠವು ನೀಲಃ=ನೀಲಿ ಬಣ್ಣ ಉಳ್ಳದ್ದು ಆಸೀತ್=ಆಯಿತು.

ಅಥತ್ವದಾಜ್ಞಾಂ ಪುರತೋ ನಿಧಾಯ ನಿಧಾಯಪಾತ್ರೇ ತಪನೀಯರೂಪೇ ।
ಸ್ವಯಂ ತ್ವನಿರ್ಮಥ್ಯ ಬಲೋಪಪನ್ನಂ ಪಪೌ ಸವಾಯುಸ್ತದುತಾಸ್ಯ ಜೀರ್ಣಮ್ ॥ ೧೬ ॥

ಅಥ=ಅನಂತರದಲ್ಲಿ ತ್ವದಾಜ್ಞಾಂ=ನಿನ್ನ ಅಪ್ಪಣೆಯನ್ನು ಪುರತಃನಿಧಾಯ=ಪುರಸ್ಕಾರ ಮಾಡಿ ಸಃ ವಾಯುಃ=ವಾಯುದೇವರು ಬಲೋಪಪನ್ನಂ=ಅತೀ ಭಯಂಕರವಾದ ವಿಷವನ್ನು ತಪನೀಯಪಾತ್ರೇ=ಬಂಗಾರದ ಪಾತ್ರೆಯ ನಿಧಾಯ=ಇಟ್ಟು ಅನಿರ್ಮಥ್ಯ=ಮಥನ ಮಾಡದೇ (ತಿಕ್ಕದಲೇ) ಪಪೌ=ಕುಡಿದನು ಉತ=ಹೀಗೆ ಕುಡಿದನಂತರ ತತ್=ವಿಷವು ಅಸ್ಯ=ಈ ವಾಯುದೇವರಿಗೆ ಜೀರ್ಣಂ=ಜೀರ್ಣವಾಯಿತು.

ವಿಶೇಷ—1) ಇದರಿಂದ ಶ್ರೀ ಹರಿಯ ಅನುಗ್ರಹವು ಶ್ರೀ ವಾಯುದೇವರಲ್ಲಿ ಇದ್ದಷ್ಟು ಇನ್ನುಳಿದ ಯಾವ ಜೀವರಲ್ಲಿಯೂ ಇಲ್ಲ ಎಂದು ಸಿದ್ಧವಾಗುವದು. (2)"ಕೇಶೀ ವಿಷಸ್ಯ ಪಾತ್ರೇ ಯದ್ರುದ್ರೇಣಾ ಪಿಬತ್ಸಹ" ಎಂಬ ಋಗ್ವೇದಮಂತ್ರದ ಈ ವಿಷಯವು ಸಿದ್ಧವಾಗಿದೆ. "ಸಹ ಅಪ್ರಧಾನೇ" ಎಂದು ಇರುವದರಿಂದ ಈ ವಿಷಪಾನ ವಿಷಯದಲ್ಲಿ ಶ್ರೀರುದ್ರದೇವರಿಗೆ ಅಪ್ರಾಧಾನ್ಯ ಶ್ರೀ ವಾಯುದೇವರಿಗೆ ಪ್ರಾಧಾನ್ಯ ಎಂದು ತಿಳಿಯಬೇಕು.

ಅತ್ಯಲ್ಪಪಾನಾಚ್ಚ ಬಭೂವ ಶೂಲಾ ಶಿವಸ್ಯ ಶೀರ್ಷ್ಣ್ಯಸ್ಯಕರಾವಶಿಷ್ಟವಮ್ ।
ಆಭೂತ್ಕಲಿಃ ಸರ್ವಜಗತ್ಸುಪೂರ್ಣಂ ಪೀತ್ವಾವಿಕಾರೋ ನ ಬಭೂವ ವಾಯೋಃ ॥ ೧೭ ॥

ಅತ್ಯಲ್ಪಪಾನಾತ್ ಚ=(ಶ್ರೀವಾಯುದೇವರು ವಿಷದ ಸಾರಭಾಗವನ್ನು ತೆಗೆದು ಅಸಾರಭಾಗವನ್ನು ಶ್ರೀ ರುದ್ರದೇವರಿಗೆ ಕೊಟ್ಟಿದ್ದು ಅಲ್ಪ ಭಾಗದಲ್ಲಿಯೂ ಅತ್ಯಲ್ಪವನ್ನು ಮಾತ್ರಕು ಡಿಯುವದರಿಂದಲೇ ಅಸ್ಯ=ಈ ಶಿವಸ್ಯ=ರುದ್ರದೇವರ ಶೀರ್ಷ್ಣ್ಯ=ಯಲ್ಲಿ ಶೂಲಾ=ಶೂಲೆಯು (ನೋವು) ಬಭೂವ=ಉಂಟಾಯಿತು. ಕಲಿಃ=ಕಲಿಯೇ ಅಭಿಮಾನಿಯಾಗಿಯುಳ್ಳ ಕರಾವಶಿಷ್ಟ=ಶ್ರೀ ರುದ್ರದೇವರ ಕೈಯಲ್ಲಿ ಉಳಿದಂತಹ ಇನ್ನು ಸ್ವಲ್ಪ ಭಾಗವು ಸರ್ವಜಗತ್ಸು=ಎಲ್ಲ ಜಗತ್ತಿನಲ್ಲಿ (ಪೂರ್ಣಂ=ವ್ಯಾಪಿಸಿತು(ಸಂಪೂರ್ಣವಾದ ವಿಷವನ್ನು) ಪೀತ್ವಾ=ಕುಡಿದರೂ ವಾಯೋಃ=ಶ್ರೀ ವಾಯುದೇವರಿಗೆ ವಿಕಾರಃ=ವಿಕಾರವು ನಬಭೂವ=ಆಗಲಿಲ್ಲ

~~**ಕಲೇಃ ಶರೀರಾದಭವನ್ನಾಗಾಃ ಸವೃಶ್ಚಿಕಾಃ ಶ್ವಾಪದಯಾತುಧಾನಾಃ ॥**~~
ಅಥತ್ವಯಾಬ್ಧಿತು ವಿಮಥ್ಯಮಾನೇ ಸುರಾಭವತ್ತಾಮಸುರಾ ಅವಾಪುಃ ॥ ೧೮ ॥

ಕಲೇಃಶರೀರಾತ್=ಕಲಿಯ ಶರೀರವಾದ ವಿಷದ ದೆಶೆಯಿಂದ ಕುನಾಗಾಃ=ದುಷ್ಟ ಸರ್ಪಗಳು ಸವೃಶ್ಚಿಕಾಃ=ಚೇಳಿನಿಂದ ಸಹಿತವಾದ ಶ್ವಾಪದಯಾತುಧಾನಾಃ=(ಶ್ವಾಪದ)ತೋಳ, ಹುಲಿ, ನಾಯಿ, ಯಾತುಧಾನಾಃ=ರಾಕ್ಷಸರು ಅಭವನ್=ಹುಟ್ಟಿದರು ಅಥ=ಅನಂತರದಲ್ಲಿ ತ್ವಯಾ=ನಿನ್ನಿಂದ ಅಬ್ಧೌ ತು=ಸಮುದ್ರವು ವಿಮಥ್ಯಮಾನೇ (ಸತಿ)=ಮಥಿಸಲ್ಪಡುತ್ತಿರಲು ಸುರಾ=ಸುರೆಯವು ಅಭವತ್=ಹುಟ್ಟಿತು. ತಾಂ=ಆ ಮದ್ಯವನ್ನು ಅಸುರಾಃ=ದೈತ್ಯರು ಅವಾಪುಃ=ಹೊಂದಿದರು.

ಉಚ್ಚೈಃಶ್ರವಾನಾಮತುರಂಗಮೋಭೂತ್ಕರೀ ತಥೈರಾವತ ನಾಮಧೇಯಃ ॥
ಅನ್ಯೇಚದಿಕ್ಪಾಲಗಜಾಬಭೂವುರ್ವರಂತಥೈವಾಪ್ಸರಸಾಂ ಸಹಸ್ರಮ್ ॥ ೧೯ ॥

(ಆ ಸಮುದ್ರ ಮಥನಕಾಲದಲ್ಲಿ) ಉಚ್ಚೈಃಶ್ರವಾಃ ಉಚ್ಚೈಃಶ್ರವ ಎಂದು ನಾಮಃ=ಪ್ರಸಿದ್ಧವಾದ ತುರಂಗವ ಕುದರೆಯು ಅಭೂತ್= ಹುಟ್ಟಿತು ತಥೈವ=ಅದರಂತೆಯೇ ಐರಾವತನಾಮಧೇಯಃ = ಐರಾವತ ಎಂಬ ಆನೆ ಅಭೂತ್=ಹುಟ್ಟಿತು ಚ=ಮತ್ತು ಅನ್ಯೇ=ಇನ್ನುಳಿದ ದಿಕ್ಪಾಲಗಜಾಃ=ದಿಕ್ಕುಗಳನ್ನು ರಕ್ಷಿಸುವ ಆನೆಗಳು ಬಭೂವುಃ=ಆದವು ತಥೈವ=ಅದರಂತೆಯೇ ವರಂ=ಶ್ರೇಷ್ಠವಾದಂತಹ ಅಪ್ಸಾರಸಾಂ=ಅಪ್ಸರಾಸ್ತ್ರೀಯರ ಸಹಸ್ರಂ=ಸಹಸ್ರವು (೭ ಸಾವಿರ ಜನ ಅಪ್ಸರಾಸ್ತ್ರೀಯರು) ಅಭೂತ್=ಹುಟ್ಟಿತು (ಹುಟ್ಟಿದರು)

ತಥಾಯುಧಾನ್ಯಾಭರಣಾನಿಚೈವ ದಿವೌಕಸಾಂ ಪಾರಿಜಾತಸ್ತರುಶ್ಚ ।
ತಥೈವಸಾಕ್ಷಾತ್ಸುರಭಿರ್ನಿಶೇಶೋ ಬಭೂವತತ್ಕೌಸ್ತುಭಂ ಲೋಕಸಾರಮ್॥ ॥ ೨೦ ॥

ತಥಾಏವ=ಅದರಂತೆಯೇ, ಆಯುಧಾನಿ= (ಅನೇಕ) ಆಯುಧಗಳು, ಚ=ಮತ್ತು ಆಭರಣಾನಿ=ಆಭರಣಗಳು, (ಬಭೂವುಃ=ಹುಟ್ಟಿದವು.) ಚ=ಮತ್ತು ದಿವೌಕಸಾಂ=ದೇವತೆಗಳ ತರುಃ=ವೃಕ್ಷವಾದಂಥ ಪಾರಿಜಾತಶ್ಚ=ಪಾರಿಜಾತ ವೃಕ್ಷವೂ ಸಹ, ಬಭೂವ ಹುಟ್ಟಿತು. ತಥೈವ=ಅದರಂತೆಸಾಕ್ಷಾತ್=ಮುಖ್ಯವಾಗಿ ಸುರಭಿಃ=ಕಾಮಧೇನುವು ಬಭೂವ = ಹುಟ್ಟಿತು. ನಿಶೇಃಶಃ=ರಾತ್ರಿಗೆ ಅಧಿಪತಿಯಾದ ಚಂದ್ರನು ಬಭೂವ=ಹುಟ್ಟಿದನು. (ನಂತರದಲ್ಲಿ) ಲೋಕಸಾರಂ=ಸರ್ವ ಜಗತ್ತಿನಲ್ಲಿ ಶ್ರೇಷ್ಠವಾದಂತಹ ತತ್=ಆ ಪ್ರಸಿದ್ಧವಾದ ಕೌಸ್ತುಭಂ=ಕೌಸ್ತುಭಮಣಿಯು ಬಭೂವ=ಹುಟ್ಟಿತು.

ಅಥೇಂದಿರಾ ಯದ್ಯಪಿ ನಿತ್ಯದೇಹಾ ಬಭೂವ ತತ್ರಾಪತಯಾ ಸ್ವತನ್ವಾ ।
ತತೋ ಭವಾನ್ ದಕ್ಷಿಣಬಾಹುನಾಸುಧಾಕಮಂಡಲುಂ ಕಲಶಂಚಾಪರೇಣ ॥
ಪ್ರಗೃಹ್ಯ ತಸ್ಮಾನ್ನಿರಗಾತ್ಸಮುದ್ಧನ್ವಂತರಿರ್ನಾಮ ಹರಿನ್ಮಣಿದ್ಯುತಿಃ ॥ ೨೧ ॥

ಯದ್ಯಪಿ=ವಸ್ತು ತಸ್ತು, ಇಂದಿರಾ=ಲಕ್ಷ್ಮೀದೇವಿಯು ನಿತ್ಯದೇಹಾ=ನಿತ್ಯವಾದ ದೇಹ ಉಳ್ಳವರು. (ಅದರಿಂದ ಅವರಿಗೆ ಉತ್ಪತ್ತ್ಯಾದಿಗಳು ಇಲ್ಲ. ಆದರೂ ಸಹ)ಅಥ=ಕೌಸ್ತುಭಮಣಿಯು ಬಂದ ನಂತರ ತತ್ರ=ಆ ಸಮುದ್ರ ಮಥನ ಕಾಲದಲ್ಲಿ ಅವರಿಗೆ ಉತ್ಪತ್ತ್ಯಾದಿಗಳು ಇಲ್ಲ. ಆದರೂ ಸಹ)ಅಥ=ಕೌಸ್ತುಭಮಣಿಯು ಬಂದ ನಂತರ ತತ್ರ=ಆ ಸಮುದ್ರ ಮಥನ ಕಾಲದಲ್ಲಿ ಪತಯಾ=ಇನ್ನೊಂದಾದ ಸ್ವತನ್ವಾ=ತನ್ನ ರೂಪದಿಂದ. ಬಭೂವ=ಅವತರಿಸಿದರು (ಪ್ರಾದುರ್ಭೂತರಾದರು) ತತಃ=ಅನಂತರ ದಲ್ಲಿ ಭವಾನ್=ತಾವು ದಕ್ಷಿಣ ಬಾಹುನಾ=ಬಲಕೈಯಿಂದ ಸುಧಾಕಮಂಡಲುಂ=ಅಮೃತವನ್ನು ಬಡಿಸಲು(ವಿತರಿಸಲು)ಕಮಂಡಲ ಪಾತ್ರವನ್ನು ಚ=ಮತ್ತು ಅಪರೇಣ=ಇನ್ನೊಂದು (ಎಡ) ಕೈಯಿಂದ ಕಲಶಂ=ಅಮೃತಪೂರ್ಣ ಕಲಶವನ್ನು ಪ್ರಗೃಹ್ಯ= ಹಿಡಿದುಕೊಂಡು ಹರಿನ್ಮಣಿದ್ಯುತಿಃ=ಇಂದ್ರ ನೀಲಮಣಿಯ ಕಾಂತಿಯಂತೆ ಕಾಂತಿಯುಳ್ಳಂತಹ ಧನ್ವಂತರಿಃ=ಧನ್ವಂತರಿ ಎಂದು ನಾಮ=ಪ್ರಸಿದ್ಧನಾಗಿ ತಸ್ಮಾತ್=ಆ ಸಮುದ್ರದ ದೆಶೆಯಿಂದ ನಿರಗಾತ್=ಅವಿರ್ಭೂತರಾದರಿ (ಇಲ್ಲಿ ಕಲಶಕಮಂ ಡಲು ಶಬ್ದಗಳಿಗೆ ಅರ್ಥವನ್ನು ಶ್ರೀ ಸೋದಾಗುರುರಾಜರ ವ್ಯಾಖ್ಯಾನಾನುಗುಣವಾಗಿ ಮಾಡಿದೆ.)

ತತೋಭವದ್ಧಸ್ತಗತಂ ದಿತೇಃ ಸುತಾಃ ಸುಧಾಭರಂ ಕಲಶಂಚಾಪಜಹ್ರುಃ ।
ಮುಕ್ತಂ ತ್ವಯಾ ಶಕ್ತಿಮತಾಪಿದೈತ್ಯಾನ್ ಸತ್ಯಚ್ಯುತಾನ್ಕಾರಯಿತುಂ ವಧಾಯ ॥ ೨೨ ॥

ತತಃ=ಅವತಾರಾನಂತರ ದಿತೇಃ=ದಿತಿ ದೇವಿಯ ಸುತಾಶ್ಚ=ಮಕ್ಕಳಾದ ದೈತ್ಯರು ಮಾತ್ರ ದೈತ್ಯಾನ್=ದೈತ್ಯರನ್ನು ಸತ್ಯಚ್ಯುತಾನ್=ಸಮುದ್ರಮಥನಕ್ಕಿಂತ ಮೊದಲು ಹೇಳಿದ ತಮ್ಮ ವಾಕ್ಯದಿಂದ ವಿರುದ್ಧವಾದ ವ್ಯಾಪಾರ ಉಳ್ಳವರನ್ನಾಗಿ ಕಾರಯಿತುಂ=ಮಾಡಲು ಶಕ್ತಿಮತಾಪಿ=(ಅವರನ್ನು ನಿಗ್ರಹಿಸಲು)ಶಕ್ತಿ ಉಳ್ಳವನಾದರೂ ಕೂಡ ತ್ವಯಾ=ನಿನ್ನಿಂದ ಮುಕ್ತಂ= ಬಿಡಲ್ಪಟ್ಟ ಸುಧಾಭರಂ= ಅಮೃತದಿಂದ ತುಂಬುವ ಕಲಶಂ=ಕಲಶ (ಪಾತ್ರೆಯನ್ನು) ಅಪಜಹ್ರುಃ= ಅಪಹರಿಸಿದರು. (ಶ್ರೀ ಹರಿಯು ಧನ್ವಂತರಿ ರೂಪದಿಂದ ಅಮೃತಕಲಶವನ್ನು ತಂದನು. ನ್ಯಾಯ ಪ್ರಕಾರವಾಗಿ ದೇವತೆಗಳು ಮತ್ತು ದೈತ್ಯರು ಇಬ್ಬರೂ ಸೇರಿ ಅದರಲ್ಲಿ ಭಾಗವನ್ನು ಹೊಂದಬೇಕಿತ್ತು. ಅದರಂತೆ ಸಮುದ್ರ ಮಥನಕ್ಕಿಂತ ಮೊದಲು ಒಪ್ಪಿಗೆ ಆಗಿದ್ದಿತು ಅಲ್ಲವೇ? ಅವರೆ ದೈತ್ಯರು ಅದಕ್ಕೆ ವಿರುದ್ಧವಾಗಿ ಈ ಅಮೃತಕಲಶವನ್ನು ತಾವೇ ಪಾನಮಾಡಲು ಅಪಹರಿಸಿದರು. ಅದರಿಂದ ಅವರು ಸತ್ಯದಿಂದದೂರಾದರು. ಅದಕ್ಕೆ ಅವರು ಅಮೃತಪಾನಕ್ಕೆ ಅನರ್ಹರು. ವಧೆಕ್ಕೆ ಯೋಗ್ಯರು ಎಂದು ಆ ದೈತ್ಯರ ಸ್ವಭಾವ ಕರ್ಮಾನುಸಾರವಾಗಿ ಮಾಡುವದಕ್ಕೋಸ್ಕರವಾಗಿ ಆ ಅಮೃತಕಲಶಾಪಹರಣವನ್ನು ನಿಗ್ರಹಿಸಲು ಶ್ರೀ ಹರಿಗೆ ಸಾಮರ್ಥ್ಯವಿದ್ದರೂ ಸಹ ಅಪಹಾರವಾಗುವವರಗೆ ಸುಮ್ಮನೆ ಇದ್ದನು.)

ತತೋಭವಾನನುಪಮಮುತ್ತಮಂವಪುರ್ಬಭೂವದಿವ್ಯ ಪ್ರಮುದಾತ್ಮಕಂ ತ್ವರನ್ ।
ಶ್ಯಾಮಂ ನಿತಂಬಾರ್ಪಿತ ರತ್ನಮೇಖಲಂ ಜಾಂಬೂನದಾಭಾಂಬರಭೃತ್ಸುಮಧ್ಯಮಮ್ ॥೨೩॥

ತತಃ=(ಆ ದೈತ್ಯರು ಅಮೃತ ಕಲಶವನ್ನು ಅಪಹರಿಸಿದ್ದರಿಂದ, ಅಥವಾ ಅಪಹರಿಸಿದ ನಂತರ) ಭವಾನ್=ತಾವು (ನೀನು) ತ್ವರನ್=ಆ ಕ್ಷಣದಲ್ಲಿ ಅನುಪಮಂ=ಅಸದೃಶವಾವು (ಲಕ್ಷ್ಮೀರೂಪಕ್ಕಿಂತಲೂ) ಉತ್ತಮಂ=ಶ್ರೇಷ್ಠವಾದ, ಶ್ಯಾಮಂ= ಯೌವನಾವಸ್ಥಾ ಇರುವ ನಿತಂಬಾರ್ಪಿತರತ್ನಮೇಖಲಮ್=ಟೊಂಕದಲ್ಲಿ ಧರಿಸಲ್ಪಟ್ಟ ರತ್ನದ ಪಟ್ಟಿಯುಳ್ಳಂತಹ, ಜಾಂಬೂ ನದಾಂಭಾಂಬರಭೃತ್=ಸುವರ್ಣದ ಕಾಂತಿಯಂತೆ ಕಾಂತಿವುಳ್ಳ ವಸ್ತ್ರವನ್ನು ಧರಿಸಿದ, ಸುಮಧ್ಯಮಂ=ಸಮೀಚೀನವಾದ ಕಟಿ ಭಾಗ ಉಳ್ಳಂತೆಹ, ಪ್ರಮುದಾತ್ಮಕಂ=ಸ್ತ್ರೀರೂಪವಾದ ವಪುಃ=ಅವತಾರ ಉಳ್ಳವನು. ಬಭೂವ=ಆಗೋಣಾಗಿದೆ (ಆಗಿರುವಿ)

(ಅಂದರೆ ನೀನು ಆ ಕಾಲದಲ್ಲಿ ಅತಿ ಶ್ರೇಷ್ಠವಾದ ಮೋಹಿನೀ ಎಂಬ ಸ್ತ್ರೀರೂಪವನ್ನು) ಧರಿಸಿರುವಿ. ಆ ಸ್ತ್ರೀರೂಪವನ್ನೇ ವರ್ಣಿಸುತ್ತಾರೆ ಮುಂದಿನ ಶ್ಲೋಕದಿಂದ–

ಬೃಹನ್ನಿತಂಬಂಕಲಶೋಪಮಸ್ತನಂ ಸತ್ಪುಂಡರೀಕಾಯತನೇತ್ರಮುಜ್ವಲಮ್ ।
ಸಮಸ್ತಸಾರಂ ಪರಿಪೂರ್ಣಸದ್ಗುಣಂ ದೃಷ್ಟ್ವೈವ ತತ್ಸಂಮುಮುಹುಃ ಸುರಾರಯಃ ॥ ೨೪ ॥

ಬೃಹನ್ನಿತಂಬಂ=ವಿಸ್ತೀರ್ಣವಾದ ಕಟಿಪಶ್ಚಾತ್ಭಾಗ ಉಳ್ಳಂತಹ ಕಲಶೋಪಮಸ್ತನಂ=ಕಲಶದಿಂದ ಸದೃಶವಾದ ಸ್ತನಗಳುಳ್ಳಂತಹ ಸತ್ಪುಂಡರೀಕಾಯತನೇತ್ರಂ=ಸಮೀಚೀನವಾದ ಕಮಲದಂತೆ ವಿಸ್ತೃತವಾದ ಕಣ್ಣುಗಳುಳ್ಳಂತಹ ಉಜ್ವಲಂ=ತೇಜೋಮಯವಾದಂತಹ ಸಮಸ್ತಸಾರಂ=ಸಕಲವಸ್ತುಗಳಲ್ಲಿ ಶ್ರೇಷ್ಠವಾದಂತಹ ಪರಿಪೂರ್ಣಸದ್ಗುಣಂ=ಅತ್ಯಂತವಾಗಿ ಪೂರ್ಣಗಳಾದ ನಿರ್ದುಷ್ಟ ಗುಣಗಳುಳ್ಳಂತಹ ತತ್=ಆಸ್ತ್ರೀರೂಪವನ್ನು ಸುರಾರಯಃ=ದೇವತೆಗಳ ವೈರಿಗಳಾದ ಅಸುರರು ದೃಷ್ಟ್ವೈವ=ನೋಡುವ ಮಾತ್ರದಿಂದ ಸಂಮುಮುಹುಃ=ಅತ್ಯಂತ ಮೋಹವನ್ನು ಹೊಂದಿದರು.

ಪರಸ್ಪರಂ ತೇ ಮೃತಹೇತುತೋಖಿಲಾಃ ವಿರುದ್ಧ್ಯಮಾನಾಃ ಪ್ರದದುಸ್ಮತೇ ಕರೇ ।
ಸಮಂ ಸುಧಾಯಾಃ ಕಲಶಂ ವಿಭಜ್ಯ ನಿಪಾಯಯಾಸ್ಮಾನಿತಿ ವಂಚಿತಾಸ್ತ್ವಯಾ ॥ ೨೫ ॥

ಅಮೃತಹೇತುತಃ=ಅಮೃತಕ್ಕೋಸ್ಕರ ಪರಸ್ಪರಂ=ಪರಸ್ಪರವಾಗಿ ವಿರುದ್ಧ್ಯಮಾನಾಃ=ವಿರೋಧವುಳ್ಳ ಅಖಿಲಾಃ=ಎಲ್ಲ ತೇ=ಆ ಅಸುರರು ಸುಧಾಯಾಃ=ಆ ಅಮೃತದ ಕಲಶಂ=ಕಲಶವನ್ನು ಸಮಂ=ಸಮಾನಾಗಿ ವಿಭಜ್ಯ=ಭಾಗಮಾಡಿ ಅಸ್ಮಾನ್=ನಮ್ಮನ್ನು ನಿಪಾಯಯ=ಕುಡಿಸು (ಅಂದರೆ ನಮ್ಮೆಲ್ಲರಿಗೂ ಅಮೃತವನ್ನು ಕುಡಿಯಲು ಸಮಾನಾಗಿ ಹಂಚಿಕೊಡು) ಇತಿ=ಹೀಗೆಂದು ತೇ=ನಿನ್ನ ಕರೇ ಕೈಯಲ್ಲಿ ಕಲಶಂ=ಅಮೃತಕಲಶವನ್ನು ಪ್ರದದುಃಸ್ಮ=ಕೊಟ್ಟರು. ತೇ=ಆ ದೈತ್ಯರು ತ್ವಯಾ=ನಿನ್ನಿಂದ ವಂಚಿತಾಃ=ಮೋಸಗೊಂಡರು.

ಧರ್ಮಚ್ಛಲಂ ಪಾಪಜನೇಷು ಧರ್ಮ ಇತಿತ್ವಯಾಜ್ಞಾಪಯಿತುಂ ತದೋಕ್ತಂ ।
ಯದ್ಯತ್ಕೃತಂವೋ ಭವತಾಂ ಯದೀಹ ಸಂವಾದ ಏವೋ ದ್ವಿಭಜೇಸುಧಾಮಿಮಾಂ ॥ ೨೬ ॥

ಧರ್ಮಚ್ಛಲಂ=ಧರ್ಮರಕ್ಷಣೆಗೋಸ್ಕರ ಮೋಸವು ಪಾಪಜನೇಷು=ದುಷ್ಟಜನರಲ್ಲಿ ಧರ್ಮಃ=ಧರ್ಮವು ಇತಿ=ಎಂಬುದಾಗಿ ಜ್ಞಾಪಯಿತುಂ=ತಿಳಿಸುವದಕ್ಕೋಸ್ಕರ ತದಾ=ಆಗ ಯದ್ಯತ್=ಯಾವುದು ಯಾವುದು ವಃ=(ಮಯಾ)ನನ್ನಿಂದ ಕೃತಂ=ಮಾಡಲ್ಪಡುತ್ತದೋ ತತ್=ಅದೆಲ್ಲವೂ ಯದಿ=ಒಂದು ವೇಳೆ ಭವತಾಂ=ನಿಮಗೆ ಸಂವಾದೇ ಏವ=ಅಭಿಪ್ರೇತವಾದದ್ದೇ ಆಗುವುದಾದರೆ ಇಮಾಂ=ಈ ಸುಧಾಂ=ಅಮೃತವನ್ನು ಉದ್ವಿಭಜೇ=ಹಂಚುವೆನು ಇತಿ=ಎಂಬುದಾಗಿ ತ್ವಯಾ=ನಿನ್ನಿಂದ ಉಕ್ತಂ=ಹೇಳಲ್ಪಟ್ಟಿತು.

ಯಥೇಷ್ಟತೋಹಂ ವಿಭಜಾಮಿ ಸರ್ವಥಾ ನವಿಶ್ವಸಧ್ವಂಮಯಿ ಕೇನಚಿತ್ ಕ್ವಚಿತ್ ।
ಇತಿ ಪ್ರಹಸ್ಯಾಭಿಹಿತಂ ನಿಶಮ್ಯ ಸ್ತ್ರೀಭಾವಮುಗ್ಧಾಸ್ತು ತಥೇತಿ ತೇ ವದನ್ ॥ ೨೭ ॥

ಅಹಂ=ನಾನು ಯಥೇಷ್ಟತಃ=ಇಷ್ಟಬಂದಂತೆ ವಿಭಜಾಮಿ=ಹಂಚುತ್ತೇನೆ. ಸರ್ವಥಾ=ಯಾವರೀತಿಯಿಂದಲೂ ಕೇ ಚಿತ್=ಯಾವಕಾರಣದಿಂದಲೂ ಕ್ವಚಿತ್=ಸ್ವಲ್ಪವೂ ಕೂಡ ಮಯಿ=ನನ್ನಲ್ಲಿನ ವಿಶ್ವಸಧ್ವಂ=ವಿಶ್ವಾಸಹೊಂದಬೇಡಿ ಇತಿ=ಎಂಬು ದಾಗಿ ಪ್ರಹಸ್ಯ=ನಗುತ್ತಾ ತ್ವಯಾ=ನಿನ್ನಿಂದ ಅಭಿಹಿತಂ=ಹೇಳಿದ್ದನ್ನು ನಿಶಮ್ಯ=ಕೇಳಿಯೂ ಸ್ತ್ರೀಭಾವಮುಗ್ಧಾಃ=ಸ್ತ್ರೀ ಸ್ವಭಾವಕ್ಕೆ ಮರುಳರಾದ ತೇ ತು=ಆ ದೈತ್ಯರಾದರೂ ತಥಾ ಇತಿ=ಹಾಗೆ ಆಗಲೆಂದು ಅವದನ್=ಹೇಳಿದರು.

ತತಶ್ಚ ಸಂಸ್ಥಾಪ್ಯ ಪೃಥಕ್ ಸುರಾಸುರಾಂಸ್ತದಾತಿರೂಪೋಚ್ಚಲಿತಾನ್ ಸುರೇತರಾನ್ ।
ಸರ್ವಾನ್ ಭವದ್ದರ್ಶನ ಈಕ್ಷ್ಯ ಲಜ್ಜಿತಾಸ್ಮ್ಯಹಂ ದೃಶೋ ವೀಲಯತೇತ್ಯವೋಚಃ ॥ ೨೮ ॥

ತತಶ್ಚ=ಅನಂತರ ತ್ವಂ=ನೀನು ತವಾತಿರೂಪೋಚ್ಚಲಿತಾನ್=ನಿನ್ನ ಅತ್ಯಂತ ಲಾವಣ್ಯದಿಂದ ಉದ್ವಿಗ್ನರಾದ ಸು

ಸುರಾನ್ ದೇವದೈತ್ಯರನ್ನು ಪೃಥಕ್=ಬೇರೆಯಾಗಿ ಸಂಸ್ಥಾಪ್ಯ=ಕೂಡಿಸಿ ಭವದ್ದರ್ಶನಃ=ನಿನ್ನನ್ನು ನೋಡತಕ್ಕ ಸರ್ವಾನ್-ಸುರೇತರಾನ್=ಎಲ್ಲಾ ದೈತ್ಯರನ್ನು ಈಕ್ಷ್ಯ=ನೋಡಿ ಅಹಂಲಜ್ಜಿತಾ=ನಾನು ನಾಚಿಕೆಯುಳ್ಳವಳಾಗಿದ್ದೇನೆ. ದೃಶಃ=ಕಣ್ಣನ್ನು ನಿಮೀಲಯತ=ಮುಚ್ಚಿಕೊಳ್ಳಿ ಇತಿ=ಎಂಬುದಾಗಿ ಅವೋಚಃ=ಹೇಳಿದಿ.

ನಿಮೀಲಿತಾಕ್ಷೇಷ್ವಸುರೇಷು ದೇವತಾನ್ಯಪಾಯಯಃ ಸಾಧ್ವಮೃತಂ ತತಃ ಪುಮಾನ್ ।
ಕ್ಷಣೇನ ಭೂತ್ವಾ ಪಿಬತಃ ಸುಧಾಂ ತಿರೋ ರಾಹೋರ್ನ್ಯಕೃಂತಶ್ಚ ಸುದರ್ಶನೇನ ॥ ೨೯ ॥

ಅಸುರೇಷು=ದೈತ್ಯರು ನಿಮೀಲತಾಕ್ಷೇಷುಸತ್ಸು=ಕಣ್ಣು ಮುಚ್ಚುತ್ತಿರಲು ತ್ವಂ=ನೀನು ದೇವತಾಃ=ದೇವತೆಗಳನ್ನು ಅಮೃತಂ=ಅಮೃತವನ್ನು ಸಾಧು=ಚೆನ್ನಾಗಿ ನ್ಯಪಾಯಯಃ=ಕುಡಿಸಿದಿ ತತಃ=ಅನಂತರ ತ್ವಂ=ನೀನು ಕ್ಷಣೇನ=ಒಂದೇಕ್ಷಣದಲ್ಲಿ ಪುಮಾನ್ಭೂತ್ವಾ=ಪುರುಷರೂಪವನ್ನು ಧರಿಸಿ ಸುಧಾಂ=ಅಮೃತವನ್ನು ಪಿಬತಃ=ಕುಡಿಯುತಕ್ಕ ರಾಹೋಃ=ರಾಹುವಿನ ಶಿರಃ=ತಲೆಯನ್ನು ಕ್ಷಣೇನ=ಒಂದೇಕ್ಷಣದಲ್ಲಿ ಸುದರ್ಶನೇನ=ಸುದರ್ಶನಚಕ್ರದಿಂದ ನ್ಯಕೃಂತಃ=ತುಂಡರಿಸಿದಿ.

ತೇನಾಮೃತಾರ್ಥಂ ಹಿ ಸಹಸ್ರಜನ್ಮಸು ಪ್ರತಪ್ಯ ಭೂಯಸ್ತಪ ಆರಿತೋ ವರಃ ।
ಸ್ವಯಂಭುವಸ್ತಸ್ಯ ಭವಾನ್ ಕರೇಸ್ಯ ಬಿಂದುಂ ಸುಧಾಂಪ್ರಾಸ್ಯ ಶಿರೋ ಜಹಾರ ॥ ೩೦ ॥

ಹಿ=ಯಾವಕಾರಣದಿಂದ ತೇನ=ಆರಾಹುವಿನಿಂದ ಅಮೃತಾರ್ಥಂ=ಅಮೃತಪ್ರಾಪ್ತಿಗೋಸ್ಕರ ಭೂಯಃ=ಬಹಳೆವಾದ ತಪಃ=ತಪಸ್ಸನ್ನು ಸಹಸ್ರಜನ್ಮಸು=ಸಾವಿರಜನ್ಮಗಳಲ್ಲಿ ಪ್ರತಪ್ಯ=ಮಾಡಿ ವರಃ=ವರವು ಆರಿತಃ=ಹೊಂದಲ್ಪಟ್ಟಿತೊ ಅತಃ=ಆ ಕಾರಣದಿಂದ ಭವಾನ್=ನೀನು ಅಸ್ಯ=ಈರಾಹುವಿನ ಕರೇ=ಕೈಯಲ್ಲಿ ಬಿಂದುಂ=ಬಿಂದುಪರಿಮಿತವಾದ ಸುಧಾಂ=ಅಮೃತವನ್ನು ಪ್ರಾಸ್ಯ=ಹಾಕಿ ತಸ್ಯ=ಆರಾಹುವಿನ ಶಿರಃ=ತಲೆಯನ್ನು ಜಹಾರ=ತುಂಡರಿಸಿದೆ.

ಶಿರಸ್ತು ತಸ್ಯಗ್ರಹತಾಮುವಾಪ ಸುರೈಸ್ಸಮಾವಿಷ್ಟಮಥೋ ಸಬಾಹು ।
~~ಕ್ಷಿಪ್ತಃ ಕಬಂಧೋಽಥ ಶುಭೋದಸಾಗರೇ ತ್ವಯಾ ಸ್ಥಿತೋದ್ಯಾಪಿ ಹಿ ತತ್ರ ಸಾಮೃತಃ ॥ ೩೧ ॥~~

(ಪರಮಾತ್ಮನು ರಾಹುವಿನ ತಲೆತುಂಡರಿಸಿದ ಮೇಲೆ) ತಸ್ಯ ಶಿರಸ್ತು=ಆರಾಹುವಿನ ತಲೆಯು ಸಬಾಹು ಸತ್=ಭುಜದಿಂದ ಕೂಡಿದ್ದಾಗಿ ಸುರೈಃ ಸಮಾವಿಷ್ಟಂ ಸತ್=ದೇವತೆಗಳಿಂದ ಕೂಡಿದ್ದಾಗಿ ಗ್ರಹತಾಂ=ಗ್ರಹದ ಸ್ವರೂಪವನ್ನು ಉವಾಪ=ಹೊಂದಿತು ಅಥ=ಅನಂತರ ಕಬಂಧಃ=ಶಿರಸ್ಸಿನ ಕೆಳಗಿನಭಾಗವು ತ್ವಯಾ=ನಿನ್ನಿಂದ ಶುಭೋದಸಾಗರೇ=ಶುಭೋದ ಎಂಬ ಸಮುದ್ರದಲ್ಲಿ ಕ್ಷಿಪ್ತಃಸನ್=ಎಸೆಯಲ್ಪಟ್ಟದ್ದಾಗಿ ತತ್ರ=ಆಶುಭೋದಸಾಗರದಲ್ಲಿ ಸಾಮೃತಃ=ಅಮೃತದಿಂದ ಸಹಿತವಾಗಿ ಅದ್ಯಾಪಿ=ಇಂದಿಗೂಕೂಡ ಸ್ಥಿತಃ=ಇಡಲ್ಪಟ್ಟಿದೆ.

ಅಥಾಸುರಾಃ ಪ್ರತ್ಯಪತನ್ನುದಾಯುಧಾಃ ಸಮುಸ್ತಶಸ್ತೇಚ ಹತಾಸ್ತ್ವಯಾ ರಣೇ
ಕಲಿಸ್ತು ಸಬ್ರಹ್ಮವರಾದ ಜೇಯೋ ಹ್ಯಜೈತೇ ಭವಂತಂ ಪುರುಷೇಷು ಸಂಸ್ಥಿತಃ ॥ ೩೨ ॥

ಅಥ=ಪರಮಾತ್ಮನು ದೇವತೆಗಳಿಗೆ ಅಮೃತ ಹಂಚಿದ ಮೇಲೆ ಅಸುರಾಃ=ದೈತ್ಯರು ಉದಾಯುಧಾಃಸಂತಃ=ಮೇಲಕೆತ್ತಿದ ಶಸ್ತ್ರಗಳುಳ್ಳವರಾಗಿ ಪ್ರತ್ಯಪತನ್=ನಿನ್ನಮೇಲಕ್ಕೆ ಬಿದ್ದರು. ತೇ ಸಮಸ್ತಶೋಽಪಿ=ಆ ಎಲ್ಲಾ ಅಸುರರೂ ಕೂಡ ತ್ವಯಾ=ನಿನ್ನಿಂದ ರಣೇ=ಯುದ್ದದಲ್ಲಿ ಹತಾಃ-ಕೊಲ್ಲಲ್ಪಟ್ಟರು. ಬ್ರಹ್ಮವರಾತ್=ಚತುರ್ಮುಖದೇವರ ವರಾದ್=ವರದಿಂದ ಯಃ=ಯಾವ ಕಲಿಯು ಭವಂತಂ ಹ್ಯಜೈತೇ=ನಿನ್ನನ್ನು ಹೊರತಾಗಿ ಅಜೇಯಃ=ಬೇರೆ ಯಾರಿಂದಲೂ ಸೋಲಿಲ್ಲದವನು (ಅಂದರೆ ಸ್ವತಂತ್ರವಾಗಿ ಕಲಿಯನ್ನೂ ನಿಗ್ರಹಿಸತಕ್ಕವನು ಶ್ರೀಹರಿಯು. ಭಗವಂತನ ಆಜ್ಞಾದಿಂದ ಶ್ರೀ ವಾಯುದೇವರು ಕಲಿಯನ್ನೂ ನಿಗ್ರಹಿಸುತ್ತಾರೆ.ಕಲಿಜಯವಾದರೂ ಪರಮಾತ್ಮದ ಪ್ರಸಾದದಿಂದಲೆ ಮತ್ತಾವುದರಿಂದಲೂ ಅಲ್ಲ. ಆದ್ದರಿಂದ ಪ್ರತ್ಯೇಕ ವಿವರಿಸಿಲ್ಲ] ಸಃ=ಆ ಕಲಿಸ್ತು=ಕಲಿಯಾದರೂ ಪುರುಷೇಷು=ರುದ್ರ ಪರ್ಯಂತ ಎಲ್ಲಾ ಜೀವರಲ್ಲಿ ಸಂಸ್ಥಿತಃ=ಚೆನ್ನಾಗಿ ವಾಸವಾಗಿದ್ದಾನೆ.

ತಸ್ಯಾರ್ಧದೇಹಾತ್ ಸಮುಭೂದಲಕ್ಷ್ಮೀಸ್ತತ್ಪುತ್ರಕಾ ದೋಷಗಣಾಶ್ಚ ಸರ್ವಶಃ ।
ಅಥೇಂದಿರಾ ವಕ್ಷಸಿ ತೇ ಸಮಾಸ್ಥಿತಾ ತ್ವತ್ಕಂಠಗಂ ಕೌಸ್ತುಭಮಾಸ ಧಾತಾ ॥ ೩೩ ॥

ತಸ್ಯೈ=ಆ ಪೂರ್ವೋಕ್ತ ಕಲಿಗೆ ಅಲಕ್ಷ್ಮೀಃ=ಅಲಕ್ಷ್ಮಿಯು ಅರ್ಧದೇಹಾ=ಹೆಂಡತಿಯು ಸಮಭೂತ್=ಆದಳು. ಸರ್ವಶಃ=ದೋಷಗಣಾಃ=ಎಲ್ಲಾ ದೋಷಾಭಿಮಾನಿಗಳಾದ ದೈತ್ಯರು ತತ್ಪುತ್ರಕಾಃ=ಆಕಲಿ ಅಲಕ್ಷ್ಮಿಯರ ಪುತ್ರರು ಅಭೂವನ್=ಆದರು ಅಥ=ಅನಂತರ ಇಂದಿರಾ=ಲಕ್ಷ್ಮೀದೇವಿಯು ತೇ ವಕ್ಷಸಿ=ನಿನ್ನ ವಕ್ಷ ಸ್ಥಳದಲ್ಲಿ (ಪರಮಾತ್ಮನ ವಕ್ಷಸ್ಥಳದಲ್ಲಿ) ಸಮಾಸ್ಥಿತಾ=ಚೆನ್ನಾಗಿ ಆಶ್ರಯವನ್ನು ಪಡೆದಳು. ಧಾತಾ=ಬ್ರಹ್ಮದೇವರು ತ್ವತ್ಕಂಠಗಂ=ನಿನ್ನ ಕುತ್ತಿಗೆಯಲ್ಲಿರುವ ಕೌಸ್ತುಭಂ=ಕ್ಷೀರಾಬ್ಧಿಯಲ್ಲಿ ಹುಟ್ಟಿದ ಕೌಸ್ತುಭ ಮಣಿಗೆ ಅಭಿಮಾನಿಯಾಗಿ ಅಸ=(ಅದರಲ್ಲಿ) ಕುಳಿತರು. ॥ ೩೩ ॥

ಯಥಾ ವಿಭಾಗಂಚ ಸುರೇಷು ದತ್ತಾಸ್ತ್ವಯಾ ತಥಾನ್ಯೇಪಿ ಹಿ ತತ್ರ ಜಾತಾಃ ।
ಇತ್ಥಂತ್ವಯಾ ಸಾಧ್ವಮೃತಂ ಸುರೇಷು ದತ್ತಂ ಹಿ ಮೋಕ್ಷಸ್ಯ ನಿದರ್ಶನಾಯ ॥ ೩೪ ॥

ತಥಾ=ಹಿಂದೆ ಅಮೃತವನ್ನು ಕೊಟ್ಟಂತೆ ತತ್ರ=ಕಡೆಯಲ್ಪಡತಕ್ಕ ಕ್ಷೀರಸಮುದ್ರದಲ್ಲಿ ಜಾತಾಃ=ಹುಟ್ಟಿದ ಅನ್ಯೇ=ಅಪಿ ಹಿಂದೆ ವಿವರಿಸಿದ ಕೌಸ್ತುಭ, ಲಕ್ಷ್ಮೀ, ಅಮೃತ, ಇವುಗಳಿಂದ ಭಿನ್ನಗಳಾದ ಅಷ್ಟದಿಗ್ಗಜಗಳು ಪಾರಿಜಾತ ಮುಂತಾದವುಗಳೂ ಕೂಡಾ ತ್ವಯಾ=ನಿನ್ನಿಂದ ಯಥಾವಿಭಾಗಂ=ಯೋಗ್ಯತೆಗೆ ಅನುಸಾರವಾಗಿ ಸುರೇಷು=ದೇವತೆಗಳಲ್ಲಿ ದತ್ತಾಃ=ಕೊಡಲ್ಪಟ್ಟವು ಹಿ=ಈ ವಿಷಯ ಶಾಸ್ತ್ರ ಪ್ರಸಿದ್ಧ ಇತ್ಥಂ=ಈ ರೀತಿಯಾಗಿ ತ್ವಯಾ=ನಿನ್ನಿಂದ ಸುರೇಷು=ದೇವತೆಗಳಲ್ಲಿ ಮೋಕ್ಷಸ್ಯ=ನಿದರ್ಶನಾಯ:=ಮೋಕ್ಷದ ದೃಷ್ಟಾಂತಕ್ಕೋಸುಗವಾಗಿ ಸಾಧು=ಚೆನ್ನಾಗಿ ಅಮೃತಂ=ಸುಧೆಯು ದತ್ತಂ=ಕೊಡಲ್ಪಟ್ಟಿತು ಹಿ=ತಮೇವಂ ವಿದ್ವಾನ್ ಅಮೃತಇಹಭವತಿ=ಮುಂತಾದ ವೇದಪ್ರಸಿದ್ಧ.

ಭವೇದ್ಧಿ ಮೋಕ್ಷೋ ನಿಯತಂ ಸುರಾಣಾಂ ನೈವಾಸುರಾಣಾಂ ಸ ಕಥಂಚನ ಸ್ಯಾತ್ ।
ಉತ್ಸಾಹಯುಕ್ತಸ್ಯ ಚ ತತ್ಪ್ರತೀಪಂ ಭವೇದ್ಧಿ ರಾಹೋರಿವ ದುಃಖರೂಪವ್ ॥ ೩೫ ॥

ಸುರಾಣಾಂ=ದೇವತೆಗಳಿಗೆ ನಿಯತಂ=ನಿಶ್ಚಯವಾಗಿಯೂ ಮೋಕ್ಷಃ=ಮುಕ್ತಿಯು ಭವೇತ್=ಆಗುತ್ತದೆ. ಅಸುರಾಣಾಂ=ದೈತ್ಯರಿಗೆ ಮೋಕ್ಷಕ್ಕೆ ಅಯೋಗ್ಯರಾದವರಿಗೆ ಸಃ=ಆ ಮೋಕ್ಷವು ಕಥಂಚನ=ಯಾವರೀತಿಯಿಂದಲೂ (ಎಷ್ಟೂಕಷ್ಟ ಬಟ್ಟರೂ) ನಸ್ಯಾತ್=ಆಗುವಾರದು. ಹಿ=ಶ್ರುತಿಪ್ರಸಿದ್ಧ ಉತ್ಸಾಹಯುಕ್ತಸ್ಯ=ಮೋಕ್ಷ ಹೊಂದ ಬೇಕೆಂದು ಹುರುಪುಳ್ಳ ಅಯೋಗ್ಯ ಚೇತನನಿಗೆ ರಾಹೋರಿವ=ರಾಹುವಿನಂತೆ ತತ್ಪ್ರತೀಪಂ=ಸುಖರೂಪ ಮೋಕ್ಷಕ್ಕೆ ವಿರುದ್ಧವಾದ ದುಃಖರೂಪಂ=ದುಃಖವೇ ಸ್ವರೂಪವಾಗಿ ಉಳ್ಳಂಥ ಅಂಧಂತಮಸ್ಸು ಭವೇತ್=ಆಗುವುದು. ಹಿ=ಇದು ಪ್ರಸಿದ್ಧ ॥ ೩೫ ॥

ಕಲಿಸ್ತ್ವಯಂ ಬ್ರಹ್ಮವರಾದಿದಾನೀಂ ವಿಬಾಧತೇಸ್ಮಾನ್ ಸಕಲಾಃ ಪ್ರಜಾಶ್ಚ ।
ಅಜ್ಞಾನಮಿಥ್ಯಾಮತಿ ರೂಪತೋಸೌ ಪ್ರವಿಶ್ಯ ಸತ್‌ಜ್ಞಾನ ವಿರುದ್ಧ ರೂಪಃ ॥ ೩೬ ॥

ಬ್ರಹ್ಮವರಾತ್ ತು=ಚತುರ್ಮುಖಿ ಬ್ರಹ್ಮದೇವರ ವರದಿಂದಲೇ ಇದಾನೀಂ=ಈಗ ಸತ್‌ಜ್ಞಾನವಿರುದ್ಧ ರೂಪಃ=ಸಮೀಚೀನವಾದ (ಯಥಾರ್ಥ) ಜ್ಞಾನಕ್ಕೆ ವಿರುದ್ಧವಾದ ಅಯಥಾರ್ಥಜ್ಞಾನಸ್ವರೂಪನಾದ ಅಸೌ= ಪ್ರಸಿದ್ಧನಾದ ಅಯಂ ಕಲಿಃ=ಈ ಕಲಿಯು ಅಸ್ಮಾನ್=ನಮ್ಮನ್ನು ಚ=ಮತ್ತು ಸಕಲಾಃ=ಸಮಸ್ತರಾದ ಪ್ರಜಾಃ=ಪ್ರಜೆಗಳನ್ನೂ ಪ್ರವಿಶ್ಯ=ಪ್ರವೇಶಿಸಿ ಅಜ್ಞಾನಮಿಥ್ಯಾಮತಿರೂಪತಃ=ಅಜ್ಞಾನ ಮತ್ತು ಅನ್ಯಥಾ ಜ್ಞಾನಗಳಿಂದ (ಅವುಗಳನ್ನು ಪ್ರೇರೇಪಿಸುವದರಿಂದ) ವಿಬಾಧತೇ=ವಿಶೇಷವಾಗಿ ಪೀಡಿಸುತ್ತಿದ್ದಾನೆ.

ತ್ವದಾಜ್ಞಯಾ ತಸ್ಯ ವರೋಬ್ಜಜೇನ ದತ್ತಃ ಸ ಆವಿಶ್ಯ ಶಿವಂ ಚಕಾರ ।
ಕದಾಗಮಾಂಸ್ತಸ್ಯ ಕುಯುಕ್ತಿಬಾಧಾನ್ ನಹಿತ್ವದನ್ಯಶ್ಚರಿತುಂ ಸಮರ್ಥಃ ॥ ೩೭ ॥

(ಸಜ್ಜನರಿಗೆ ಪೀಡಿಸುವ ವರವನ್ನು ಬ್ರಹ್ಮದೇವರು ಕಲಿಗೆ ಹೇಗೆ ಕೊಟ್ಟರು ಎಂಬ ಪ್ರಶ್ನೆಗೆ ಈಗ ಉತ್ತರ) ತಸ್ಯ=ಆ ಕಲಿಗೆ ವರಃ=ಇಂತಹವರವು ಅಬ್ಜಜೇನ=(ನಾಭಿ) ಕಮಲದಲ್ಲಿ ಹುಟ್ಟಿದ ಬ್ರಹ್ಮದೇವರಿಂದ ತ್ವದಾಜ್ಞಯಾ=ನಿನ್ನ ಆಜ್ಞಾದಿದ (ಅಂತಹ ವರವನ್ನು ಕೊಡಲು ನೀನು ಬ್ರಹ್ಮದೇವರಿಗೆ ಆಪ್ಪಣೆ ಮಾಡಿದ್ದರಿಂದ) ದತ್ತಃ=ಕೊಡಲ್ಪಟ್ಟಿತು ಸಃ=ಆ ಕಲಿಯು ಶಿವಂ=ರುದ್ರದೇವರನ್ನು ಆವಿಶ್ಯ=ಪ್ರವೇಶಿಸಿ ಕದಾಗಮಾನ್=ದುಷ್ಟಶಾಸ್ತ್ರಗಳನ್ನು ಚಕಾರ=ಮಾಡಿದನು (ರುದ್ರದೇವರ

ಕಲಿಯು ಆದೇಶದಿಂದ ವಿಷ್ಣುಸರ್ವೋತ್ತಮತ್ವಕ್ಕೆ ವಿರುದ್ಧವಾದ (ದುಷ್ಟ) ಗ್ರಂಥಗಳನ್ನು ರಚಿಸಿದರು.) ತಸ್ಯ=ಆ ಕಲಿಯು ಕುಯುಕ್ತಿಬಾಧಾನ್=ದುಷ್ಟಯುಕ್ತಿಗಳಿಂದಾಗುವ ಪೀಡೆಯು (ಅನ್ಯಥಾಜ್ಞಾನವ)ನ್ನು ಚರಿತುಂ=ನಾಶಮಾಡಲು ತ್ವದನ್ಯಃ= ನಿನ್ನಿಂದ ಭಿನ್ನರಾದವರು ಯಾರೂ ನಹಿಸಮರ್ಥಃ=ಸಮರ್ಥರಿಲ್ಲ. (ಯದ್ಯಪಿ ವಾಯುದೇವರು ಕಲಿಯು ಬಾಧೆಯನ್ನು ನಾಶ ಮಾಡಲು ಸಮರ್ಥರು. ಆದ್ದರಿಂದಲೇ ಕಲಿಯುಗದಲ್ಲಿ ಶ್ರೀ ವಾಯುದೇವರಿಗೆ ಅವತರಿಸಲು ಶ್ರೀಹರಿಯು ಆಜ್ಞಾಪಿಸಿದ ಕಥಾ ವನ್ನು ಶ್ರೀಸುಮಧ್ವವಿಜಯಸರ್ಗದಲ್ಲಿ ಕಾಣುತ್ತೇವೆ ಆದರೆ ಶ್ರೀವಾಯುದೇವರು ಪರಮಾತ್ಮನ ಅಧೀನರಾಗಿ ಕಲಿ ಯನ್ನು ನಿಗ್ರಹಿಸುವರೇ ವಿನಹ ಸ್ವತಂತ್ರರಾಗಿ ಅಲ್ಲ, ಇಲ್ಲಿ ಸ್ವತಂತ್ರವಾಗಿ ನಿಗ್ರಹಿಸಲು ನೀನೊಬ್ಬನೇ ಸಮರ್ಥ ಎಂದು ಸ್ತುತಿಸಿ ದ್ದಾರೆ.)

ವೇದಾಶ್ಚ ಸರ್ವೇ ಸಹಶಾಸ್ತ್ರಸಂಘಾ ಉತ್ಸಾದಿತಾಸ್ತೇನ ನ ಸಂತಿ ತೇದ್ಯ ।
ತತ್ ಸಾಧು ಭೂಮಾನವತೀರ್ಯ ವೇದಾನುದ್ಧೃತ್ಯ ಶಾಸ್ತ್ರಾಣಿ ಕುರುಷ್ವ ಸಮ್ಯಕ್ ॥ ೩೮ ॥

ಸಹಶಾಸ್ತ್ರಸಂಘಾಃ=ಶಾಸ್ತ್ರ ಸಮುದಾಯಗಳಿಂದ ಸಹಿತವಾದ ಸರ್ವೇ=ಸಮಸ್ತವಾದ ವೇದಾಃ=ವೇದಗಳು ತೇನ=ಆ ಕಲಿಯಿಂದ ಉತ್ಸಾದಿತಃ=ಕಿತ್ತುಹಾಕಲ್ಪಟ್ಟವೆ. ಅದ್ಯ=ಇಂದು ತೇ=ಆ ಗ್ರಂಥಗಳು ನಸಂತಿ=ಇರುವದಿಲ್ಲ(ಅನಾದಿಕಾಲದಿಂದ ಆ ಗ್ರಂಥಗಳು ಇದ್ದರೂ ಸಹ ಅವುಗಳ ಪ್ರಯೋಜನ ಈಗ ಇಲ್ಲ.) ದುಷ್ಟ ಗ್ರಂಥಗಳಿಂದ ಕ್ಷುದ್ರಪ್ರಯೋಜನಗಳನ್ನೂ ಕೆಲವು ಸಲ ಕಂಡು ಅದರ ಪ್ರಚಾರದಿಂದಲೇ ಈ ಸದ್ಗ್ರಂಥಗಳ ಪ್ರಚಾರವು ಅಡಗಿದೆ.) ತತ್=ಆ ಕಾರಣದದೆಶೆಯಿಂದ (ತ್ವಂ=ನೀನು) ಭೂಮೌ=ಭೂಲೋಕದಲ್ಲಿ ಅವತೀರ್ಯ=ಅವತರಿಸಿ ವೇದಾನ್=ವೇದಗಳನ್ನು ಉದ್ಧೃತ್ಯ=ಉದ್ಧರಿಸಿ (ಪ್ರಕಾಶಗೊಳಿಸಿ) ಸಾಧು=ಸಮೀಚೀನವಾದ ಶಾಸ್ತ್ರಾಣಿ=ಶಾಸ್ತ್ರಗಳನ್ನು ಸಮ್ಯಕ್=ಸರಿಯಾಗಿ ಕುರುಷ್ವ=ಮಾಡು

ಅದೃಶ್ಯ ಮಜ್ಞೇಯ ಮತರ್ಕ್ಯರೂಪಂ ಕಲಿಂ ನಿಲೀನಂ ಹೃದಯೇಷ್ವಖಿಲಸ್ಯ ॥
ಸಜ್ಞಾಸ್ತ್ರ ಶಸ್ತ್ರೇಣ ನಿಹತ್ಯ ಶೀಘ್ರಂ ಪದಂ ನಿಜಂ ದೇಹಿ ಮಹಾಜನಸ್ಯ ॥ ೩೯ ॥

ಅದೃಶ್ಯಮ್=(ಅಜ್ಞಜನರಿಂದ)ನೋಡಲು ಅಶಕ್ಯನಾದ, ಅಜ್ಞೇಯಂ=ತಿಳಿಯಲು ಅಶಕ್ಯನಾದ ಅತರ್ಕ್ಯರೂಪಂ= ಯುಕ್ತಿಯಿಂದ ವಿಚಾರಿಸಲು ಅಯೋಗ್ಯನಾದ ಅಖಿಲಸ್ಯ=ಎಲ್ಲಸಜ್ಜನರ ಹೃದಯೇ=ಹೃದಯದಲ್ಲಿ ನಿಲೀನಂ=ಗುಪ್ತನಾಗಿ ಇರುವ ಕಲಿಂ=ಕಲಿಯನ್ನು ಸಜ್ಞಾಸ್ತ್ರಶಸ್ತ್ರೇಣ=ಸಮೀಚೀನವಾದ ಶಾಸ್ತ್ರಗಳೆಂಬ ಶಸ್ತ್ರಗಳಿಂದ (ಶಾಸ್ತ್ರಗಳನ್ನು ರಚಿಸಿ) ಶೀಘ್ರಂ= ಬೇಗನೆ ನಿಹತ್ಯ=ಕೊಂದು ಮಹಾಜನಸ್ಯ=ಸಜ್ಜನರಿಗೆ ನಿಜಂ=ನಿನ್ನದಾದ ಅಥವಾ ಅವರಿಗೆ ಯೋಗ್ಯವಾದ ಪದಂ=ಮೋಕ್ಷ ಎಂಬ ಸ್ಥಾನವನ್ನು ದೇಹಿ=ಕೊಡು.

ಋತೇ ಭವಂತಂ ನಹಿ ತಂ ನಿಹಂತಾ ತ್ವನೇಕ ಏವಾಖಿಲ ಶಕ್ತಿಪೂರ್ಣಃ ।
ತತೋ ಭವಂತಂ ಶರಣಂ ಗತಾವಯಂ ತಮೋ ನಿಹತ್ಯೈ ನಿಜಬೋಧ ವಿಗ್ರಹಮ್ ॥ ೪೦ ॥

ತಂ=ಆ ಕಲಿಯನ್ನು ನಿಹಂತಾ=ಸ್ವತಂತ್ರವಾಗಿ ಸರಿಯಾಗಿ ನಿಗ್ರಹಿಸತಕ್ಕವನು ಭವಂತಂ ಋತೇ=ನಿನ್ನನ್ನು ಬಿಟ್ಟು ನಹಿ=ಇಲ್ಲ. (ಏಕೆಂದರೆ) ತ್ವಂ ಏಕ ಏವ=ನೀನೊಬ್ಬನೇ ಅಖಿಲಶಕ್ತಿಪೂರ್ಣಃ=ಸರ್ವಶಕ್ತಿ ಪರಿಪೂರ್ಣನಾಗಿರುವಿ ತತಃ=ಆ ಕಾರಣದದೆಶೆಯಿಂದ ವಯಂ=ನಾವು ತಮೋನಿಹತ್ಯೈ=ಆ ಅಜ್ಞಾನದ ನಾಶಕ್ಕೋಸ್ಕರ ನಿಜಬೋಧವಿಗ್ರಹಂ=ಸ್ವಾಭಾವಿಕವಾದ ಜ್ಞಾನವೇ ಶರೀರವಾಗಿಉಳ್ಳ ಭವಂತಂ=ನಿನ್ನನ್ನು ಶರಣಂಗತಾಃ=ರಕ್ಷಕನನ್ನಾಗಿ ಮೊರೆಹೊಂದಿದ್ದೇವೆ.

ಇತೀರೀತ ಸ್ತೈರಭಯಂ ಪ್ರದಾಯ ಸುರೇಶ್ವರಾಣಾಂ ಪರಮೋಽಪ್ರಮೇಯಃ ।
ಪ್ರಾದುರ್ಬಭೂವಾಮೃತಭೂರಿಛಾಯಾಂ ವಿಶುದ್ಧ ವಿಜ್ಞಾನ ಘನ ಸ್ವರೂಪಃ ॥ ೪೧ ॥

ಇತಿ=ಈ ರೀತಿಯಾಗಿ ಈರಿತಃ = ಹೇಳಲ್ಪಟ್ಟಂತಹ (ಸ್ತುತಿಸಲ್ಪಟ್ಟಂತಹ) ಪರಮಃ = ಸರ್ವೋತ್ತಮನಾದಂತಹ ಅಪ್ರಮೇಯಃ = ಸಂಪೂರ್ಣವಾಗಿ ತಿಳಿಯಲು ಅಶಕ್ಯನಾದಂತಹ, ವಿಶುದ್ಧ ವಿಜ್ಞಾನ ಘನಸ್ವರೂಪಃ = ನಿರ್ದುಷ್ಟವಾದ ವಿಶೇಷ ವಾದ ಮತ್ತು ಪರಿಪೂರ್ಣವಾದ ಜ್ಞಾನವೇ ಸ್ವರೂಪವಾಗಿಉಳ್ಳಂತಹ ಅಮೃತಭೂಃ = ಮುಕ್ತರಿಗೆ ಆಶ್ರಯನಾದ ಶ್ರೀಹರಿಯು

ಸುರೇಶ್ವರಾಣಾಂ=ದೇವತಾ ಶ್ರೇಷ್ಠರುಗಳಿಗೆ ಅಭಯಂ = 'ನಿಮಗೆ ಭಯಬೇಡ' ನಿಮ್ಮ ಅಪೇಕ್ಷೆಯನ್ನು ಪೂರ್ಣಮಾಡುತ್ತೇನೆ ಎಂಬ ವರವನ್ನು ಪ್ರದಾಯ = ಕೊಟ್ಟು ಇಳಾಯಾಂ = ಭೂಮಿಯಲ್ಲಿ ಪ್ರಾದುರ್ಬಭೂವ = ಅವತರಿಸಿದನು.

ವಸಿಷ್ಠನಾಮಾ ಕಮಲೋದ್ಭವಾತ್ಮಜಃ ಸುತೋಸ್ಯ ಶಕ್ತಿಸ್ತನಯಃಪರಾಶರಃ ।
ತಸ್ಯೋತ್ತಮಂ ಸೋಪಿ ತಪೋsಚರದ್ಧರಿಃ ಸುತೋ ಮಮಸ್ಯಾದಿತಿ ತದ್ಧರಿರ್ದದೌ ॥ ೪೨ ॥

(ಶ್ರೀಹರಿಯು ಪರಾಶರ ಋಷಿಗಳಲ್ಲಿ ವೇದವ್ಯಾಸ ರೂಪದಿಂದ ಅವತರಿಸಿದನು ಎನ್ನುವದನ್ನು ವಿವರಿಸುತ್ತಾರೆ.)
ವಸಿಷ್ಠನಾಮಾ = ವಸಿಷ್ಠ ಎಂಬ ಋಷಿಗಳು ಕಮಲೋದ್ಭವಾತ್ಮಜಃ=ಕಮಲದಲ್ಲಿ ಹುಟ್ಟಿದ ಬ್ರಹ್ಮದೇವರ ಪುತ್ರರು. ತಸ್ಯ=ಆ ವಸಿಷ್ಠ ಋಷಿಗಳಿಗೆ ಶಕ್ತಿಃ= ಶಕ್ತಿ ಎಂಬವರು ತನಯಃ =ಮಗನು ತಸ್ಯ =ಆ ಶಕ್ತಿ ಎಂಬ ಋಷಿಗಳಿಗೆ ಪರಾಶರಃ = ಪರಾಶರ ಎಂಬವರು ಸುತಃ =ಮಗನಾಗಿದ್ದಾರೆ. ಸೋಪಿ=ಆ ಪರಾಶರ ಋಷಿಗಳೂಸಹ ಹರಿಃ =ಶ್ರೀ ಹರಿಯು ಮಮ =ನನಗೆ ಸುತಃ ಸ್ಯಾತ್ =ಮಗನಾಗಲಿ ಇತಿ =ಇಂತೆಂದು ; ಉತ್ತಮಂ =ಉತ್ತಮವಾದ ತಪಃ =ತಪಸ್ಸನ್ನು ಅಚರತ್ =ಮಾಡಿದರು ಹರಿಃ =ಶ್ರೀಹರಿಯು ತತ್ =ಆ ವರವನ್ನು ದದೌ=ಕೊಟ್ಟನು.

ಉವಾಚ ಚೈನಂ ಭಗವಾನ್ ಸುತೋಷಿತೋ ವಸೋರ್ಮದೀಯಸ್ಯ ಸುತಾಸ್ತಿ ಶೋಭನಾ ॥
ವನೇ ಮೃಗಾರ್ಥಂ ಚರತೋಸ್ಯ ವೀರ್ಯಂ ಪಪಾತ ಭಾರ್ಯಾಂ ಮನಸಾ ಗತಸ್ಯ ॥ ೪೩ ॥

(ಪರಾಶರ ಋಷಿಗಳ ತಪಸ್ಸಿನಿಂದ) ಸುತೋಷಿತಃ =ಸಂತುಷ್ಟನಾದ ಭಗವಾನ್ =ಶ್ರೀಹರಿಯು ಏನಂ= ಈ ಪರಾಶರ ಋಷಿಗಳನ್ನು ಕುರಿತು ಉವಾಚ =ಹೇಳಿದನು(ಏನೆಂದರೆ) ಮದೀಯಸ್ಯ= ನನ್ನ ಭಕ್ತನಾದ ವಸೋಃ= ವಸು ರಾಜನಿಗೆ ಶೋಭನಾ= ಸಮೀಚೀನಳಾದ ಸುತಾ= ಮಗಳು ಅಸ್ತಿ= ಇರುತ್ತಾಳೆ. (ಅವಳು ಮತ್ಸ್ಯರಾಜನ ಮಗಳು ಮತ್ಸ್ಯಗಂಧಿ ಎಂದು ಹೆಸರು ಇರುವಾಗ ಅವಳು ವಸುರಾಜನ ಮಗಳು ಹೇಗೆ ಎನ್ನುವದನ್ನು ವಿವರಿಸುತ್ತಾರೆ) ಮೃಗಾರ್ಥಂ =ಬೇಟೆಗೋಸ್ಕರ ವನೇ =ಅರಣ್ಯದಲ್ಲಿ ಚರತಃ =ಸಂಚರಿಸತಕ್ಕ ಚ =ಮತ್ತು (ಈ ರೀತಿ ಸಂಚರಿಸುವ ಕಾಲದಲ್ಲಿ) ಭಾರ್ಯಾಂ =ತನ್ನ ಹೆಂಡತಿಯನ್ನು ಮನಸಾ =ತನ್ನ ಮನಸ್ಸಿನಿಂದ ಗತಸ್ಯ =ಹೊಂದಿದಂತಹ (ಹೆಂಡತಿಯನ್ನು ಸ್ಮರಿಸಿದ) ಅಸ್ಯ =ಈ ವಸುರಾಜನ ವೀರ್ಯಂ=.ವೀರ್ಯವು ಪಪಾತ =ಬಿದ್ದಿತು

ತಚ್ಛ್ಯೇನ ಹಸ್ತೇ ಪ್ರದದೌ ಸ ತಸ್ಯೈ ದಾತುಂ ತದನ್ಯೇನ ತು ಯುದ್ಧ್ಯತೋಪತತ್ ।
ಜಗ್ರಾಸ ತನ್ಮತ್ಸ್ಯ ವಧೂರ್ಯಮಸ್ವಸುರ್ಜಲಸ್ಥಮೇನಾಂ ಜಗೃಹುಶ್ಚ ದಾಶಾಃ ॥ ೪೪ ॥

ಸಃ=ಆ ವಸುರಾಜನು ತಸ್ಯೈ=ಆ ತನ್ನ ಹೆಂಡತಿಗೆ ದಾತುಂ=ಕೊಡುವವಕ್ಕೋಸ್ಕರ ತತ್=ಆ ಬಿದ್ದ ವೀರ್ಯವನ್ನೂ ಶ್ಯೇನಹಸ್ತೇ=ಶ್ಯೇನ(ಗಿಡಗ) ಪಕ್ಷಿಗೆ ಪ್ರದದೌ=ಕೊಟ್ಟನು. ತದನ್ಯೇನ=ಇನ್ನೊಂದು ಗಿಡಗ ಪಕ್ಷಿಯಿಂದ ಯುಧ್ಯತಃ ತು=ಜಗಳ ಮಾಡುತ್ತಿರುವ ಗಿಡಗ ಪಕ್ಷಿಯಿಂದ ಅಪತತ್=ಯಮುನಾ ನದಿಯ ನೀರಿನಲ್ಲಿ ಆ ವೀರ್ಯವು ಬಿದ್ದಿತು. ಯಮಸ್ವಸುಃ=ಯಮದೇವರ ಸೋದರಿಯಾದ ಯಮುನಾ ದೇವಿಯ ಜಲಸ್ಥಂ=ನೀರಿನಲ್ಲಿ ಇರುವ ತತ್=ಆವೀರ್ಯ ವನ್ನಾ ಮತ್ಸ್ಯವಧೂಃ ಹೆಣ್ಣುಮೀನವು ಜಗ್ರಾಸ=ತಿಂದಿತು ದಾಶಸ್ಯ=ಮೀನುಗಾರರು ಏನಂ=ಈ ಹೆಣ್ಣು ಮೀನನ್ನು ಜಗೃಹುಃ=(ಮೀನಗಳನ್ನು ಬಲೆ ಹಿಡಿಯುವ ಕಾಲದಲ್ಲಿ) ಹಿಡಿದರು.

ತದ್ಗರ್ಭಿತೋsಭೂನ್ಮಿಥುನಂ ಸ್ವರಾಜ್ಞೇ ನ್ಯವೇದಯನ್ ಸೋಪಿ ವಸೋಃ ಸಮರ್ಪಯತ್॥
ಪುತ್ರಂ ಸಮಾದಾಯ ಸುತಾಂ ಸ ತಸ್ಯೈ ದದೌ ಸುತೋs ಭೂದಥ ಮತ್ಸ್ಯರಾಜಃ ॥ ೪೫ ॥

ತದ್ಗರ್ಭಿತಃ=ಆ ಹೆಣ್ಣು ಮೀನಿನ ಗರ್ಭದಿಂದ ಮಿಥುನಂ=(ಒಂದು ಗಂಡು ಇನ್ನೊಂದು ಹೆಣ್ಣು) ಹೀಗೆ ಮಕ್ಕಳ ಜೋಡಿಯು ಅಭೂತ್=ಹುಟ್ಟಿತು (ಮೀನುಗಾರರು) ಸ್ವರಾಜ್ಞೇ=ತಮ್ಮ ರಾಜ (ಮುಖಿಂಡ)ನಿಗೆ ನ್ಯವೇದಯನ್=ಹೀಗೆ ಹುಟ್ಟಿದ ಎರಡು ಮಕ್ಕಳನ್ನು ಅರ್ಪಿಸಿದರು. ಸೋಪಿ=ಆ ಮೀನುಗಾರ ಮುಖಿಂಡನು ವಸೋಃ=ತಮ್ಮ ದೇಶದ ರಾಜನಾದ ವಸುರಾಜನಿಗೆ ಸಮರ್ಪಯತ್=(ಎರಡೂ ಮಕ್ಕಳನ್ನು) ಸಮರ್ಪಿಸಿದನು. ಸಃ=ಆ ವಸುರಾಜನು ಪುತ್ರಂ=ಗಂಡು ಮಗುವನ್ನು

ಸಮಾದಾಯ=ಸ್ವೀಕರಿಸಿ ಸುತಾಂ=ಹೆಣ್ಣುಮಗುವನ್ನು ತಸ್ಮೈ=ಆ ಮೀನುಗಾರ ಮುಖಂಡನಿಗೆ ದದೌ=ಕೊಟ್ಟನು. ಅಥ=ಅನಂತರ ಸುತಃ=ಈ ಮಗನು ಮತ್ಸ್ಯರಾಜಃ=ಮತ್ಸ್ಯರಾಜ ಎಂದು ಪ್ರಸಿದ್ಧನು. ಅಭೂತ್=ಆದನು

ಕನ್ಯಾತು ಸಾದಾಶರಾಜಸ್ಯ ಸದ್ಮನ್ಯವರ್ಧತಾತೀವ ಸುರೂಪಯುಕ್ತಾ ।
ನಾಮ್ನಾಚ ಸಾ ಸತ್ಯವತೀ ತಿ ತಸ್ಯಾಂ ತವಾತ್ಮಜೋಹಂ ಭವಿತಾಸ್ಮ್ಯಜೋಪಿ ॥ ೪೬ ॥

ದಾಶರಾಜಸ್ಯ=ಮೀನುಗಾರ ರಾಜನ ಸದ್ಮನಿ=ಮನೆಯಲ್ಲಿ ಸಾತು=ಆ ಪೂರ್ವೋಕ್ತಳಾದ ಕನ್ಯಾ=ಕನ್ನಿಕೆಯು ಅತೀವ ಸುರೂಪಯುಕ್ತಾ(ಸತೀ)=ಅತ್ಯಂತ ಸುಂದರಿಯಾಗಿ ಅವರ್ಧತ=ಬೆಳೆದಳು. ನಾಮ್ನಾಚ=ಹೆಸರಿನಿಂದಾದರೂ ಸಾ=ಅವಳು ಸತ್ಯವತೀ ಇತಿ=ಸತ್ಯವತೀ ಎಂದು ಪ್ರಸಿದ್ಧಳು. ಅಜೋಪಿ=ಉತ್ಪತ್ತಿ ಇಲ್ಲದವನಾದರೂ ಸಹ ತಸ್ಯಾಂ=ಆ ಸತ್ಯವತೀ ದೇವಿಯಲ್ಲಿ ತವ=ನಿನಗೆ ಆತ್ಮಜಃ=ಮಗನು ಭವಿತಾಸ್ಮಿ=ಆಗುತ್ತೇನೆ. (ಮಗನಾಗಿ ಅವತರಿಸುತ್ತೆನೆ.)

ಇತೀರಿತಶ್ಚಕ್ರಧರೇಣ ತಾಂ ಮುನಿರ್ಜಗಾಮ ಮೌರ್ತಾಂಡಸುತಾಂ ಸಮುದ್ರಗಾಮ್ ।
ಉತ್ತಾರಯಂತೀಮಥ ತತ್ರ ವಿಷ್ಣುಃ ಪ್ರಾದುರ್ಬಭೂವಾಶು ವಿಶುದ್ಧಚಿದ್ಘನಃ ॥ ೪೭ ॥

ಇತಿ=ಈ ರೀತಿಯಾಗಿ ಚಕ್ರಧರೇಣ=ಶ್ರೀಹರಿಯಿಂದ ಈರಿತಃ=ಹೇಳಲ್ಪಟ್ಟಂತಹ ಮುನಿಃ=ಪರಾಶರ ಋಷಿಗಳು ಸಮುದ್ರಗಾಂ=(ಗಂಗೆಯು ಜೊತೆಗೆ) ಸಮುದ್ರವನ್ನು ಸೇರತಕ್ಕ ಮೌರ್ತಾಂಡಸುತಾಂ=ಸೂರ್ಯನ ಮಗಳಾದ ಯಮುನಾ ನದಿಯನ್ನು ಉತ್ತಾರಯಂತೀಂ=(ದೋಣಿಯಿಂದ) ದಾಟಿಸತಕ್ಕಂತಹ ತಾಂ=ಆ ಸತ್ಯವತೀ ದೇವಿಯನ್ನು ಕುರಿತು ಜಗಾಮ=ಹೋದರು. ಅಥ=ಅನಂತರ ವಿಶುದ್ಧ ಚಿದ್ಘನಃ=ಪರಿಪೂರ್ಣ ನಿರ್ದುಷ್ಟ ಜ್ಞಾನಸ್ವರೂಪನಾದ ವಿಷ್ಣುಃ=ಶ್ರೀಹರಿಯು ತತ್ರ=ಆ ಸತ್ಯವತೀ ದೇವಿಯಲ್ಲಿ ಆಶು=ಕೂಡಲೇ(ಲೌಕಿಕ ಮಕ್ಕಳಂತೆ ೯ ತಿಂಗಳು ಅವಕಾಶ ಹೊಂದಿ ಅಲ್ಲ) ಪ್ರಾದುರ್ಬಭೂವ=ಅವತರಿಸಿದನು.

ವಿಶೇಷ ವಿಜ್ಞಾನ ಸುಖೈಕರೂಪೋಽಪ್ಯಜೋ ಜನಾನ್ ಮೋಹಯಿತುಂ ಮೃಷೈವ।
ಯೋಷಿತ್ಸು ಪುಂಸೋಹ್ಯಜನೀವ ದೃಶ್ಯತೇ ನಜಾಯತೇ ಕ್ವಾಪಿ ಬಲಾದಿವಿಗ್ರಹಃ ॥ ೪೮ ॥

ವಿಶೇಷ ವಿಜ್ಞಾನ ಸುಖೈಕರೂಪಃ=ಕೇವಲವಾಗಿ ಸಕಲ ದೇವತೆಗಳಿಗಿಂತಲೂ ವಿಶೇಷವಾದ ವಿಜ್ಞಾನ ಮತ್ತು ಸುಖಿಗಳೇ ದೇಹವಾಗಿ ಉಳ್ಳಂತಹ, ಅಜಃ=ಉತ್ಪತ್ತಿರಹಿತನಾದ ಶ್ರೀಹರಿಯು ಜನಾನ್=ತಿಪ್ಪ ಜನರನ್ನು (ಮುಕ್ತ್ಯಯೋಗ್ಯರನ್ನು) ಮೋಹಯಿತುಂ=ಮೋಹನಗೊಳಿಸಲು (ವಂಚಿಸುವದಕ್ಕೋಸ್ಕರ = ತನ್ನ ಬಗ್ಗೆ ವಿಪರೀತ ಜ್ಞಾನ ಹುಟ್ಟಿಸುವದಕ್ಕೋಸ್ಕರ) ಮೃಷೈವ=ಸುಮ್ಮನೇ ಪುಂಸಃ=ಪುರುಷನ ದೆಸೆಯಿಂದ ಯೋಷಿತ್ಸು=ಸ್ತ್ರೀಯರಲ್ಲಿ ಅಜನೀವ=ಹುಟ್ಟಿದವನಂತೆ ದೃಶ್ಯತೇ=ತಿಳಿಯಲ್ಪಡುತ್ತಾನೆ. ಹಿ=ಪ್ರಮಾಣದಿಂದ ನಿಶ್ಚಯವು ಬಲಾದಿ ವಿಗ್ರಹಃ=ಬಲಾದಿ ಗುಣಗಳೇ ದೇಹವಾಗಿ ಉಳ್ಳ (ಪ್ರಾಕೃತ ದೇಹ ರಹಿತನಾದ) ಶ್ರೀ ಹರಿಯು ಕ್ವಾಪಿ ಯಾವ ದೇಶ ಯಾವ ಕಾಲದಲ್ಲಿಯೂ ಕೂಡ ನ ಜಾಯತೇ=ಹುಟ್ಟುವದಿಲ್ಲ.

(ಶ್ರೀ ಹರಿಯು ತನಗೆ ಉತ್ಪತ್ತ್ಯಾದಿಗಳು ಇರದಿದ್ದರೂ ಸಹ ಮುಕ್ತ್ಯಯೋಗ್ಯರಿಗೆ ಈ ತತ್ವ ತಿಳಿಯಬಾರದು. ಅನ್ಯಥಾ ಜ್ಞಾನದಿಂದ ಅವರು ಸ್ವಯೋಗ್ಯತಾನುಸಾರ ಲೋಕಕ್ಕೆ ಹೋಗಬೇಕೆಂದು ಸ್ತ್ರೀಪುರುಷ ಸಂಬಂಧದಿಂದ ಹುಟ್ಟಿದವರಂತೆ ತೋರಿಸುತ್ತಾನೆ.)

ಯಥಾ ನೃಸಿಂಹಾಕೃತಿರಾವಿರಾಸೀತ್ ಸ್ತಂಭಾತ್ ತಥಾ ನಿತ್ಯ ತನುತ್ವತೋ ವಿಭುಃ ।
ಆವಿರ್ಭವದ್ ಯೋಷಿತಿ ನೋ ಮಲೋತ್ಥಸ್ತಥಾಪಿ ಮೋಹಾಯ ನಿದರ್ಶಯೇತ್ ತಥಾ ॥ ೪೯ ॥

ಯಥಾ=ಹೇಗೆ ನೃಸಿಂಹಾಕೃತಿಃ=ನರಸಿಂಹ ರೂಪವು ಸ್ತಂಭಾತ್=ಕಂಬದಿಂದ ಆವಿರಾಸೀತ್=ವ್ಯಕ್ತವಾಗಿರುವದೋ ತಥಾ=ಅದರಂತೆ ವಿಭುಃ=ಮಹಾಸಮರ್ಥನಾದ ಶ್ರೀಹರಿಯು ನಿತ್ಯತನುತ್ವತಃ=ನಿತ್ಯವಾದ ದೇಹವುಳ್ಳವನಾದ್ದರಿಂದ ಆವಿರ್ಭವದ್=ಅವತರಿಸಿದನು. ಯದ್ಯಪಿ=ನಿಜವಾಗಿಯೂ ಯೋಷಿತಿ=ಸ್ತ್ರೀಯಲ್ಲಿ ಮಲೋತ್ಥಃ = ಹೊಲಸು ಪದಾರ್ಥಗಳ ಮಧ್ಯದಲ್ಲಿ ಹುಟ್ಟಿದವನು. ನೋ=ಅಲ್ಲ. ತಥಾಪಿ=ಅದರೂ ಸಹ ಮೋಹಾಯ=ಅಜ್ಞ(ಮುಕ್ತ್ಯಯೋಗ್ಯ) ಜನರನ್ನು ಮೋಹಿ

ಸುವದಕ್ಕಾಗಿ ತಥಾ=ಅದರಂತೆ ನಿದರ್ಶಯೇತ್=ತೋರಿಸುತ್ತಾನೆ. (ಹಿಂದಿನ ಶ್ಲೋಕದಲ್ಲಿ ಹೇಳಿದ್ದನ್ನು ಪುನಃ ಇಲ್ಲಿ ಹೇಳಿದ್ದು. "ಶ್ರೀ ಹರಿಯು ಸರ್ವಥಾ ಉತ್ಪತ್ತಿ ರಹಿತನು." ಎಂಬ ವಿಷಯದಲ್ಲಿ ದಾರ್ಢ್ಯ ಹುಟ್ಟಲು.)

ಸ್ತ್ರೀಪುಮ್ಪ್ರಸಙ್ಗಾತ್ ಪರತೋಯತೋಹರಿಃ ಪ್ರಾದುರ್ಭವತ್ಯೇಷ ವಿಮೋಹಯನ್ ಜನಮ್।
ಅತೋ ಮಲೋತ್ಥೋsಯಮಿತಿಸ್ಮ ಮನ್ಯತೇ ಜನೋsಶುಭಃ ಪೂರ್ಣಗುಣೈಕವಿಗ್ರಹಮ್ ॥೫೦॥

ಯತಃ = ಯಾವಕಾರಣದದೆಶೆಯಿಂದ ಏಷಃ=ಈ ಶ್ರೀ ಹರಿಯು ಜನಂ=ಅಜ್ಞ ಜನರನ್ನು ವಿಮೋಹಮನ್(ಸನ್) ಮೋಹಿಸತಕ್ಕವನಾಗಿ ಸ್ತ್ರೀಪುಂಪ್ರಸಂಗಾತ್=ಸ್ತ್ರೀಪುರುಷ ಸಂಬಂಧದಿಂದ ಪರತಃ=ನಂತರದಲ್ಲಿ ಪ್ರಾದುರ್ಭವತಿ=ಅವತರಿಸುತ್ತಾನೋ ಅತಃ=ಆ ಕಾರಣದ ದೆಶೆಯಿಂದ ಅಯಂ=ಈ ಶ್ರೀ ಹರಿಯು ಮಲೋತ್ಥಃ=ಅಪವಿತ್ರ ಪದಾರ್ಥಗಳಲ್ಲಿ ಹುಟ್ಟಿದವನು. ಇತಿ=ಇಂತೆಂದು ಪೂರ್ಣಗುಣೈಕವಿಗ್ರಹಂ=ಪರಿಪೂರ್ಣವಾದ ಕಲ್ಯಾಣಗುಣಗಳೇ ದೇಹವಾಗಿ ಉಳ್ಳ ಶ್ರೀಹರಿಯನ್ನು ಅಶುಭಜನಃ=ಅಯೋಗ್ಯಜನರ ಸಮುದಾಯವು ಮನ್ಯತೇಸ್ಮ=ತಿಳಿಯುತ್ತದೆ.

ದ್ವೀಪೇ ಭಗಿನ್ಯಾಃ ಸ ಯಮಸ್ಯ ವಿಶ್ವಕೃತ್ ಪ್ರಕಾಶತೇ ಜ್ಞಾನಮರೀಚಿ ಮಂಡಲಃ।
ಪ್ರಭಾಸಯನ್ಮಂಡ ಬಹಿಸ್ತಥಾಂತಃ ಸಹಸ್ರಾ ಲಕ್ಷ್ಮಾಮಿತ ಸೂರ್ಯದೀಧಿತಿಃ ॥ ೫೧ ॥

ಸಹಸ್ರಲಕ್ಷಾಮಿತಸೂರ್ಯದೀಧಿತಿಃ=ಸಾವಿರ, ಲಕ್ಷ, ಅಸಂಖ್ಯ, ಸೂರ್ಯರ ಕಾಂತಿಯಂತೆ ಕಾಂತಿ ಉಳ್ಳಂತಹ ಜ್ಞಾನಮರೀಚಿ ಮಂಡಲಃ=ಜ್ಞಾನವೆಂಬ ಕಿರಣಗಳ ಸಮುದಾಯ ಉಳ್ಳಂತಹ ವಿಶ್ವಕೃತ್=ಬ್ರಹ್ಮಾಂಡ ಕರ್ತನಾದ ಸಃ=ಆ ಶ್ರೀ ಹರಿಯು ಯಮಸ್ಯ=ಯಮದೇವರ ಭಗಿನ್ಯಾಃ=ಸಹೋದರಿಯಾದ ಯಮುನಾ ನದಿಯ ದ್ವೀಪೇ=ದ್ವೀಪ(ಜಲಾವರಣ ದೇಶ) ದಲ್ಲಿ ಅಂಡಬಹಿಃ=ಜಗತ್ತಿನ ಹೊರಗೆ ತಥಾ=ಅದರಂತೆ ಅಂತಃ=ಒಳಗೆ ಪ್ರವೇಶಿಸಿ ಪ್ರಭಾಸಯನ್-ಸನ್=ಪ್ರಕಾಶಮಾಡತಕ್ಕವನಾಗಿ ಪ್ರಕಾಶತೇ=ಶೋಭಾಯಮಾನನಾಗಿದ್ದಾನೆ.

ಅಗಣ್ಯದಿವ್ಯೋರುಗುಣಾರ್ಣವಃ ಪ್ರಭುಃ ಸಮಸ್ತವಿದ್ಯಾಧಿಪತಿರ್ಜಗದ್ಗುರುಃ।
ಅನಂತಶಕ್ತಿರ್ಜಗದೀಶ್ವರೇಶ್ವರಃ ಸಮಸ್ತದೋಷಾತಿವಿದೂರವಿಗ್ರಹಃ ॥ ೫೨ ॥

(ಆ ಶ್ರೀ ವೇದವ್ಯಾಸ ದೇವರನ್ನೇ ೫೫ನೇ ಶ್ಲೋಕದವರೆಗೆ ವರ್ಣಿಸುತ್ತಾರೆ.) ಪ್ರಭುಃ = ಸಮರ್ಥನಾದ ಅಗಣ್ಯದಿವ್ಯೋರುಗುಣಾರ್ಣವಃ=ಲೆಕ್ಕ ಮಾಡಲು ಅಶಕ್ಯವಾದ ಶ್ರೇಷ್ಠವಾದ ಅಸಂಖ್ಯವಾದ ಗುಣಗಳಿಂದ ಸಮುದ್ರದಂತೆ ಇರತಕ್ಕ ಸಮಸ್ತವಿದ್ಯಾಧಿಪತಿಃ=ಸಕಲವಿದ್ಯೆಗಳಿಗೆ ಸ್ವತಂತ್ರ ನಿಯಾಮಕನಾದ ಜಗದ್ಗುರುಃ=ಸಕಲ ಜಗತ್ತಿಗೆ ತತ್ತ್ವೋಪದೇಶಕನಾದ ಅನಂತಶಕ್ತಿಃ=ಸೀಮಾ ಇಲ್ಲದಷ್ಟು ಶಕ್ತಿ ಉಳ್ಳವನಾದ (ಅವನ ಶಕ್ತಿ ಇಷ್ಟೇ ಎಂದು ಯಾರೂ ತಿಳಿಯಲಾರರು.) ಜಗದೀಶ್ವರೇಶ್ವರಃ=ಜಗತ್ತಿನಲ್ಲಿ ಯಾರು ಯಾರು ನಿಯಾಮಕರಾಗಿರುವರೋ ಅವರಿಗೆಲ್ಲರಿಗೂ ನಿಯಾಮಕನಾದ ಸಮಸ್ತದೋಷಾತಿವಿದೂರವಿಗ್ರಹಃ=ಸಮಸ್ತದೋಷಗಳಿಂದ ಅತಿದೂರನಾದ (ಯಾವ ದೋಷವೂ ಇಲ್ಲದಂತಹ) ಶರೀರವುಳ್ಳವನಾದ (ಶ್ರೀಹರಿಯು ಜಗತ್ತಿನಲ್ಲಿ ಪ್ರಕಾಶಿತನಾದನು)

ಶುಭಮರಕತ(ತಕ)ವರ್ಣೋರಕ್ತಪಾದಾಬ್ಜನೇತ್ರಾಧರಕರನಖರಸನಾಗ್ರಶ್ಚಕ್ರ ಶಂಖಾಬ್ಜರೇಖಃ।
ರವಿಕರವರಗೌರಂ ಚರ್ಮ ಚೈಣಂವಸಾನಸ್ತಟಿದಮಲಜಟಾಸಂದೀಪ್ತ ಜೂಟಂ ದಧಾನಃ ॥ ೫೩ ॥

ಶುಭಮರಕತವರ್ಣಃ=ಮಂಗಲವಾದ ಮರಕತಮಣಿಯಂತೆ ವರ್ಣವುಳ್ಳಂತಹ ರಕ್ತಪಾದಾಬ್ಜನೇತ್ರಾಧರಕರನಖರಸನಾಗ್ರೇಃ=ಪಾದಕಮಲದಲ್ಲಿ, ಕಣ್ಣಿನಲ್ಲಿ, ತುಟಿಯಲ್ಲಿ, ಕೈಯಲ್ಲಿ, ಉಗುರಿನಲ್ಲಿ, ನಾಲಗೆಯ ತುದಿಯಲ್ಲಿ ಕೆಂಪು ವರ್ಣ ಉಳ್ಳಂತಹ ಚಕ್ರಶಂಖಾಬ್ಜರೇಖಃ=ಚಕ್ರ, ಶಂಖ, ಪದ್ಮ ರೇಖೆಗಳು ಉಳ್ಳಂತಹ ಚ=ಮತ್ತು ರವಿಕರವರಗೌರಂ=ಸೂರ್ಯನ ಕಿರಣದಂತೆ ಶುಭ್ರವಾದ (ಗೌರ) ವರ್ಣವುಳ್ಳ ಐಣಂ = ಜಿಗರೆ ಸಂಬಂಧಿಯಾದ ಚರ್ಮ = ಚರ್ಮವನ್ನು ವಸಾನಃ=ಧರಿಸಿದಂತಹ ತಟಿದಮಲ ಜಟಾಸಂದೀಪ್ತ ಜೂಟಂ=ಮಿಂಚಿನಂತೆ ನಿರ್ದುಷ್ಟವಾದ ಜಟೆಯ ಸಮೂಹದಿಂದ ಪ್ರಕಾಶಮಾನನಾದ (ಶ್ರೀ ಹರಿಯು ಜಗತ್ತಿನಲ್ಲಿ ಪ್ರಕಾಶಿತನಾದನು)

ವಿಸ್ತೀರ್ಣವಕ್ಷಾಃ ಕಮಲಾಯತಾಕ್ಷೋ ಬೃಹದ್ಭುಜಃ ಕಂಬುಸಮಾನಕಂಠಃ ॥
ಸಮಸ್ತವೇದಾನ್ ಮುಖತಃ ಸಮುದ್ಧಿರನ್ನನಂತ ಚಂದ್ರಾಧಿಕ ಕಾಂತ ಸನ್ಮುಖಃ ॥ ೫೪ ॥

ವಿಸ್ತೀರ್ಣವಕ್ಷಾಃ=ವಿಶಾಲವಾದ ವಕ್ಷಸ್ಥಲವುಳ್ಳಂತಹ ಕಮಲಾಯತಾಕ್ಷಃ=ಕಮಲದಂತೆ ಕಣ್ಣುಗಳುಳ್ಳಂತಹ ಬೃಹದ್ಭುಜಃ=ದೊಡ್ಡ ಭುಜಗಳುಳ್ಳಂತಹ ಕಂಬುಸಮಾನಕಂಠಃ=ಶಂಖದಿಂದ ಸಮಾನವಾದ ಕಂಠವುಳ್ಳಂತಹ ಸಮಸ್ತ ವೇದಾನ್=ಸಮಸ್ತ ವೇದಗಳನ್ನು ಮುಖತಃ=(ತನ್ನ)ಮುಖದಿಂದಲೇ ಉದ್ಧಿರನ್=ಉಚ್ಚರಿಸತಕ್ಕಂತಹ ಅನಂತ ಚಂದ್ರಾಧಿಕಕಾಂತಸನ್ಮುಖಃ=ಅಸಂಖ್ಯ ಚಂದ್ರರಿಗಿಂತಲೂ(ಚಂದ್ರರ ಕಾಂತಿಗಿಂತಲೂ) ಹೆಚ್ಚಿನಕಾಂತಿಯಿರುವ ಸಮೀಚೀನವಾದ ಮುಖವುಳ್ಳ (ಶ್ರೀವೇದವ್ಯಾಸ ದೇವರು ಪ್ರಕಾಶಿತರಾಗಿದ್ದಾರೆ.)

ಪ್ರಬೋಧಮುದ್ರಾ ಭಯದೋರ್ದ್ವಯಾನ್ವಿತೋ ಯಜ್ಞೋಪವೀತಾಜಿನ ಮೇಖಲೋಲ್ಲಸನ್ ॥
ದೃಶಾಮಹಾಜ್ಞಾನ ಭುಜಂಗದಷ್ಟ ಮುಜ್ಜೀವಯಾನೋ ಜಗದತ್ಯರೋಚತ ॥ ೫೫ ॥

ಪ್ರಬೋಧ॥...ದ್ವಯಾನ್ವಿತಃ=ಜ್ಞಾನಮುದ್ರಾ ಮತ್ತು ಅಭಯಮುದ್ರಾಗಳುಳ್ಳ ದೋಃ=ಕೈಗಳ ದ್ವಯ=ಎರಡರಿಂದ ಅನ್ವಿತಃ=ಕೂಡಿದ(ಬಲಕೈಯಲ್ಲಿ ಜ್ಞಾನಮುದ್ರಾ ಎಡಕೈಯಲ್ಲಿ ಅಭಯಮುದ್ರಾಗಳನ್ನು ಧರಿಸತಕ್ಕಂತಹ ಯಜ್ಞೋಪವೀತಾ ಜಿನ ಮೇಖಲೋಲ್ಲಸನ್=ಯಜ್ಞೋಪವೀತ. ಕೃಷ್ಣಾಜಿನ ಮತ್ತು ತೃಣವಿಶೇಷದಿಂದ ಮಾಡಿದ ಉಡುದಾರಗಳಿಂದ ಶೋಭಾಯಮಾನರಾದ, ಮಹಾಜ್ಞಾನಭುಜಂಗದಷ್ಟಂ=ಅತ್ಯಂತ ಅಜ್ಞಾನ ಅನ್ಯಥಾಜ್ಞಾನವೆಂಬ ಸರ್ಪದಿಂದ ಕಚ್ಚಲ್ಪಟ್ಟು ಸತ್ತುಹೋಗಿರುವಅಜ್ಞಾನಿಯಾದ, ಜಗತ್=ಸಜ್ಜನಲೋಕವನ್ನು ದೃಶಾ=ತತ್ವಜ್ಞಾನದಿಂದ ಉಜ್ಜೀವಯಾನಃ(ಸನ್)=ಬದುಕಿಸ ತಕ್ಕವನಾಗಿ ಅತ್ಯರೋಚತ್=ಅತ್ಯಂತ ಪ್ರಕಾಶನಾದನು.

~~ಸ ಲೋಕಧರ್ಮಾಭಿರಿರಕ್ಷಯಾ ಪಿತುರ್ದ್ವಿಜತ್ವಮಾಪ್ಯಾಶು ಪಿತುರ್ದದೌ ನಿಜಮ್ ।~~
ಜ್ಞಾನಂ ತಯೋಃ ಸಂಸ್ಮೃತಿ ಮಾತ್ರತಃ ಸದಾ ಪ್ರತ್ಯಕ್ಷಭಾವಂ ಪರಮಾತ್ಮನೋ ದದೌ ॥ ೫೬ ॥

ಸಃ=ಆ ಶ್ರೀವೇದವ್ಯಾಸದೇವರು ಲೋಕಧರ್ಮಾಭಿ ರಿರಕ್ಷಯಾ = ಲೋಕದ ವರ್ಣಾಶ್ರಮ ಧರ್ಮಗಳನ್ನು ರಕ್ಷಿಸುವ ಇಚ್ಛೆಯಿಂದ ಪಿತುಃ=ತಂದೆ ಎಂದು ಪ್ರಸಿದ್ಧರಾದ(ತಂದೆಯಲ್ಲ)ಪರಾಶರ ಋಷಿಗಳ ದೆಸೆಯಿಂದ ದ್ವಿಜತ್ವಂ = ಬ್ರಾಹ್ಮಣ್ಯವನ್ನು ಆಶು=ಕೂಡಲೇ ಆಪ್ಯ=ಹೊಂದಿ ಪಿತುಃ=ಪರಾಶರ ಋಷಿಗಳಿಗೆ ನಿಜಂ = ತನ್ನ ವಿಷಯಕವಾದ, ಅವರಿಗೆ ಅಯೋಗ್ಯವಾದ, ಜ್ಞಾನಂ=ತತ್ವಜ್ಞಾನವನ್ನು ದದೌ=ಕೊಟ್ಟರು ತಯೋಃ= ಅವರಿಗೆ (ಪರಾಶರಋಷಿ, ಸತ್ಯವತೀದೇವಿಯರಿಗೆ,) ಸಂಸ್ಮೃತಿ ಮಾತ್ರತಃ=ತನ್ನ ಸ್ಮರಣಮಾತ್ರದಿಂದ ಪರಮಾತ್ಮನಃ=ಪರಬ್ರಹ್ಮನಾದ ತನ್ನ ಸದಾ=ಯಾವಾಗಲೂ ಪ್ರತ್ಯಕ್ಷ ಭಾವಂ=ದರ್ಶನವನ್ನು ದದೌ=ಕೊಟ್ಟನು. (ನೀವು ಯಾವಾಗ ಸ್ಮರಿಸುತ್ತಿರೋ ಆಗ ದರ್ಶನವನ್ನು ಕೊಡುತ್ತೇನೆ ಎಂದು ವರವನ್ನು ಕೊಟ್ಟನು.)

ದ್ವೈಪಾಯನಃ ಸೋಥ ಜಗಾಮ ಮೇರುಂ ಚತುರ್ಮುಖಾದ್ಯೈರನುಗಮ್ಯಮಾನಃ ।
ಉದ್ಧೃತ್ಯ ವೇದಾನಖಿಲಾನ್ ಸುರೇಭ್ಯೋ ದದೌ ಮುನಿಭ್ಯಶ್ಚ ಯಥಾದಿ ಸೃಷ್ಟೌ ॥ ೫೭ ॥

ಅಥ=ಆನಂತರದಲ್ಲಿ ಸಃದ್ವೈಪಾಯನಃ=ಆ ಶ್ರೀ ವೇದವ್ಯಾಸದೇವರು ಮೇರುಂ=ಮೇರುಪರ್ವತವನ್ನು ಕುರಿತು ಜಗಾಮ=ಹೋದರು. ಚತುರ್ಮುಖಾದ್ಯೈಃ=ಚತುರ್ಮುಖ ಬ್ರಹ್ಮ ದೇವರೇ ಮೊದಲಾಗಿ ಉಳ್ಳ ದೇವತೆಗಳಿಂದ ಅನುಗಮ್ಯಮಾನಃ(ಸನ್)=ಸ್ತುತಿಸಲ್ಪಟ್ಟವರಾಗಿ ಅಖಿಲಾನ್ ವೇದಾನ್=ಸಮಸ್ತವೇದಗಳನ್ನು ಉದ್ಧೃತ್ಯ=ಉದ್ಧರಿಸಿ (ಮೂಲರೂಪೀ ನಾರಾಯಣ ದೇವರೇ ವೇದಗಳನ್ನು ವಿಭಾಗ ಮಾಡಿದ್ದಾರೆ. ಆ ವಿಭಿಕ್ತವಾದ ವೇದಗಳಲ್ಲಿ ಕೆಲವನ್ನು ಮಾತ್ರ ಆರಿಸಿಕೊಂಡು ಅವುಗಳ ಅರ್ಥಪೂರ್ವಕವಾದ ಉಪದೇಶವನ್ನು) ಸುರೇಭ್ಯಃ=ದೇವತೆಗಳಿಗೆ ಚ=ಮತ್ತು ಮುನಿಭ್ಯಃ=ಮುನಿಗಳಿಗೆ ಯಥಾ= ಹೇಗೆ ಆದಿಸೃಷ್ಟೌ=ಸೃಷ್ಟಿ ಪ್ರಾರಂಭಕಾಲದಲ್ಲಿ ದೇವತೆಗಳಿಗೆ ತನ್ನ ಬುದ್ಧಿಸ್ಥವಾದದ್ದನ್ನೇ ಉಪದೇಶಿಸಿದರೋ (ತಥಾ) ಅದರಂತೆ ದದೌ=ಕೊಟ್ಟರು.(ಉಪದೇಶಿಸಿದರು)

ಸರ್ವಾಣಿ ಶಾಸ್ತ್ರಾಣಿ ತಥೈವ ಕೃತ್ವಾ ವಿನಿರ್ಣಯಂ ಬ್ರಹ್ಮಸೂತ್ರಂ ಚಕಾರ ।
ತಚ್ಛುಶ್ರುವುರ್ಬ್ರಹ್ಮ ಗಿರೀಶಮುಖ್ಯಾಃ ಸುರಾ ಮುನೀನಾಂ ಪ್ರವರಾಶ್ಚ ತಸ್ಮಾತ್ ॥ ೫೫ ॥

ತಥೈವ=ಅದರಂತೆಯೇ (ಒಂದಿನ ಕಲ್ಪದಂತೆಯೇ) ಸರ್ವಾಣಿ ಶಾಸ್ತ್ರಾಣಿ=ಎಲ್ಲ ಶಾಸ್ತ್ರಗ್ರಂಥಗಳನ್ನು ಕೃತ್ವಾ = ಮಾಡಿ ವಿನಿರ್ಣಯಂ=ಸರ್ವಶಾಸ್ತ್ರಾರ್ಥ ನಿರ್ಣಾಯಕವಾದ ಬ್ರಹ್ಮಸೂತ್ರಂ=ಬ್ರಹ್ಮಸೂತ್ರಗಳನ್ನು ಚಕಾರ=(ಶ್ರೀವೇದವ್ಯಾಸದೇವರು) ಮಾಡಿದರು. ತಸ್ಮಾತ್=ಆ ಶ್ರೀವೇದವ್ಯಾಸದೇವರ ದೆಶೆಯಿಂದ ಬ್ರಹ್ಮಗಿರೀಶಮುಖ್ಯಾಃ=ಬ್ರಹ್ಮದೇವರು, ರುದ್ರದೇವರೇ= ಮುಖ್ಯರಾಗಿರುಳ್ಳ ಸುರಾಃ=ದೇವತೆಗಳು ಚ=ಮತ್ತು ಮುನೀನಾಂ=ಮುನಿಗಳಿಗೆ ಪ್ರವರಾಃ=ಶ್ರೇಷ್ಠರಾದ ಮುನಿಗಳು ತತ್=ಆ ಶಾಸ್ತ್ರಗಳನ್ನು (ಉಪದೇಶವನ್ನು) ಶುಶ್ರುವುಃ=ಕೇಳಿದರು.

ಸಮಸ್ತಶಾಸ್ತ್ರಾರ್ಥನಿದರ್ಶನಾತ್ಮಕಂ ಚಕ್ರೇ ಮಹಾಭಾರತ ನಾಮಧೇಯಮ್ ।
ವೇದೋತ್ತಮಂ ತಚ್ಚ ವಿಧಾತೃಶಂಕರ ಪ್ರಧಾನಕೈಸ್ತನ್ಮುಖತಃ ಸುರೈಃ ಶ್ರುತಮ್ ॥ ೫೬ ॥

(ನಂತರದಲ್ಲಿ ಶ್ರೀವೇದವ್ಯಾಸದೇವರು) ಸಮಸ್ತ ಶಾಸ್ತ್ರಾರ್ಥನಿದರ್ಶನಾತ್ಮಕಂ = ಸಕಲ ಶಾಸ್ತ್ರಗಳ ತಾತ್ಪರ್ಯಾರ್ಥವಾದ ವಿಷ್ಣುಸರ್ವೋತ್ತಮತ್ವ. ವಾಯುಜೀವೋತ್ತಮತ್ವ, ತಾರತಮ್ಯ ಇತ್ಯಾದಿ ವಿಷಯಂಗಳಲ್ಲಿ ದೃಷ್ಟಾಂತಗಳನ್ನು ಒದಗಿಸುವಂತಹ, ವೇದೋತ್ತಮಂ=ವೇದಕ್ಕಿಂತಲೂ ಉತ್ತಮವಾದಂತಹ,ಮಹಾಭಾರತ ನಾಮಧೇಯಮ್=ಮಹಾಭಾರತ ಎಂಬ ಹೆಸರುಳ್ಳ ಗ್ರಂಥವನ್ನು ಚಕ್ರೇ=ಮಾಡಿದರು. ತಚ್ಚ=ಆ ಶ್ರೀಮಹಾಭಾರತವು ವಿಧಾತೃಶಂಕರ ಪ್ರಧಾನಕೈಃ=ಬ್ರಹ್ಮದೇವರು ರುದ್ರದೇವರ ಪ್ರಧಾನರಾಗಿರುಳ್ಳ ಸುರೈಃ=ದೇವತೆಗಳಿಂದ ತನ್ಮುಖತಃ = ಶ್ರೀವೇದವ್ಯಾಸ ದೇವರ ಮುಖದಿಂದ, ಶ್ರುತಂ=ಕೇಳಲ್ಪಟ್ಟಿತು.(ಅತಿ ಶ್ರೇಷ್ಠವಾದ ಶ್ರೀಮನ್ಮಹಾಭಾರತವನ್ನು ಶ್ರೀವೇದವ್ಯಾಸದೇವರು ರಚಿಸಿದರು. ಬ್ರಹ್ಮರುದ್ರಾದಿ ದೇವತೆಗಳು ಶ್ರೀವೇದವ್ಯಾಸ ದೇವರಿಂದ ಶ್ರೀಮಹಾಭಾರತದ ಉಪದೇಶವನ್ನು ಹೊಂದಿದರು. ಧರ್ಮರಾಜರ ರಾಜಸೂಯ ಯಾಗದಲ್ಲಿ ಶ್ರೀ ಕೃಷ್ಣದೇವರಿಗೆ ಅಗ್ರಪೂಜಾದಿ ಕಥಾಗಳು, ಶ್ರೀ ವಿಷ್ಣುಸರ್ವೋತ್ತಮತ್ವ ವಿಷಯದಲ್ಲಿ, ಭಯಂಕರ ಕಾಲಕೂಟ ವಿಷ ಕುಡಿದರೂ ವಾಯುದೇವರಿಗೆ ಬಾಧಕವಿಲ್ಲ ಮುಂತಾದ ಶ್ರೀ ವಾಯುಜೀವೋತ್ತಮತ್ವ ವಿಷಯದಲ್ಲಿ ದೃಷ್ಟಾಂತಗಳು.)

ಅಥೋ ಗಿರೀಶಾದಿ ಮನೋನುಶಾಯೀ ಕಲಿರ್ಮಮಾರಾಶು ಸುವಾಙ್ಮಯೈಃಶರೈಃ ।
ನಿಕೃತ್ತಶೀರ್ಷೋ ಭಗವನ್ಮುಖೇರಿತೈಃ ಸುರಾಶ್ಚ ಸಜ್ಞಾನಸುಧಾರಸಂ ಪಪುಃ ॥ ೬೦ ॥

ಅಥೋ=ಈ ರೀತಿಯಾಗಿ ಶಾಸ್ತ್ರಗಳನ್ನು ಶ್ರೀವೇದವ್ಯಾಸ ದೇವರು ನಿರ್ಮಿಸಿದ ನಂತರ ಗಿರೀಶಾದಿಮನೋನುಶಾಯೀ=ರುದ್ರದೇವರೇ ಮೊದಲಾಗಿ ಉಳ್ಳ ದೇವತೆಗಳ ಮನಸ್ಸಿನಲ್ಲಿ ವಾಸಮಾಡಿದ ಕಲಿಃ=ಕಲಿಯು ಭಗವನ್ಮುಖೇರಿತೈಃ = ಶ್ರೀವೇದವ್ಯಾಸದೇವರ ಮುಖದಿಂದ ಹೇಳಲ್ಪಟ್ಟಂತಹ ಸುವಾಙ್ಮಯೈಃ=ಸಮೀಚೀನವಾದ ವಾಕ್ಯ(ಶಾಸ್ತ್ರ)ಗಳೆಂಬ ಶರೈಃ= ಬಾಣಗಳಿಂದ ನಿಕೃತ್ತಶೀರ್ಷಃ=ಕತ್ತರಿಸಲ್ಪಟ್ಟ ತಲೆ ಉಳ್ಳವನಾದವನು. (ಶ್ರೀ ವೇದವ್ಯಾಸದೇವರ ಉಪದೇಶದಿಂದ ರುದ್ರಾದಿ ದೇವತೆಗಳಲ್ಲಿ ಇದ್ದ ಕಲಿಪ್ರವೇಶ ನಿಮಿತ್ತಕವಾದ ಅಜ್ಞಾನಾದಿಗಳು ನಾಶವಾದವು.) ಚ=ಮತ್ತು ಸುರಾಃ=ದೇವತೆಗಳು ಸತ್= ಜ್ಞಾನಸುಧಾರಸಂ=ಯಥಾರ್ಥಜ್ಞಾನವೆಂಬ ಅಮೃತವನ್ನು ಪಪುಃ=ಕುಡಿದರು. (ದೇವತೆಗಳಿಗೆ ಯಥಾರ್ಥಜ್ಞಾನವಾಯಿತು.)

ಅಥೋ ಮನುಷ್ಯೇಷು ತಥಾಽಸುರೇಷು ರೂಪಾಂತರೈಃ ಕಲಿರೇವಾವಶಿಷ್ಟಃ ।
ತತೋ ಮನುಷ್ಯೇಷು ಚ ಸತ್ಸು ಸಂಸ್ಥಿತೋ ವಿನಾಶ್ಯ ಇತ್ಯೇಷ ಹರಿರ್ವ್ಯಚಿಂತಯತ್ ॥ ೬೧

ಅಥೋ=ರುದ್ರಾದಿ ದೇವತೆಗಳಿಗೆ ಅಜ್ಞಾನ ನಾಶವಾಗಿ ಯಥಾರ್ಥ ಜ್ಞಾನವಾದ ನಂತರ, ಮನುಷ್ಯೇಷು=ಮನುಷ್ಯರಲ್ಲಿ ತಥಾ=ಅದರಂತೆ ಅಸುರೇಷು=ದೈತ್ಯರಲ್ಲಿ ಕಲಿರೇವ=ಕಲಿಯೇ ರೂಪಾಂತರೈಃ=ತನ್ನ ಇತರ ರೂಪಗಳಿಂದ ಅವಶಿಷ್ಟಃ= ಉಳಿದನು(ಮನುಷ್ಯ ಮತ್ತು ದೈತ್ಯರಲ್ಲಿ ಅಜ್ಞಾನ ಇದ್ದಿತು ಹೋಗಿರಲಿಲ್ಲ.) ತತಃ=ಆದ್ದರಿಂದ ಸತ್ಸು=ಮುಕ್ತಿ ಯೋಗ್ಯರಾದ ಮನುಷ್ಯೇಷು=ಮನುಷ್ಯರಲ್ಲಿ ಸಂಸ್ಥಿತಃ=ಸರಿಯಾಗಿ ವಾಸಮಾಡಿದ ಕಲಿಯು ವಿನಾಶ್ಯಃ=ನಾಶಕ್ಕೆ ಯೋಗ್ಯನಾಗಿದ್ದಾ ಇತಿ=ಇಂತೆಂದು ಏಷಃ=ಈ ಶ್ರೀವೇದವ್ಯಾಸ ದೇವರು ವ್ಯಚಿಂತಯತ್ = ವಿಚಾರಿಸಿದರು. (ಮುಕ್ತಿಯೋಗ್ಯರಾದ ಮನುಷ್ಯರಲ್ಲಿ ಇರುವ ಅಜ್ಞಾನ ಹೋಗಬೇಕೆಂದು ಶ್ರೀವೇದವ್ಯಾಸ ದೇವರು ಅಪೇಕ್ಷಿಸಿದರು. ಮುಕ್ತ್ಯ ಯೋಗ್ಯರಾದ ಮನುಷ್ಯರು ನಿತ್ಯ ಸಂಸಾರಿಗಳಾಗಿದ್ದಾರೆ ಅಸುರರು ತಮೋಯೋಗ್ಯರು ಇವರಿಬ್ಬರ ಅಜ್ಞಾನವೂ ನಾಶವಾಗುವದಿಲ್ಲ.)

ತತೋನೃಣಾಂ ಕಾಲಬಲಾತ್ ಸುಮಂದಮಾಯುರ್ಮತಿಂ ಕರ್ಮ ಚ ವೀಕ್ಷ್ಯ ಕೃಷ್ಣಃ ।
ವಿವ್ಯಾಸವೇದಾನ್ ಸ ವಿಭುಶ್ಚತುರ್ಧಾ ಚಕ್ರೇ ತಥಾಭಾಗವತಂ ಪುರಾಣಮ್ ॥ ೬೨ ॥

ತತಃ=ಆ ನಂತರದಲ್ಲಿ ಕಾಲಬಲಾತ್=ಕಾಲದ ಶಕ್ತಿಯಿಂದ ನೃಣಾಂ=ಮನುಷ್ಯರಿಗೆ ಸುಮಂದಂ=ಅತ್ಯಂತ ಕಡಿಮೆಯಾಗಿರುವ ಆಯುಂ=ಆಯುಷ್ಯವನ್ನು ಮತಿಂ=ಬುದ್ಧಿಯನ್ನು ಚ=ಮತ್ತು ಕರ್ಮ=ಕ್ರಿಯಾಶಕ್ತಿಯನ್ನು ವೀಕ್ಷ್ಯ=ನೋಡಿ ಪ್ರಭುಃ=ಸಮರ್ಥವಾದ ಸಃ=ಆ ಕೃಷ್ಣಃ=ಶ್ರೀವೇದವ್ಯಾಸದೇವರು ವೇದಾನ್=ವೇದಗಳನ್ನು ಚತುರ್ಧಾ=ನಾಲ್ಕು ಭಾಗಗಳುಳ್ಳದ್ದನ್ನಾಗಿ ವಿವ್ಯಾಸ್=ವಿಭಾಗಿಸಿದರು. ತಥಾ=ಹಿಂದಿನಂತೆ ಭಾಗವತಂ=ಶ್ರೀ ವಿಷ್ಣುಸರ್ವೋತ್ತಮತ್ವ ಪ್ರತಿಪಾದಕವಾದ ಪುರಾಣಂ=ಪುರಾಣವನ್ನು ಚಕ್ರೇ=ಮಾಡಿದರು.

(ಮನುಷ್ಯರ ಆಯುಷ್ಯ, ಬುದ್ಧಿ, ಶಕ್ತಿ ಎಲ್ಲವೂ ಕಡಿಮೆ ಆಗುತ್ತಿರುವದನ್ನು ತಿಳಿದು, ಮೂಲರೂಪದಿಂದ ವಿಭಾಗಿಸಿದ ವೇದಗಳಲ್ಲಿಯ ಋಕ್‌ಗಳನ್ನು ಪುನಃ ಎತ್ತಿ ತೆಗೆದು ಮನುಷ್ಯ ಬುದ್ಧಿಗೆ ಸಿಲುಕುವಷ್ಟು ವೇದಗಳನ್ನು ಒದಗಿಸಿದರು. ಈಗಾಗಲೇ ರಾಜಸತಾಮಸ ಪುರಾಣಗಳನ್ನು ಮಾಡಿದ್ದರೂ ಅವು ಮೋಕ್ಷ ಸಾಧಕವಾಗದಿಲ್ಲವಾದ್ದರಿಂದ ಈ ಮನುಷ್ಯರ ಅನುಕೂಲಕ್ಕಾಗಿ ಸ್ಪಷ್ಟವಾಗಿ ಶ್ರೀ ಹರಿಸರ್ವೋತ್ತಮತ್ವಬೋಧಕ ಪುರಾಣಗಳನ್ನು ರಚಿಸಿದರು.)

ಯೇ ಯೇಚ ಪಂತಸ್ತಮಸಾಽನುವಿಷ್ಟಾಸ್ತಾಂಸ್ತಾನ್ ಸುವಾಕ್ಯೈಸ್ತಮಸೋ ವಿಮುಂಚನ್ ।
ಚಚಾರ ಲೋಕಾನ್ ಪಥಿ ಪ್ರಯಾಂತಂ ಕೀಟಂ ವ್ಯಪಶ್ಯತ್ ತಮುವಾಚ ಕೃಷ್ಣಃ ॥ ೬೩ ॥

(ಹೀಗೆ ಲೋಕದಲ್ಲಿ) ಯೇ ಯೇ ಚ=ಯಾರು ಯಾರು ತಮಸಾನುವಿಷ್ಟಾಃ=ತಮೋಗುಣದಿಂದ ಸಂಬದ್ಧರಾಗಿ ಅಜ್ಞಾನಿಗಳಾಗಿರುವರೋ ತಾನ್ ತಾನ್=ಅವರನ್ನು ಸುವಾಕ್ಯೈಃ=(ತನ್ನ) ಸಮೀಚೀನವಾದ ವಾಕ್ಯ(ಗ್ರಂಥ)ಗಳಿಂದ ತಮಸಃ=ಅಜ್ಞಾನದ ದೆಶೆಯಿಂದ ವಿಮುಂಚನ್(ಸನ್)ಮುಕ್ತರನ್ನಾಗಿ ಮಾಡುತ್ತ ಕೃಷ್ಣಃ=ಶ್ರೀ ವೇದವ್ಯಾಸದೇವರು ಲೋಕಾನ್=ಲೋಕಗಳನ್ನು ಚಚಾರ=ಸಂಚಾರ ಮಾಡಿದರು. (ಸಂಚಾರ ಮಾಡುತ್ತಿರುವ ಕಾಲದಲ್ಲಿ) ಸಃ=ಆ ಶ್ರೀ ವೇದವ್ಯಾಸದೇವರು ಪಥಿ=ಮಾರ್ಗದಲ್ಲಿ ಪ್ರಯಾಂತಂ=ಹೋಗುತ್ತಿರುವ ಕೀಟಂ=ಕೀಟವನ್ನು ವ್ಯಪಶ್ಯತ್=ನೋಡಿದರು. ಚ=ಮತ್ತು ತಂ=ಆ ಕೀಟವನ್ನುದ್ದೇಶಿಸಿ ಉವಾಚ=ಮಾತನಾಡಿದರು. (ಏನು ಹೇಳಿದರೆಂದು ಮುಂದಿನ ಶ್ಲೋಕದಲ್ಲಿದೆ.)

ಭವಸ್ವರಾಜಾ ಕುಶರೀರವೇತತ್ ತ್ಯಕ್ತ್ವೇತಿ ನೈಚ್ಛತ್ ತದಪಾ ತತಸ್ತಮ್ ।
ಅತ್ಯಕ್ತದೇಹಂ ನೃಪತಿಂ ಚಕಾರ ಪುರಾಸ್ವಭಕ್ತಂ ವೃಷಲಂ ಸುಲುಬ್ಧಮ್ ॥ ೬೪ ॥

(ಹೇ ಕೀಟವೇ) ಏತತ್=(ನಿನಗೆನಿಸುವ) ಈ ಕುಶರೀರಂ=ಕುಚ್ಚಿತವಾದ ದೇಹವನ್ನು ತ್ಯಕ್ತ್ವಾ=ಬಿಟ್ಟು ರಾಜಾ=ರಾಜನು ಭವಸ್ವ=ಆಗು ಇತಿ=ಇತೆಂದು (ಉವಾಚ=ಹೇಳಿದನು) ಅಸೌ=ಈ ಕೀಟವು ತತ್=ದೇಹತ್ಯಾಗವನ್ನು ನಾಪಿಚ್ಛತ್=ಅಪೇಕ್ಷಿಸಲಿಲ್ಲ. ತತಃ=ಆದ್ದರಿಂದ ಅತ್ಯಕ್ತದೇಹಂ=ದೇಹವನ್ನು ಬಿಡದಿರುವ ಪುರಾ=ಹಿಂದಿನಜನ್ಮದಲ್ಲಿ ವೃಷಲಂ=ಶೂದ್ರನಾದ ಸುಲುಬ್ಧಮ್=ಅತ್ಯಂತ ಲೋಭಿಯಾಗಿದ್ದ ಸ್ವಭಕ್ತಂ=ತನ್ನ ಭಕ್ತನಾದ ತಂ=ಆ ಕೀಟವನ್ನು ನೃಪತಿಂ=ರಾಜನನ್ನಾಗಿ ಚಕಾರ=ಮಾಡಿದನು. (ಆ ಕೀಟದ ದೇಹದಿಂದ ಇರುವಾಗಲೇ ರಾಜನನ್ನಾಗಿ ಮಾಡಿ ಸಿಂಹಾಸನದಲ್ಲಿ ಕೂಡಿಸಿದನು.)

ಲೋಭಾತ್ ಸ ಕೀಟತ್ವಮುಪೇತ್ಯ ಕೃಷ್ಣಪ್ರಸಾದತಶ್ಚಾಶು ಬಭೂವ ರಾಜಾ ।
ತದೈವ ತಂ ಸರ್ವನೃಪಾಃ ಪ್ರಣೇಮುರ್ದದುಃ ಕರಂ ಚಾಸ್ಯ ಯಥೈವ ವೈಶ್ಯಾಃ ॥ ೬೫ ॥

ಸಃ=ಆ ಕೀಟದ ದೇಹದಲ್ಲಿ ಇರುವ ಜೀವನು ಲೋಭಾತ್=(ಹಿಂದಿನ ಜನ್ಮದಲ್ಲಿ) ಲೋಭ(ಜಿಪುಣತನ)ವೆಂಬ ಗುಣದಿಂದ(ಈಗ) ಕೀಟತ್ವಂ=ಕೀಟದ ದೇಹವನ್ನು ಉಪೇತ್ಯ=ಹೊಂದಿ ಕೃಷ್ಣಪ್ರಸಾದತಶ್ಚ=ಶ್ರೀ ವೇದವ್ಯಾಸದೇವರ ಪರಮಾನುಗ್ರಹದಿಂದಲೇ ರಾಜಾ=ರಾಜನು ಬಭೂವ=ಆದನು. ತದೈವ=ಆವನು ರಾಜನಾಗಿ ಸಿಂಹಾಸನದಲ್ಲಿ ಕುಳಿತೊಡನೆಯೇ ತಂ=ಆ ಕೀಟರೂಪೀರಾಜನನ್ನು ಸರ್ವನೃಪಾಃ=ಉಳಿದೆಲ್ಲ ಸಾಮಂತ ರಾಜರು ಪ್ರಣೇಮುಃ=ನಮಸ್ಕರಿಸಿದರು. ಚ=ಮತ್ತು ಯಥೈವ ವೈಶ್ಯಾಃ=ವೈಶ್ಯರುಕರಕೊಡುವಂತೆ ಅಸ್ಯ=ಈ ಕೀಟರೂಪೀ ರಾಜನಿಗೆ ಕರಂ=ಕರವನ್ನು ದದುಃ=ಕೊಟ್ಟರು.

ಉವಾಚ ತಂ ಭಗವಾನ್ ಮುಕ್ತಿ ಮಸ್ಮಿಂಸ್ತವ ಕ್ಷಣೇ ದಾತುಮಹಂ ಸಮರ್ಥಃ ॥
ತಥಾಪಿ ಸೀಮಾರ್ಥ ಮವಾಪ್ಯ ವಿಪ್ರ ತನುಂ ವಿಮುಕ್ತೋ ಭವ ಮತ್ಪ್ರ ಸಾದಾತ್ ॥೬೬ ॥

ತಂ=ಆ ಕೀಟವನ್ನು ಕುರಿತು ಭಗವಾನ್=ಶ್ರೀ ವೇದವ್ಯಾಸದೇವರು ಉವಾಚ=ಹೇಳಿದರು(ಏನೆಂದರೆ) ತವ = ನಿನ ಅಸ್ಮಿನ್ = ಈ ದೇಹದಲ್ಲಿ ಮುಕ್ತಿಂ = ಮೋಕ್ಷವನ್ನು ಕ್ಷಣೇ=ಒಂದುಕ್ಷಣದಲ್ಲಿ ದಾತುಂ=ಕೊಡಲು ಅಹಂ = ನಾನು ಸಮರ್ಥಃ ಸಮರ್ಥನಿರುವೆನು ತಥಾಪಿ=ಆದರೂ ಸಹ ಸೀಮಾರ್ಥಂ=ವೇದಪ್ರಾಮಾಣ್ಯವನ್ನು ರಕ್ಷಿಸುವದಕ್ಕೋಸ್ಕರ (ತ್ವಂ=ನೀನು ವಿಪ್ರತನುಂ=ಬ್ರಾಹ್ಮಣ ದೇಹವನ್ನು ಅವಾಪ್ಯ=ಹೊಂದಿ ಮತ್ಪ್ರಸಾದಾತ್=ನನ್ನ ಪರಮಾನುಗ್ರಹದಿಂದಲೇ ವಿಮುಕ್ತಃ=ಸ ಸಾರದಿಂದ ಮುಕ್ತನು ಭವ=ಆಗು (ಎಂದು ಹೇಳಿದನು)

ಈ ಕಥೆಯಿಂದ ನಮಗೆ ತಿಳಿಯುವದೇನೆಂದರೆ—(1) ಪರಮಾತ್ಮನು ಸರ್ವತಂತ್ರ ಸ್ವತಂತ್ರನು ಯಾರನ್ನಾ ಸ ಮುಕ್ತರನ್ನಾಗಿ ಯಾವಾಗಲೂ ಮಾಡಬಲ್ಲನು. ಆದರೆ ವೇದವು–"ಸಾಧನವಾದ ನಂತರವೇ ಭಗದನುಗ್ರಹ ನಂತರ ಮೋಕ್ಷ. ಸಾ ನವು ಭಗವಂತನ ಜ್ಞಾನಸಂಪಾದನೆ. ಈ ಶ್ರೇಷ್ಟಜ್ಞಾನವು ಬ್ರಹ್ಮ ಮೀಮಾಂಸಾದಿಂದ ಬ್ರಾಹ್ಮಣದೇಹದಲ್ಲಿ." ಎಂದು ವಿಧಿಸಿ ರಿಂದ ಅದನ್ನು ರಕ್ಷಿಸಲು ಈ ಕೀಟದದೇಹದಿಂದ ಮುಕ್ತಿಯನ್ನು ಕೊಡದೇ ಬ್ರಾಹ್ಮಣ ದೇಹಕ್ಕೆ ಹೋಗಲು ಅನುಗ್ರಹಿಸಿದ

(2) ಪರಮಾತ್ಮನಿಗೆ ಅಘಟಿತಘಟನಾಶಕ್ತಿ ಇದೆ ಎನ್ನುವದು ಕಲ್ಪನೆಯಲ್ಲ. ವಾಸ್ತವವಾಗಿದೆ ಎಂದು ತಿಳಿಸಲು ಕೀಟವನ ರಾಜನನ್ನಾಗಿ ಮಾಡಿ ಸಿಂಹಾಸನದಲ್ಲಿ ಕುಳ್ಳಿರಿಸಿ ಸಾಮಂತರಾಜರಿಂದ ರಾಜಗೌರವ ಮಾಡಿಸಿದನು.

(3) ಬ್ರಾಹ್ಮಣ ದೇಹ ಬಂದಿದೆ ಎನ್ನುವ ಮಾತ್ರಕ್ಕೆ ಮೋಕ್ಷ ಸಿಕ್ಕುವದಿಲ್ಲ. ಅಲ್ಲಿಗೆ ಬಂದಾಗ ಭಗವದನುಗ್ರಹದಿಂದ ಸರಿಯಾಗಿ ಸಾಧನವಾಗಬೇಕು ಅಂದರೆ ಶ್ರವಣ ಮನನ ನಿದಿಧ್ಯಾಸನಗಳಾಗಿ ಅಪರೋಕ್ಷಜ್ಞಾನವಾಗಿ ನಂತರ ಭಗವದನುಗ್ರ ದಿಂದಲೇ ಮೋಕ್ಷವೂ ಆಗಬೇಕು.

ಜ್ಞಾನಂ ಚ ತಸ್ಮೈ ವಿಮುಲಂ ದದೌ ಸ ಮಹೀಂ ಚ ಸರ್ವಾಂ ಬುಭುಜೇ ತದಂತೇ ।
ತ್ಯಕ್ತ್ವಾ ತನುಂ ವಿಪ್ರವರತ್ವಮೇತ್ಯ ಪದಂ ಹರೇರಾಪ ಸುತತ್ತ್ವವೇದೀ ॥ ೬೭ ॥

ಚ=ಮತ್ತು ಸಃ=ಆ ಶ್ರೀ ವೇದವ್ಯಾಸದೇವರು ತಸ್ಮೈ = ಆ ಕೀಟದ ದೇಹದಲ್ಲಿರುವ ಜೀವನಿಗೆ ವಿಮುಲಂ=ನಿರ್ದೂ ವಾದ ಜ್ಞಾನಂ = ಜ್ಞಾನವನ್ನು ದದೌ=ಕೊಟ್ಟನು. (ಆ ಜೀವನು) ಸರ್ವಾಂ=ಎಲ್ಲ ಮಹೀಂ=ಭೂಮಿಯನ್ನು ಕೂಡ ಬುಭುಜೆ ಭೋಗಿಸಿದನು. ತದಂತೇ=ಈ ರೀತಿ ಭೋಗಿಸಿ ರಾಜ್ಯವಾಳಿದ ನಂತರ ತನುಂ=ಆ ದೇಹವನ್ನು ತ್ಯಕ್ತ್ವಾ=ಬಿಟ್ಟು ವಿಪ್ರವರತ್ವ ಶ್ರೇಷ್ಠ ಬ್ರಾಹ್ಮಣದೇಹವನ್ನು ಏತ್ಯ=ಹೊಂದಿ ಸುತತ್ತ್ವವೇದೀ(ಸನ್) ಉತ್ತಮ ಜ್ಞಾನಿ ಆಗಿ ಹರೇಃ=ಶ್ರೀ ಹರಿಯ ಪದಂ ಸ್ಥಾನವನ್ನು (ಮೋಕ್ಷವನ್ನು) ಆಪ=ಹೊಂದಿದನು.

ಏವಂ ಬಹೂನ್ ಸಂಸೃತಿ ಬಂಧತಃ ಸ(ಪ್ರಭುಃ) ವ್ಯಮೋಚಯದ್ ವ್ಯಾಸತನುರ್ಜನಾರ್ದನಃ
ಬಹೂನ್ಯಚಿಂತ್ಯಾನಿ ಚ ತಸ್ಯ ಕರ್ಮಾಣ್ಯಶೇಷದೇವೇಶ ಸದೋದಿತಾನಿ ॥ ೬೮ ॥

ಏವಂ=ಈ ರೀತಿಯಲ್ಲಿ (ಪ್ರಭುಃ=ಸಮರ್ಥರಾದ) ಸಃ=ಆ ಜನಾರ್ದನಃ=ಜನ=ಜನರ ಉತ್ಪತ್ತಿಯನ್ನು ಅರ್ದನ ನಾಶಮಾಡತಕ್ಕ ವ್ಯಾಸತನುಃ=ಶ್ರೀ ವೇದವ್ಯಾಸದೇವರು ಸಂಸೃತಿಬಂಧತಃ=ಸಂಸಾರದ ಬಂಧದ ದೆಶೆಯಿಂದ ಬಹೂನ್=ಬ ಜೀವರನ್ನು ವ್ಯಮೋಚಯದ್=ಮುಕ್ತರನ್ನಾಗಿ ಮಾಡಿದರು. ತಸ್ಯ=ಆ ಶ್ರೀ ವೇದವ್ಯಾಸ ರೂಪೀ ಶ್ರೀ ಹರಿಯ ಕರ್ಮಾಣಿ ಕರ್ಮಗಳು ಬಹೂನಿ=ಅನೇಕವಾಗಿವೆ. ಅಚಿಂತ್ಯಾನಿ=ನಮ್ಮಿಂದ ಪೂರ್ಣವಿಚಾರಮಾಡಿ ತಿಳಿಯಲು ಅಶಕ್ಯವಾಗಿವೆ. ಚ=ಮ ಅಶೇಷ ದೇವೇಶ ಸದೋತಿತಾನಿ=ಸಮಸ್ತ ದೇವತಾ ಶ್ರೇಷ್ಠರಿಂದ ಯಾವಾಗಲೂಕೀರ್ತನ ಮಾಡಲ್ಪಡುತ್ತಿರುತ್ತವೆ.

ಅಥಾಸ್ಯ ಪುತ್ರತ್ವಮವಾಪ್ತುಮಿಚ್ಛಂಶ್ಚ ಚಾರರುದ್ರಃ ಸುತಪಸ್ತದೀಯಮ್ ।
ದದೌ ಚ ತಸ್ಮೈ ಭಗವಾನ್ ವರಂ ತಂ ಸ್ವಯಂ ಚ ತಪ್ತ್ವೈವ ತಪೋ ವಿಮೋಹಯನ್ ॥

ಅಥ=ಅನಂತರ ಅಸ್ಯ=ಈ ಶ್ರೀ ವೇದವ್ಯಾಸದೇವರ ಪುತ್ರತ್ವಂ=ಪುತ್ರಭಾವವನ್ನು ಅವಾಪ್ತುಂ=ಹೊಂ ಇಚ್ಛನ್=ಇಚ್ಛಿಸಿದ ರುದ್ರಃ=ಶ್ರೀ ರುದ್ರದೇವರು ತದೀಯಂ= ಶ್ರೀವೇದವ್ಯಾಸ ವಿಷಯಕವಾದ (ಅವರ ಪ್ರೀತಿಜನಕವ

ಸುತಪಃ=ಸಮೀಚೀನ ತಪಸ್ಸನ್ನು ಚಚಾರ=ಮಾಡಿದನು (ಶ್ರೀ ವೇದವ್ಯಾಸದೇವರ ಮಗನಾಗಿಹುಟ್ಟಬೇಕೆಂದು ಅಪೇಕ್ಷೆಯಿಂದ ಶ್ರೀ ರುದ್ರ ದೇವರು ಶ್ರೀವೇದವ್ಯಾಸರ ಅನುಗ್ರಕ್ಕಾಗಿ ತಪಸ್ಸನ್ನುಮಾಡಿದರು.) ಸ್ವಯಂ=ತಾನೇ ತಪಃ=ತಪಸ್ಸನ್ನು ಸ ತಪ್ತ್ವಾ=ಮಾಡಿ ಶ್ರೀರುದ್ರದೇವರು ನನ್ನ ಮಗನಾಗಲಿ ಎಂಬ ಇಚ್ಛೆಯಿಂದ ತಪಸ್ಸನ್ನು ಮಾಡಿದವರಂತೆ ಮಾಡಿ ವಿಮೋಹಯನ್=ಅಸುರರನ್ನು ಮೋಹಗೊಳಿಸತಕ್ಕ ಭಗವಾನ್=ಶ್ರೀ ವೇದವ್ಯಾಸದೇವರಾದರೂ ತಸ್ಮೈ=ಆ ರುದ್ರದೇವರಿಗೆ ತಂ-ವರಂ=ತನ್ನ ಮಗನಾಗುವ ಪ್ರಸಾದವನ್ನು ದದೌ=ಕೊಟ್ಟರು.

ವಿಮೋಹನಾಯಾಸುರಸರ್ಗಿಣಾಂ ಪ್ರಭುಃ ಸ್ವಯಂ ಕರೋತೀವ ತಪಃ ಪ್ರದರ್ಶಯೇತ್ ॥
ಕಾಮಾದಿ ದೋಷಾಂಶ್ಚ ಮೃಷೈವ ದರ್ಶಯೇನ್ನತಾವತಾ ತೇsಸ್ಯ ಹಿ ಸಂತಿ ಕುತ್ರಚಿತ್॥೭೦॥

ಅಸುರಸರ್ಗಿಣಾಂ=ಅಸುರ(ಮುಕ್ತಿಗೆ ಅಯೋಗ್ಯ)ಕುಲದಲ್ಲಿ ಸರ್ಗಿಣಾಂ=ಬಂದವರಿಗೆ (ಸ್ವಭಾವತಃ ಮುಕ್ತಿಗೆ ಅಯೋಗ್ಯರಾದವರಿಗೆ) ವಿಮೋಹನಾಯ=ಮೋಹ ಮಾಡುವದಕ್ಕೋಸ್ಕರ ಪ್ರಭುಃ=ಸಮರ್ಥರಾದ ಶ್ರೀ ವೇದವ್ಯಾಸದೇವರು ಸ್ವಯಂ=ತಾನೇ ತಪಃ=ತಪಸ್ಸನ್ನು ಕರೋತೀವ=ಮಾಡುವವರಂತೆ ಪ್ರದರ್ಶಯೇತ್=ಪ್ರದರ್ಶಿಸುತ್ತಾನೆ ಚ=ಮತ್ತು ಕಾಮಾದಿದೋಷಾನ್=ಕಾಮಾದಿದೋಷಗಳನ್ನು ಮೃಷೈವ=ಸುಳ್ಳಾಗಿಯೇ (ತನ್ನಲ್ಲಿ ಇರುವಂತೆ) ದರ್ಶಯೇತ್=ತೋರಿಸುತ್ತಾನೆ ತಾವತಾ=ಹೀಗೆ ತನ್ನಲ್ಲಿ ದೋಷಗಳು ಇರುತ್ತವೆ. ಮತ್ತು ತಪಸ್ಸನ್ನು ಮಾಡುತ್ತಾನೆ ಎಂದು ತೋರಿಸಿದ್ದರಿಂದ ಅಸ್ಯ=ಈ ಶ್ರೀವೇದವ್ಯಾಸದೇವರಿಗೆ ತೇ=ಆ ದೋಷಗಳು ಕುತ್ರಚಿತ್=ಯಾವ ದೇಶ, ಯಾವ ಕಾಲ, ಯಾವ ವಿಷಯದಲ್ಲಿಯೂ ಸಹ ನ ಸಂತಿ=ಇರುವದಿಲ್ಲ. ಹಿ=ಪ್ರಾಮಾಣಿಸಿದ್ದ.

ತತಸ್ತ್ವರಣ್ಯೋಃ ಸ್ಮ ಬಭೂವ ಪುತ್ರಕಃ ಶಿವೋಸ್ಯಸೋಭೂಚ್ಛುಕನಾಮಧೇಯಃ ।
ಶುಕೀಹಿ ಭೂತ್ವಾsಭ್ಯಗಮದ್ ಘೃತಾಚೀ ವ್ಯಾಸಂ ವಿಮಥ್ನಂತಮುತಾರಣೀ(ಣೇಂ) ತಮ್ ॥೭೧॥

ಘೃತಾಚೀ=ಘೃತಾಚೀ ಎಂಬ ಹೆಸರುಳ್ಳ ಅಪ್ಸರಾಸ್ತ್ರೀಯು ಅರಣೀಂ=ಯಜ್ಞಕ್ಕೆ ಅಗ್ನಿಯನ್ನು ಉತ್ಪಾದಿಸುವ ಕಟ್ಟಿಗೆಯನ್ನು ವಿಮಥ್ನಂತಂ=ತಿಕ್ಕುತ್ತಿರುವಂತಹ ತಂ=ವ್ಯಾಸಂ=ಶ್ರೀ ವೇದವ್ಯಾಸದೇವರನ್ನು (ಕುರಿತು) ಶುಕೀ ಹಿ ಭೂತ್ವಾ= ಗಿಳಿಯಾಗಿ (ಗಿಳಿಯ ರೂಪವನ್ನು ತಗೆದುಕೊಂಡು) ಅಭ್ಯಗಮತ್ = ಬಂದಳು. (ಹೊಂದಿದಳು ಅವಳನ್ನು ನೋಡಿ ಮೋಹಿಸಿದವರಂತೆ ನಟಿಸಿದರು.) ತತಃ = ಅನಂತರದಲ್ಲಿ ಶಿವಃ = ಶ್ರೀ ರುದ್ರದೇವರು ಅಸ್ಯ = ಶ್ರೀ ವೇದವ್ಯಾಸದೇವರಿಗೆ ಅರಣ್ಯೋಃ= ಎರಡು ಅರಣಿಗಳ ದೆಶೆಯಿಂದ ಪುತ್ರಕಃ= ಮಗನು ಬಭೂವಸ್ಮ= ಆದರು. ಸಃ= ಹೀಗೆ ಹುಟ್ಟಿದ ಶ್ರೀ ರುದ್ರದೇವರು ಶುಕನಾಮಧೇಯಃ= ಶುಕ ಎಂದು ಹೆಸರುಳ್ಳವರಾ ಅಭೂತ್=ಆದರು.

ಅಕಾಮಯನ್ ಕಾಮುಕವತ್ ಸಭೂತ್ವಾ ತಯಾsರ್ಥಿತಸ್ತಂ ಶುಕನಾಮಧೇಯಮ್ ।
ಚಕ್ರೇ ಹ್ಯರಣ್ಯೋಸ್ತನಯಂ ಚ ಸೃಷ್ಟ್ವಾವಿವೋಹಯಂ ಸ್ತತ್ವಮಾರ್ಗೇಷ್ವಯೋಗ್ಯಾನ್॥೭೨॥

ಅಕಾಮಯನ್=ಕಾಮನೆರಹಿತನಾದ ಸಃ=ಆ ವೇದವ್ಯಾಸದೇವರು ಕಾಮುಕವತ್=ಕಾಮುಕಪುರುಷರಂತೆ ಭೂತ್ವಾ=ಆಗಿ ತಯಾ=ಆ ಘೃತಾಚಿಯಿಂದ ಆರ್ಥಿತಃ(ಸನ್)=ಪ್ರಾರ್ಥಿತರಾಗಿ ಅರಣ್ಯೋಃ=ಅರಣಿಗಳಲ್ಲಿ ॥ ತನಯಂ=ಮಗನನ್ನಾಗಿ ಸೃಷ್ಟ್ವಾ=ಸೃಷ್ಟಿಸಿ ತತ್ವಮಾರ್ಗೇಷು=ತತ್ವಜ್ಞಾನದ(ಮಾರ್ಗ) ಪದ್ಧತಿಯಲ್ಲಿ ಅಯೋಗ್ಯಾನ್=ಅಯೋಗ್ಯರಾದ ಜೀವರನ್ನು ವಿಮೋಹಯನ್(ಸನ್) ಮೋಹಮಾಡತಕ್ಕವರಾಗಿ ತಂ=ಅರಣಿಯಲ್ಲಿ ಹುಟ್ಟಿದ ಶ್ರೀ ರುದ್ರದೇವರನ್ನು ಶುಕನಾಮಧೇಯಮ್=ಶುಕ ಎಂಬ ಹೆಸರು ಉಳ್ಳವರನ್ನಾಗಿ ಚಕ್ರೇ =ಮಾಡಿದರು.

ಶುಕಂ ತಮಾಶು ಪ್ರವಿವೇಶವಾಯುರ್ವ್ಯಾಸಸ್ಯ ಸೇವಾರ್ಥಮಥಾಸ್ಯ ಸರ್ವಮ್ ।
ಜ್ಞಾನಂ ದದೌ ಭಗವಾನ್ ಸರ್ವವೇದಾನ್ ಸಭಾರತಂ ಭಾಗವತಂ ಪುರಾಣಮ್ ॥ ೭೩ ॥

ವ್ಯಾಸಸ್ಯ=ಶ್ರೀವೇದವ್ಯಾಸದೇವರ ಸೇವಾರ್ಥಂ=ಸೇವೆಗೋಸ್ಕರವಾಗಿ ವಾಯುಃ=ಶ್ರೀವಾಯುದೇವರು ತಂ=ಆ ಶುಕಂ=ಶುಕಾಚಾರ್ಯರನ್ನು ಆಶು=ಕೂಡಲೇ ಪ್ರವಿವೇಶ=ಪ್ರವೇಶಿಸಿದರು. (ಶ್ರೀ ವಾಯುದೇವರ ಪ್ರವೇಶವು ಶ್ರೀ ಶುಕಾಚಾರ್ಯರಲ್ಲಿ ಆಯಿತು.) ಅಸ್ಯ=ಈ ಶುಕಾಂತರ್ಗತ ವಾಯುದೇವರಿಗೆಅಪ್ರಧಾನವಾಗಿ ಶುಕಾಚಾರ್ಯರಿಗೆ ಸಭಾರತಂ=ಮಹಾಭಾರತದಿಂದ

ಸಹಿತವಾದ ಭಾಗವತಂ ಪುರಾಣಂ=ಭಾಗವತ ಪುರಾಣವನ್ನು ಸರ್ವಾನ್ ವೇದಾನ್=ಸಕಲವೇದಗಳನ್ನೂ (ಮತ್ತು ಈ ಗ್ರಂಥಗಳಿಂದ ಪ್ರತಿಪಾದಿತವಾದ ಎಲ್ಲ ವಿಷಯಗಳ ಬಗ್ಗೆ) ಸರ್ವಂ=ಸಮಸ್ತವಾದ ಜ್ಞಾನಂ=ಜ್ಞಾನವನ್ನು ದದೌ=ಕೊಟ್ಟರು.

ಶೇಷೋಥ ಪೈಲಂ ಮುನಿಮಾವಿಶತ್ ತದಾ ವೀಶಃ ಸುಮಂತುಮಪಿ ವಾರುಣಿಂ ಮುನಿಮ್ ।
ಬ್ರಹ್ಮಾsವಿಶತ್ ತಮುತ ವೈಶಂಪಾಯನಂ ಶಕ್ರಶ್ಚ ಜೈಮಿನಿಮಥಾವಿಶದ್ ವಿಭುಃ ॥ ೭೪ ॥

ತದಾ=ಶ್ರೀ ವಾಯುದೇವರು ಶುಕಾಚಾರ್ಯರನ್ನು ಪ್ರವೇಶಿಸಿದ ಕಾಲದಲ್ಲಿ (ವ್ಯಾಸಸ್ಯ ಸೇವಾರ್ಥಂ=ಶ್ರೀ ವೇದವ್ಯಾಸದೇವರ ಸೇವೆಗೋಸ್ಕರ) ಪೈಲಂ ಮುನಿಂ=ಪೈಲ ಋಷಿಗಳನ್ನ ಶೇಷಃ = ಶೇಷದೇವರು ಆವಿಶತ್=ಪ್ರವೇಶಿಸಿದರು ಅಥ=ಅನಂತರ ವೀಶಃ = ಪಕ್ಷೀಶರಾದ ಗರುಡ ದೇವರು ವಾರುಣಿಂ=ವರುಣದೇವರ ಪುತ್ರರಾದ ಸುಮಂತುಂಅಪಿ=ಸುಮಂತು ಎಂಬ ಮುನಿಗಳನ್ನೂ ಕೂಡ ಬ್ರಹ್ಮಾ = ಬ್ರಹ್ಮದೇವರು ಉತ=ಮತ್ತು ತಂ = ಆ ಪ್ರಸಿದ್ಧರಾದ ವೈಶಂಪಾಯನಂ=ವೈಶಂಪಾಯನರನ್ನು ಆವಿಶತ್= ಪ್ರವೇಶಿಸಿರುವರು. ಅಥ=ಅನಂತರದಲ್ಲಿ ವಿಭುಃ = ಸರ್ವಥರಾದ ಶಕ್ರಶ್ಚ=ದೇವೇಂದ್ರರೂ ಕೂಡ ಜೈಮಿನಿಂ=ಜೈಮಿನಿ ಎಂಬವರನ್ನು ಆವಿಶದ್=ಪ್ರವೇಶಿಸಿದರು.

ಕೃಷ್ಣಸ್ಯ ಪಾದ ಪರಿಸೇವನೋತ್ಸಕಾಃ ಸುರೇಶ್ವರಾ ವಿವಿಶುರಾಶುತಾನ್ ಮುನೀನ್ ।
ಸಮಸ್ತವಿದ್ಯಾಃ ಪ್ರತಿಪಾದ್ಯ ತೇಷ್ವಸಾ ಪ್ರವರ್ತಕಾಂಸ್ತಾನ್ ವಿದಧೇ ಹರಿಃ ಪುನಃ ॥ ೭೫ ॥

ಕೃಷ್ಣಸ್ಯ=ಶ್ರೀ ವೇದವ್ಯಾಸ ದೇವರ ಪಾದಪರಿಸೇವನೋತ್ಸುಕಾಃ = ಪಾದದ ಸೇವೆಯನ್ನು ಮಾಡಲು ಕುತೂಹಲಿಗಳಾದಂತಹ ಸುರೇಶ್ವರಾಃ=ದೇವ ಶ್ರೇಷ್ಠರುಗಳು ಆಶು = ಕೂಡಲೇ ತಾನ್ = ಶ್ರೀವೇದವ್ಯಾಸರ ಸನ್ನಿಧಿಯಲ್ಲಿ ಇರುವ ಮುನೀನ್=ಮುನಿಗಳನ್ನು ವಿವಿಶುಃ=ಪ್ರವೇಶಿಸಿದರು. (ತಾನ್ ಮುನೀನ್=ಆ ಮುನಿಗಳನ್ನು ಅವರಲ್ಲಿರುವ ದೇವತೆಗಳನ್ನು) ಕುರಿತು ಸಮಸ್ತವಿದ್ಯಾಃ=ಎಲ್ಲ ಶಾಸ್ತ್ರಗಳನ್ನು ಪ್ರತಿಪಾದ್ಯ=ಪ್ರತಿಪಾದಿಸಿ (ಉಪದೇಶಿಸಿ) ತೇಷು=ಅವರಲ್ಲಿ ತಾನ್=ಹಿಂದೆ ಹೇಳಿದವರನ್ನು ಪ್ರವರ್ತಕಾನ್ = ಆಯಾ ಶಾಸ್ತ್ರಪ್ರವರ್ತಕರನ್ನಾಗಿ ಪುನಃ=ಮತ್ತೆ ಹರಿಃ=ಶ್ರೀವೇದವ್ಯಾಸದೇವರು ವಿದಧೇ= ಮಾಡಿದರು (ಮೊದಲು ಸಕಲ ಶಾಸ್ತ್ರಗಳಿಗೆ ತಾವೇ ಮೂಲ ಪ್ರವರ್ತಕ (ಉಪದೇಶಕ)ರಾಗಿದ್ದರೂ ಸಹ ತಮ್ಮ ಶಿಷ್ಯರ ಪ್ರಸಿದ್ಧಿಯನ್ನುಂಟು ಮಾಡುವದಕ್ಕಾಗಿ ಒಬ್ಬೊಬ್ಬರನ್ನು ಒಂದೊಂದು ಶಾಸ್ತ್ರಕ್ಕೆ ಪ್ರವರ್ತಕರನ್ನಾಗಿ ಮಾಡಿದನು.) ಯಾರು ಯಾವ ಶಾಸ್ತ್ರಕ್ಕೆ ಪ್ರವರ್ತಕರೆಂದು ಮುಂದಿನ ಶ್ಲೋಕಗಳಲ್ಲಿ ವಿವರಿಸುತ್ತಾರೆ.)

ಋಚಾಂ ಪ್ರವರ್ತಕಂ ಪೈಲಂ ಯಜುಷಾಂ ಚ ಪ್ರವರ್ತಕಮ್ ।
ವೈಶಮ್ಪಾಯನ ಮೇ ವೈಕಂ ದ್ವಿತೀಯಂ ಸೂರ್ಯ ಮೇವ ಚ ॥ ೭೬ ॥

ಇಲ್ಲಿ ಚಂದ್ರ ಸುಗ್ರೀವರನ್ನು ವ್ಯಾವೃತ್ತಿ ಮಾಡುವುದಕ್ಕೋಸ್ಕರ ಪ್ರಾಯಃ ಎಂಬ ಶಬ್ದವನ್ನು ಹಾಕಿದ್ದಾರೆ. ಚಂದ್ರನಿಗೆ ಕಲ್ಪ ಪರ್ಯಂತರವಾಗಿ ಮೇರು ಪರ್ವತ ಸಂಚಾರದಿಂದ ತನ್ನ ಯೋಗ್ಯತೆಯಿಂದ ಹೆಚ್ಚು ಪುಣ್ಯ ಪ್ರಾಪ್ತವಾದ್ದರಿಂದ ಆ ಪುಣ್ಯ ನಾಶಕ್ಕೋಸ್ಕರ ಅವನ ಮನಸ್ಸು ತನ್ನಿಂದ ಉತ್ತಮರಾದ ಬೃಹಸ್ಪತ್ಯಾಚಾರ್ಯರ ಹೆಂಡತಿಯಂ ಪರಿಗ್ರಹಣ ರೂಪವಾದ ಪಾಪ ಮಾರ್ಗೇ=ಪಾಪಕರ್ಮದಲ್ಲಿ ಆಸಕ್ತವಾಗಿದೆ. ಹಾಗೆಯೇ ಸುಗ್ರೀವನು ರಾಮನ ಸೇವೆಯನ್ನು ಮಾಡಿ ತನ್ನ ಯೋಗ್ಯತೆಯಿಂದ ಹೆಚ್ಚು ಪುಣ್ಯವನ್ನು ಮಾಡಿದನಂ. ಆ ಪುಣ್ಯದ ನಾಶಕ್ಕೋಸ್ಕರ ಅವನ ಮನಸ್ಸು ಕೂಡ ತನ್ನ ಅಣ್ಣನಾದ ವಾಲಿಯ ಹೆಂಡತಿಯಂ ಪರಿಗ್ರಹಣರೂಪವಾದ ಪಾಪಕರ್ಮದಲ್ಲಿ ಆಸಕ್ತವಾಯಿತಂ. ಆತ್ಮಮನಶ್ಚ=ಅವರಂತೆ ಯೋಗ್ಯತೆಯಿಂದ ಹೆಚ್ಚಿ ಪುಣ್ಯವನ್ನು ಮಾಡದಿರುವ ನನ್ನ ಮನಸ್ಸಾದರೂ ಸಕ್ತಂ=ಕಾಳಿಯಲ್ಲಿ ಆಸಕ್ತವಾಗಿದೆ. ಇತಿ=ಈ ಕಾರಣದಿಂದ ತಾಮಪಿ=ದಾಶಕನ್ಯೆಯೆಂದು ಪ್ರಸಿದ್ಧಳಾದರೂ ಕೂಡ ದಾಶಗೃಹೇ=ಸಾವಿಕನ ಮನೆಯಲ್ಲಿ ವಿವರ್ಧಿತಾಮೇವ=ಹುಟ್ಟಿದವಳಲ್ಲ. ರಾಜ ಕನ್ಯೆಗೆ ಯೋಗ್ಯವಾದ ಅನ್ನ ಪಾನ ವಿಶೇಷದಿಂದ ಬೆಳೆದವಳನ್ನಾಗಿಯೇ ಜ್ಞಾತ್ವಾ=ತಿಳಿದು ಸದ್ಧರ್ಮರತಃ=ಸವಿಂಶೀನ ಧರ್ಮದಲ್ಲಿ ಆಸಕ್ತನಾದ ಶಂತನುಃ=ಶಂತನು ರಾಜನು ಜಗ್ರಾಹ=ಸ್ವೀಕರಿಸಿದನು.

ಸ್ವಚ್ಛಂದ ಮೃತ್ಯುತ್ವವರಂ ಪ್ರದಾಯ ತಥಾಸ್ಯಜೇಯತ್ವಮಧೃಷ್ಯತಾಂ ಚ ।
ಯುದ್ಧೇಷು ಭೀಷ್ಮಸ್ಯ ನೃಪೋತ್ತಮಃ ಸ ರೇಮೇ ತಯೈವಾಬ್ದಗಣಾನ್ ಬಹೂಂಶ್ಚ ॥ ೮೧ ॥

ನೃಪೋತ್ತಮಃ ರಾಜಶ್ರೇಷ್ಠನಾದ ಸಃ=ಆ ಶಂತನುವು ಭೀಷ್ಮಸ್ಯ ಭೀಷ್ಮನಿಗೆ ಸ್ವಚ್ಛಂದಮೃತ್ಯುತ್ವವರಂ=ತನ್ನ ಇಚ್ಛೆ ಯಿಂದಲೇ ಮರಣರೂಪವಾದ ವರವನ್ನು ತಥಾ=ಹಾಗೆಯೇ ಯುದ್ಧೇತು=ಯುದ್ಧಗಳಲ್ಲಿ ಅಜೇಯತ್ವಂ=ಇನ್ನೊಬ್ಬರಿಂದ ಪರಾಜಯ ಇಲ್ಲದಿರುವಿಕೆಯನ್ನೂ ಅಧೃಷ್ಯತಾಂಚ=ಬಲಾತ್ಕಾರದಿಂದ ಇನ್ನೊಬ್ಬರಿಂದ ಹಿಡಿಯಲ್ಪಡದಿರುವಿಕೆಯನೂ ಪ್ರದಾಯ=ಕೊಟ್ಟು ತಯೈವ=ಆ ಸತ್ಯವತಿಯಿಂದಲೇ ಬಹೂನ್=ಬಹಳವಿಧ್ದ ಗಣಾನ್=ಸಂವತ್ಸರಗಳ ಸಮೂಹಗಳಲ್ಲಿ ರೇಮೆ=ಕ್ರೀಡಿಸಿದನಂ. ಹಿ=ಅಂತಹ ಸಾಮರ್ಥ್ಯವು ಭೀಷ್ಮನಿಗೆ ಪ್ರಸಿದ್ಧವು. ॥ ೮೧ ॥

ಲೇಭೇ ಸ ಚಿತ್ರಾಂಗದಮತ್ರಪುತ್ರಂ ತಥಾದ್ವಿತೀಯಂಚ ವಿಚಿತ್ರ ವೀರ್ಯವಮ್ ॥
ತಯೋಶ್ಚ ಬಾಲ್ಯೇ ವ್ಯಸೃಜಚ್ಛರೀರಂ ಜೀರ್ಣೇನ ದೇಹೇನ ಚ ಕಿಂ ಮಮೇತಿ ॥ ೮೨ ॥

ಸಃ=ಆ ಶಂತನು ಚಕ್ರವರ್ತಿಯು ಅತ್ರ=ಈ ಸತ್ಯವತಿಯಲ್ಲಿ ಚಿತ್ರಾಂಗದಂ=ಚಿತ್ರಾಂಗದನೆಂಬ ಪುತ್ರಂ=ಮಗನನ್ನು ತಥಾ=ಹಾಗೆಯೇ ವಿಚಿತ್ರವೀರ್ಯಂ ವಿಚಿತ್ರ ವೀರ್ಯನೆಂಬ ದ್ವಿತೀಯಂಪುತ್ರಂ=ಎರಡನೆಯ ಮಗನನ್ನು ಲೇಭೇ = ಹೊಂದಿದನು. ತಯೋಃ=ಆ ಇಬ್ಬರು ಮಕ್ಕಳ ಬಾಲ್ಯೇ=ಬಾಲಿಕಾವಸ್ಥೆಯಲ್ಲಿಯೇ ಜೀರ್ಣೇನ=ಜೀರ್ಣವಾದ ದೇಹೇನ = ಶರೀರದಿಂದ ಮಮ=ನನಗೆ ಕಿಂ=ಏನು ಪ್ರಯೋಜನವು ಇತಿ=ಎಂಬುದಾಗಿ ಶರೀರಂ=ದೇಹವನ್ನು ವ್ಯಸೃಜತ್=ಬಿಟ್ಟನು ಹಿ=ಮಗನಿಗೆ ಸ್ವೇಚ್ಛಾಮರಣ ವರವನ್ನು ಕೊಟ್ಟ ಶಂತನುವಿಗೆ ಸ್ವೇಚ್ಛಾ ಮರಣವು ಪ್ರಸಿದ್ಧವು.

ಅವಃ ಸ್ವಚ್ಛಂದ ಮರಣವನ್ನೇ ಸ್ಪಷ್ಟ ಪಡಿಸುತ್ತಾರೆ.

ಸ್ವೇಚ್ಛಯಾ ವರುಣತ್ವಂ ಸ ಪ್ರಾಪನಾನಿಚ್ಛಯಾ ತನುಃ ॥
ತಸ್ಮಿನ್ ಕಾಲೇತ್ಯಜ್ಯತೇ ಹಿ ಬಲವದ್ಭಿರ್ವಧಂ ವಿನಾ ॥ ೮೩ ॥

ಸಃ=ಆ ಶಂತನುವು ಸ್ವೇಚ್ಛಯಾ=ತನ್ನ ಇಚ್ಛೆಯಿಂದಲೇ ವರುಣತ್ವಂ=ವರುಣ ಸ್ವರೂಪವನ್ನು ಪ್ರಾಪ= ಹೊಂದಿದನು. ಇಚ್ಛೆಯಿಲ್ಲದೇ ಹೊಂದಲಿಲ್ಲ. ಆದ್ದರಿಂದ ಸ್ವಚ್ಛಂದ ಮೃತ್ಯುತ್ವಕ್ಕೆ ಹಾನಿ ಇಲ್ಲ. ಬಲವದ್ಭಿಃ=ಯೋಗ ಸಾಮರ್ಥ್ಯ ವುಳ್ಳವರಿಂದ ತಸ್ಮಿನ್‌ಕಾಲೇ=ಮರಣೇಚ್ಛಾ ಕಾಲದಲ್ಲಿ ವಧಂವಿನಾ=ಹನನವಿಲ್ಲದೇ ಸ್ವೇಚ್ಛಯೈವ=ತಮ್ಮ ಇಚ್ಛೆಯಿಂದಲೇ ತನುಃ=ಶರೀರವು ತ್ಯಜ್ಯತೇ=ಬಿಡಲ್ಪಡುತ್ತದೆ. ಹಿ=ಯೋಗೈಶ್ವರ್ಯದ ಸಾಮರ್ಥ್ಯವುಸತೀದೇವ್ಯಾದಿಗಳಲ್ಲಿ ಪ್ರಸಿದ್ಧವು.

ಅವಃ ಹಿಂದೆ ಹೇಳಿದ ವಿಷಯಕ್ಕೆ ಅಪವಾದವನ್ನು ಹೇಳುತ್ತಾರೆ.

ಅತಿಸಕ್ತಾಸ್ತಪೋಹೀನಾಃ ಕಥಂಚಿನ್ಮೃತಿಮಾಪ್ನುಯುಃ ॥
ಅನಿಚ್ಛಯಾಪಿಹಿಯಥಾ ಮೃತಶ್ಚಿತ್ರಾಂಗದಾನುಜಃ ॥ ೮೪ ॥

ಚಿತ್ರಾಂಗದಾನುಜಃ=ಚಿತ್ರಾಂಗದನ ತಮ್ಮನಾದ ವಿಚಿತ್ರವೀರ್ಯನು ಅನಿಚ್ಛ=ಯಾಮರಣದ ಇಚ್ಛೆ ಇಲ್ಲದೆ ಕ್ಷಯರೋಗ ದಿಂದ ಪೀಡಿತನಾಗಿ ಯಂಥಾ=ಹೇಗೆ ಮೃತಃ=ಸತ್ತನೋ ತಥಾ=ಹಾಗೆಯೇ ಅತಿಸಕ್ತಾಃ=ವಿಷಯಗಳಲ್ಲಿ ಅತ್ಯಂತವಾಗಿ ಆಸಕ್ತರು ತಪೋಹೀನಾಃ=ತಪಸ್ಸಿನ ಬಲವಿಲ್ಲದವರು ಕಥಂಚಿತ್=ಮರಣಕ್ಕೆ ಕಾರಣವಾದ ರೋಗಾದಿಗಳಿಂದ ಅನಿಚ್ಛಯಾ=ಇಚ್ಛೆ ಇಲ್ಲ ದೇನೇ ಮೃತಿಂ=ಮರಣವನ್ನು ಆಪ್ನುಯುಃ=ಹೊಂದುವರು. ಹಿ=ವಿಚಿತ್ರವೀರ್ಯನಿಗೆ ವಿಷಯಾಸಕ್ತಿಯಂಶಾ ತಪೋರಾಹಿತ್ಯವೂ ಪ್ರಸಿದ್ಧವು ॥ ೮೪ ॥

ಅಥೌರ್ಧ್ವದೈಹಿಕಂ ಕೃತ್ವಾ ಪಿತುರ್ಭೀಷ್ಮೋಽಭ್ಯಷೇ ಚಯತ್ ।
ರಾಜ್ಯೇ ಚಿತ್ರಾಂಗದಂ ವೀರಂ ಯೌವರಾಜ್ಯೇಸ್ಯ ಚಾನುಜಮ್ ॥ ೮೫ ॥

ಅಥ=ಶಂತನು ರಾಜನು ಮೂಲಸ್ವರೂಪವನ್ನು ಹೊಂದಿದ ನಂತರ ಭೀಷ್ಮಃ=ಭೀಷ್ಮನು ಪಿತುಃ=ತಂದೆಯಾದ ಶಂತನುವಿಗೆ ಔರ್ಧ್ವದೈಹಿಕಂ=ದೇಹ ಪಾತಾನಂತರ ಮಾಡುವ ಪ್ರೇತ ಸಂಸ್ಕಾರವನ್ನು ಕೃತ್ವಾ=ಮಾಡಿ ರಾಜ್ಯೇ=ರಾಜ್ಯದಲ್ಲಿ ವೀರಂ=ಆರಬ್ದಾಂತಗಾಮಿಯಾದ ಚಿತ್ರಾಂಗದಂ=ಚಿತ್ರಾಂಗದನನ್ನು ಯೌವರಾಜ್ಯೇ=ಯುವರಾಜನ ಪಟ್ಟದಲ್ಲಿ ಅಸ್ಯ = ಈ ಚಿತ್ರಾಂಗದನ ಅನುಜಂ = ತಮ್ಮನಾದ ವಿಚಿತ್ರ ವೀರ್ಯನನ್ನು ಅಭ್ಯಷೇಚಯತ್=ಪಟ್ಟಾಭಿಷೇಕ ಮಾಡಿದನು. ॥ ೮೫ ॥

ಚಿತ್ರಾಂಗದೇನ ನಿಹತೋ ನಾಮ ಸ್ವಂ ತ್ವ ಪರಿತ್ಯಜನ್ ॥
ಚಿತ್ರಾಂಗದೋಽಕೃತೋದ್ವಾಹೋ ಗಂಧರ್ವೇಣ ಮಹಾರಣೇ ॥ ೮೬ ॥

ಅಕೃತೋದ್ವಾಹಃ=ಮದುವೆಯಾಗದಿರುವ ಚಿತ್ರಾಂಗದಃ=ಚಿತ್ರಾಂಗದನು ಸ್ವಂ=ತನ್ನ ನಾಮ = ಚಿತ್ರಾಂಗದನೆಂಬ ಹೆಸರನ್ನು ಅಪರಿತ್ಯಜನ್‌ಸನ್=ಬಿಡದವನಾಗಿ ಚಿತ್ರಾಂಗದೇನ=ಚಿತ್ರಾಂಗದನೆಂಬ ಗಂಧರ್ವೇಣ=ಗಂಧರ್ವನಿಂದ ಮಹಾರಣೇ=

ದೊಡ್ಡ ಯುದ್ದದಲ್ಲಿ ನಿಹತಃ=ಕೊಲ್ಲಲ್ಪಟ್ಟನು. [ಚಿತ್ರಾಂಗದನೆಂಬ ಗಂಧರ್ವನು ಶಂತನು ಪುತ್ರನಾದ ಚಿತ್ರಾಂಗದನ ಹತ್ತಿರ ಹೇಳಿದನು. ಚಿತ್ರಾಂಗದನೆಂಬ ಹೆಸರು ನಿನಗೆ ಅಯೋಗ್ಯವಾದದ್ದು, ನನಗೆ ಮಾತ್ರ ಇರತಕ್ಕದ್ದು. ಆದ್ದರಿಂದ ಚಿತ್ರಾಂಗದನೆಂಬ ಹೆಸರನ್ನು ಬಿಟ್ಟುಬಿಡು ಎಂಬುದಾಗಿ. ಆಗ ಶಂತನು ಪುತ್ರನು ತನ್ನ ಹೆಸರನ್ನು ಬಿಡಲಿಕ್ಕೆ ಕೇಳಲಿಲ್ಲ. ಹಾಗಾದರೆ ಯುದ್ಧಕ್ಕೆ ಬಾ ಎಂದನು. ಯುದ್ಧದಲ್ಲಿ ಗಂಧರ್ವನು ಶಂತನು ಪುತ್ರನನ್ನು ಕೊಂದನು.] ॥ ೮೬ ॥

ವಿಚಿತ್ರವೀರ್ಯಂ ರಾಜಾನಂ ಕೃತ್ವಾಭೀಷ್ಮೋನ್ವಪಾಲಯತ್ ॥
ಅಥಕಾಶಿಸುತಾಸ್ತಿಸ್ರಸ್ತದರ್ಥಂ ಭೀಷ್ಮ ಆಹರತ್ ॥
ಅಂಬಾಮಪ್ಯಂಬಿಕಾನಾಮ್ನೀಂ ತಥೈವಾಂ ಬಾಲಿಕಾಂ ಪರಾಮ್ ॥ ೮೭ ॥
ಪಾಣಿಗ್ರಹಣಕಾಲೇತು ಬ್ರಹ್ಮದತ್ತಸ್ಯ ವೀರ್ಯವಾನ್ ॥
ವಿಜಿತ್ಯ ತಂ ಸಾಲ್ವರಾಜಂ ಸಮೇತಾನ್ ಕ್ಷತ್ರಿಯಾನಪಿ ॥ ೮೮ ॥

ಅನಂ=ಚಿತ್ರಾಂಗದನು ಸತ್ತ ನಂತರ ಭೀಷ್ಮಃ=ಭೀಷ್ಮನು ವಿಚಿತ್ರವೀರ್ಯಂ=ವಿಚಿತ್ರವೀರ್ಯನನ್ನು ರಾಜಾನಂ=ರಾಜನನ್ನಾಗಿ ಕೃತ್ವಾ=ಮಾಡಿ ಅಪಾಲಯತ್=ರಾಜ್ಯವನ್ನು ರಕ್ಷಿಸಿದನು. ಅಥ=ಅನಂತರ ವೀರ್ಯವಾನ್=ಪರಾಕ್ರಮವುಳ್ಳ ಭೀಷ್ಮನು ಬ್ರಹ್ಮದತ್ತಸ್ಯ=ಬ್ರಹ್ಮದತ್ತನೆಂಬ ಅಸುರನ ಪಾಣಿಗ್ರಹಣಕಾಲೇ=ಮಂದುವೆಯ ಸಮಯದಲ್ಲಿ ಸಾಲ್ವರಾಜಂ=ಸಾಲ್ವ ದೇಶಕ್ಕೆ ಅಧಿಪತಿಯಾದ ತಂ=ಆ ಬ್ರಹ್ಮದತ್ತನನ್ನು ಸಮೇತಾನ್=ಅಲ್ಲಿ ಸೇರಿರುವ ಕ್ಷತ್ರಿಯಾನಪಿ=ಕ್ಷತ್ರಿಯರನ್ನೂ ಕೂಡ ವಿಜಿತ್ಯ=ಗೆದ್ದು ಅಂಬಿಕಾನಾಮ್ನೀಂ=ಅಂಬಿಕೆಯೆಂದು ಹೆಸರುಳ್ಳವಳನ್ನೂ ತಥೈವ=ಹಾಗೆಯೇ ಪರಾಂ=ಇನ್ನೊಬ್ಬಳಾದ ಅಂಬಾಲಿಕಾಂ=ಅಂಬಾಲಿಕೆ ಎನ್ನುವವಳನ್ನು ಅಂಬಾಮಪಿ=ಪಾಣಿಗ್ರಹಣಕ್ಕೆ ಯೋಗ್ಯಳಲ್ಲದ ಅಂಬಾಮಪಿ=ಅಂಬೆಯನ್ನು ಕೂಡ ಕಾಶಿಸುತಾಃ=ಹೀಗೆ ಕಾಶಿರಾಜನ ಪುಣ್ಯ ಮಕ್ಕಳಾದ ತಿಸ್ರಃ=ಮೂವರನ್ನು ತದರ್ಥಂ=ಆ ವಿಚಿತ್ರವೀರ್ಯನಿಗೋಸ್ಕರ ಆಹರತ್=ಅಪಹರಿಸಿ ತಂದನು. ॥ ೮೭ ॥ ೮೮ ॥

~~ಅಂಬಿಕಾಂ ಬಾಲಿಕೇ ತತ್ರ ಸಂವಾದಂ ಚಕ್ರತುಃ ಶುಭೇ ॥~~
ಅಂಬಾಸಾ ಭೀಷ್ಮ ಭಾರ್ಯೈವ ಪೂರ್ವದೇಹೇತು ನೈಚ್ಛತ ॥ ೮೯ ॥

ತತ್ರ=ಆ ಮೂವರ ಮಧ್ಯದಲ್ಲಿ ಶುಭೇ=ಶಾಪಾದಿ ದೋಷವಿಲ್ಲದಿರುವುದರಿಂದ ಉತ್ತಮರಾದ ಅಂಬಿಕಾಬಾಲಿಕೇ=ಅಂಬಿಕಾ ಮತ್ತು ಅಂಬಾಲಿಕೆ ಎಂಬ ಇಬ್ಬರು ಕನ್ಯೆಯರು ಸಂವಾದಂ=ವಿಚಿತ್ರವೀರ್ಯನ ಹೆಂಡತಿಯಾಗುವ ವಿಷಯದಲ್ಲಿ ಸಮ್ಮತಿಯನ್ನು ಚಕ್ರತುಃ=ಮಾಡಿದರು. ಸಾ ಅಂಬಾ=ಆ ಅಂಬೆಯು ಪೂರ್ವದೇಹೇ=ವರಾಂಗಿತ್ವ ದೇಹದಲ್ಲಿ ಭೀಷ್ಮ ಭಾರ್ಯೈವ=ಭೀಷ್ಮಾಚಾರ್ಯರ ಮೂಲರೂಪನಾದ ದ್ಯುನಾಮಕ ವಸುವಿನ ಹೆಂಡತಿಯೇ ಸಾ=ಅವಳು ತು=ದೇವಪತ್ನಿಯರಿಗೆ ಪತಿಗಳಿಂದ ಇತರ ಮನುಷ್ಯ ಪತ್ನಿತ್ವವು ಯೋಗ್ಯವಲ್ಲವೆಂಬ ವಿಶೇಷದಿಂದ ಪತಿರಹಿತಳಾಗು ಎಂದು ಬ್ರಹ್ಮ ಶಾಪದಿಂದಲೂ ನೈಚ್ಛತ=ವಿಚಿತ್ರವೀರ್ಯನನ್ನು ಇಚ್ಛಿಸಲಿಲ್ಲ. ॥ ೮೯ ॥

ಶಾಪಾದ್ಧಿರಣ್ಯಗರ್ಭಸ್ಯ ಸಾಲ್ವಕಾಮಾಹಮಿತ್ಯಪಿ ।
ಉವಾಚ ತಾಂ ಸ ತತ್ಯಾಜ ಸಾಗಮತ್ಸಾಲ್ವಮೇವ ಚ ॥ ೯೦ ॥

ಸಾ=ಆ ಅಂಬೆಯು ಹಿರಣ್ಯಗರ್ಭಸ್ಯ=ಬ್ರಹ್ಮದೇವರ ಶಾಪಾತ್=ಪತಿರಹಿತಳಾಗು ಎಂಬ ಶಾಪದಿಂದ ಅಹಂ=ನಾನು ಸಾಲ್ವಕಾಮಾ=ಸಾಲ್ವದೇಶಕ್ಕೆ ಅಧಿಪತಿಯಾದ ಬ್ರಹ್ಮದತ್ತನಲ್ಲಿ ಇಚ್ಛೆ ಉಳ್ಳವಳು ಇತ್ಯಪಿ=ಎಂದು ನಿಂದಿತವಾದ ಮಾತನು ಉವಾಚ=ಹೇಳಿದಳು. ಸಃ=ಭೀಷ್ಮನು ತಾಂ=ಆ ಅಂಬೆಯನ್ನು ತತ್ಯಾಜ=ಬಿಟ್ಟನು. ಸಾ=ಅವಳು ಸಾಲ್ವಮೇವ=ಸಾಲ್ವನನ್ನೇ ಅಗಮಚ್ಚ=ಹೋದಳು. ॥ ೯೦ ॥

ತೇನಾಪಿ ಸಂಪರಿತ್ಯಕ್ತಾ ಪರಾಮೃಷ್ಟೇತಿ ಸಾ ಪುನಃ ।
ಭೀಷ್ಮಮಾಪ ಸ ಮೋಗೃಹ್ಣಾತ್ ಪ್ರಯಯೌ ಸಾಪಿ ಭಾರ್ಗವಮ್ ॥ ೯೧ ॥

ತೇನಾಪಿ=ಆ ಸಾಲ್ವನಿಂದಲೂ ಪರಾಮೃಷ್ಟಾ=ಅನ್ಯ ಪುರುಷರಿಂದ ಮುಟ್ಟಲ್ಪಟ್ಟವಳು ಇತಿ=ಎಂದು ಸಂಪರಿತ್ಯಕ್ತಾ= ಬಿಡಲ್ಪಟ್ಟ ಸಾ = ಆ ಅಂಬೆಯಂ ಭೀಷ್ಮಂ=ಭೀಷ್ಮನನ್ನು ಪುನಃ=ಮತ್ತೊಮ್ಮೆ ಉಪ=ಹೊಂದಿದಳು. ಸಃ=ಆ ಭೀಷ್ಮನಂ ನೋಗೃ ಹ್ಣಾತ್=ಅಂಬೆಯನ್ನು ಸ್ವೀಕರಿಸಲಿಲ್ಲ ಸಾಪಿ= ಆ ಅಂಬೆಯಾದರೂ ಭಾರ್ಗವಂ=ಪರಶುರಾಮದೇವರನ್ನು ಕಂರಿತಂ ಯಯೌ= ಹೋದಳು. ॥ ೯೦ ॥

ಭ್ರಾತುರ್ವಿವಾಹಯಾಮಾಸ ಸೋಽಂಬಿಕಾಮ್ಬಾಲಿಕೇ ತತಃ ॥
ಭೀಷ್ಮಾಯತು ಯಶೋದಾತುಂ ಯುಯುಧೇತೇನ ಭಾರ್ಗವಃ ॥ ೯೨ ॥

ತತಃ=ಆ ಅಂಬೆಯು ಹೋದ ಮೇಲೆ ಸಃ=ಆ ಭೀಷ್ಮನು ಅಂಬಿಕಾಬಾಲಿಕೇ=ಅಂಬಿಕಾಬಾಲಿಕೆಯೆಂಬ ಇಬ್ಬರನ್ನೂ ಭ್ರಾತುಃ=ತಮ್ಮನಾದ ವಿಚಿತ್ರವೀರ್ಯನಿಗೆ ವಿವಾಹಯಾಮಾಸ=ಮದುವೆ ಮಾಡಿಸಿದನಂ. ಭಾರ್ಗವಃ=ಭೀಷ್ಮನಂ ತನ್ನನ್ನು ವರಿಸುವಂತೆ ಮಾಡಬೇಕು ಇಲ್ಲವಾದರೆ ಕೊಲ್ಲಬೇಕು ಎಂದು ಪ್ರಾರ್ಥಿಸಿಕೊಳ್ಳಲ್ಪಟ್ಟ ಪರಶುರಾಮದೇವರು ಭೀಷ್ಮಾಯತು= ಭೀಷ್ಮನಿಗಾದರೂ ಯಶಃ=ಅವನ ಮಾತನ್ನು ಸತ್ಯಮಾಡುವ ಕೀರ್ತಿಯನ್ನು ದಾತಂ=ಕೊಡಲು ತೇನ=ಆ ಭೀಷ್ಮನಿಂದ ಯಯುಧೇ=ಯುದ್ಧಮಾಡಿದರಂ. ॥ ೯೨ ॥

ಅನಂತಶಕ್ತಿರಪಿ ಸನ್ನ ಭೀಷ್ಮಂ ನಿಜಘಾನಹ ॥
ಸಚಾಂ ಬಾಂ ಗ್ರಾಹಯಾಮಾಸ ಭೀಷ್ಮಕಾರುಣ್ಯಯಂತ್ರಿತಃ ॥ ೯೩ ॥

ಭೀಷ್ಮಕಾರುಣ್ಯಯಂತ್ರಿತಃ=ಭೀಷ್ಮರಲ್ಲಿರುವ ಕೃಪೆಯಿಂದ ಬದ್ಧರಾದ ಪರಶುರಾಮದೇವರು ಅನಂತಶಕ್ತಿರಪಿಸನ್= ಅಪರಿಮಿತ ಸಾಮರ್ಥ್ಯವುಳ್ಳವರಾದಾಗ್ಯೂ ಕೂಡ ಭೀಷ್ಮಂ=ಭೀಷ್ಮನನ್ನು ನಜಘಾನ=ಕೊಲ್ಲಲಿಲ್ಲ. ಅಂಬಾ = ಅಂಬೆಯನ್ನು ಗ್ರಾಹಯಾಮಾಸ=ಭೀಷ್ಮನಿಂದ ಸ್ವೀಕಾರ ಮಾಡಿಸಲೂ ಇಲ್ಲ. ಹ=ಪ್ರಸಿದ್ಧ. ॥ ೯೩ ॥

ಅನಂತಶಕ್ತಿಃ ಸಕಲಾಂತರಾತ್ಮಾಯಃ ಸರ್ವವಿತ್ಸರ್ವವಶೀಚ ಸರ್ವಜಿತ್ ॥
ನಯುತ್ಸವೋಽನ್ಯೋಸ್ತಿ ಕಥಂಚ ಕುತ್ರಚಿತ್ಕಥಂ ಹ್ಯಶಕ್ತಿಃ ಪರಮಸ್ಯತಸ್ಯ ॥ ೯೪ ॥

ಯಃ=ಯಾವನು ಅನಂತಶಕ್ತಿಃ=ಅಪರಿಮಿತ ಬಲವುಳ್ಳವನೋ ಸಕಲಾಂತರಾತ್ಮಾ=ಎಲ್ಲರ ಒಳಗಿದ್ದು ನಿಯಮನ ಮಾಡತಕ್ಕವನೋ ಸರ್ವವಿತ್=ಎಲ್ಲವನ್ನೂ ತಿಳಿದವನೋ ಸರ್ವವಶೀ=ಎಲ್ಲವನ್ನೂ ತನ್ನ ಅಧೀನದಲ್ಲಿಟ್ಟುಕೊಂಡವನೋ ಸರ್ವಜಿತ್ = ಎಲ್ಲರನ್ನೂ ಜಯಿಸಿದವನೋ ಯತ್ಸಮಃ=ಯಾವನಿಗೆ ಸದೃಶನು ಅನ್ಯಃ=ಬೇರೊಬ್ಬನು ನಾಸ್ತಿ=ಇಲ್ಲವೋ ತಸ್ಯ=ಅಂತಹ ಪರಮಸ್ಯ=ಸರ್ವೋತ್ತಮನಿಗೆ ಕಥಂಚ=ಯಾವ ರೀತಿಯಿಂದಲೂ ಕುತ್ರಚಿತ್=ಯಾವ ದೇಶ ಕಾಲಗಳಲ್ಲಿಯಂ ಅಶಕ್ತಿಃ=ಅಸಾಮರ್ಥ್ಯವು ಕಥಂ=ಹೇಗೆ ಯುಕ್ತವಾದೀತು? ಹಿ='ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನ ಬಲಕ್ರಿಯಾಚ' ಎಂಬ ಶ್ರುತಿ ಪ್ರಸಿದ್ಧವು ॥ ೯೪ ॥

ಭೀಷ್ಮಂ ಸ್ವಭಕ್ತಂ ಯಶಸಾಭಿಪೂರಯನ್ನಿಮೋಹಯನ್ನಸುರಾಂಶ್ಚೈವರಾಮಃ ॥
ಜಿತ್ವೈವ ಭೀಷ್ಮಂ ನ ಜಘಾನ ದೇವೋ ವಾಚಂ ಚ ಸತ್ಯಾಮಕರೋತ್ತತಸ್ಯ ॥ ೯೫ ॥

ಸ್ವಭಕ್ತಂ=ತನ್ನ ಭಕ್ತನಾದ ಭೀಷ್ಮಂ=ಭೀಷ್ಮನನ್ನು ಯಶಸಾ=ಅಂಬೆಯಂನ್ನು ಸ್ವೀಕರಿಸಲಿಲ್ಲವೆಂಬ ಕೀರ್ತಿಯಿಂದ ಅಭಿ ಪೂರಯನ್=ಪೂರ್ತಿಮಾಡುವ ಅಸುರಾನೇವ=ಅಸುರರನ್ನೇ ವಿಮೋಹಯನ್=ಮೋಹಿಸತಕ್ಕ ರಾಮಃ=ಪರಶುರಾಮನು ಭೀಷ್ಮಂ=ಭೀಷ್ಮನನ್ನು ಜಿತ್ವೈವ=ಗೆದ್ದೇ ನಜಘಾನ=ಕೊಲ್ಲಲಿಲ್ಲ. ಸದೇವಃ=ಆ ಪರಶುರಾಮ ದೇವರು ತಸ್ಯ=ಆ ಭೀಷ್ಮಾ ಚಾರ್ಯರ ವಾಚಂ=ನಾನುಯಾವಾಗಲೂ ಊರ್ಧ್ವರೇತಸ್ಸುಳ್ಳವನು ಆಗುವೆನು ಎಂಬ ಮಾತನ್ನು ಸತ್ಯಾಂ=ಯಥಾರ್ಥವನ್ನಾಗಿ ಅಕರೋತ್=ಮಾಡಿದರು. ವಸ್ತುಗತ್ಯಾ ಜಯಿಸಿದರೂ ಲೋಕ ದೃಷ್ಟಿಯಿಂದ ನನ್ನನ್ನೂ ಕೂಡ ಭೀಷ್ಮಾಚಾರ್ಯರು ಸೋಲಿಸಿದರು. ಆದ್ದರಿಂದ ತಾನೇನು ಮಾಡಲಿ ಎಂಬುದಾಗಿ ಅಂಬೆಯನ್ನು ವಂಚಿಸುವುದಕ್ಕೋಸ್ಕರ ಪರಾಜಿತರಂತೆ ನಟಿಸಿದರು. ॥ ೯೫ ॥

ಅವಃ ವಾಸ್ತವಿಕವಾಗಿ ಪರಶುರಾಮ ದೇವರಿಗೆ ಪರಾಜಯಂವು ಏಕೆ ಇಲ್ಲವೆಂಬ ಶಂಕೆಯನ್ನು ಪುರಾಣವಚನದಿಂದ ಪರಿಹರಿಸುತ್ತಾರೆ

ವಿದ್ಧವನ್ಮುಗ್ಧವಚ್ಚೈವ ಕೇಶವೋ ವೇದನಾರ್ತವತ್ ॥
ದರ್ಶಯನ್ನಪಿ ಮೋಹಾಯನೈವವಿಷ್ಣುಸ್ತಥಾ ಭವೇತ್ ॥ ೯೬ ॥

ಕೇಶವಃ=ಬ್ರಹ್ಮರುದ್ರಪ್ರೇರಕನಾದ ಪರಮಾತ್ಮನು ವಿದ್ಧವತ್=ಬಾಣಾದಿಗಳಿಂದ ಹೊಡೆಯಲ್ಪಟ್ಟವನಂತೆಯೂ ಮುಗ್ಧವಚ್ಚೈವ=ಮೋಹವನ್ನು ಹೊಂದಿದವನಂತೆಯೂ ವೇದನಾರ್ತವತ್=ವ್ಯಥೆಯಿಂದ ಪೀಡಿತನಂತೆಯೂ ಮೋಹಾಯ= ಅಸುರ ಮೋಹಸ್ಯೋಸ್ಕರ ದರ್ಶಯನ್ನಪಿ= ತೋರಿಸುವವನಾದರೂ ಕೂಡ ವಿಷ್ಣುಃ= ಪರಮಾತ್ಮನು ತಥಾ= ವೇದಾದಿ ದೋಷವುಳ್ಳವನಂ. ನೈವ ಭವೇತ್= ಆಗುವದೇ ಇಲ್ಲ. ॥ ೯೬ ॥

ಏವಮಾದಿಪುರಾಣೋತ್ಥವಾಕ್ಯಾದ್ರಾಮಃ ಸದಾಜಯೀ ॥
ಯಶೋಭೀಷ್ಮಸ್ಯ ದತ್ವಾತು ಸೋಂಽಬಾಂಚ ಶರಣಾಗತಾಮ್ ॥ ೯೭ ॥

ಉನ್ಮುಚ್ಯ ಭರ್ತೃದ್ವೇಷೋತ್ಥ ಪಾಪಾತ್ತೇನಾಶ್ವಯೋಜಯತ್ ॥
ಅನಂತರಂ ಶಿಖಂಡಿತ್ವಾತ್ತದಾ ಸಾ ಶಂಕರಂ ತಪಃ ॥ ೯೮ ॥

ಭೀಷ್ಮಸ್ಯ ನಿಧನಾರ್ಥಾಯ ಪುಸ್ತ್ವಂಚ ಚಕಾರಹ ॥
ಭೀಷ್ಮೋಯಥಾ ತ್ವಾಂ ಗೃಹ್ಣೀಯಾತ್ತಥಾ ಕುರ್ಯಾಮಿತೀರಿತಮ್ ॥
ರಾಮೇಣ ಸತ್ಯಂ ತಚ್ಚಕ್ರೇ ಭೀಷ್ಮೇ ದೇಹಾಂತರಂ ಗತೇ ॥ ೯೯ ॥

ಅವಃ ಹಾಗಾದರೆ ಶರಣಾಗತಳಾದ ಅಂಬೆಯಂ ಅಭೀಷ್ಟವನ್ನು ಪರಶುರಾಮ ದೇವರು ಪೂರೈಸದಿರುವುದರಿಂದ ಶರಣಾಗತವತ್ಸಲವೆಂಬ ಭಗವಂತನ ಮಹಿಮೆಗೆ ಹಾನಿ ಬರುವುದು ಎಂಬ ಶಂಕೆಯನ್ನು ಪರಿಹರಿಸುತ್ತಾರೆ.

ಏವ ಮಾದಿ ಪುರಾಣೋತ್ಥ ವಾಕ್ಯಾತ್= ಇವೇ ಮೊದಲಾದ ಪುರಾಣಗಳಲ್ಲಿರುವ ವಾಕ್ಯದಿಂದ ರಾಮಃ= ಪರಶುರಾಮ ದೇವರಂ ಸದಾ= ಯಾವಾಗಲೂ ಜಯೀ = ಜಯಪುಳ್ಳವರು ಸತು= ಆ ಪರಶುರಾಮ ದೇವರಾದರೂ ಭೀಷ್ಮಾಯ= ಭೀಷ್ಮರಿಗೋಸ್ಕರ ಯಂಶಃ= ಕೀರ್ತಿಯನ್ನು ದತ್ವಾ= ಕೊಟ್ಟು ಶರಣಾಗತಾಂ= ಮೊರೆ ಹೊಂದಿದ ಅಂಬಾಂಚ= ಅಂಬೆಯನ್ನು ಕೂಡ ಶಿಖಂಡಿತ್ವಾತ್= ಅಂಬೆಗೇನೇ ದ್ರುಪದನ ಮನೆಯಲ್ಲಿ ಶಿಖಂಡಿ ನಾಮಂದಿಂದ ಹುಟ್ಟುವಿಕೆಯಂ ದೆಸೆಯಿಂದ ಅನಂತರಂ =ಮತ್ತಂ ಅಂದರೆ ಶಿಖಂಡಿ ಜನ್ಮ ಮುಗಿದ ನಂತರ ಭರ್ತೃದ್ವೇಷೋತ್ಥ ಪಾಪಾತ್= ಭರ್ತೃ= ಶಿಖಂಡಿ ಜನ್ಮದಲ್ಲಿ ಪೂರ್ವದಲ್ಲಿ ಗಂಡನಾಗಿ ಭೀಷ್ಮಾಚಾರ್ಯರ ದ್ವೇಷ= ನಾಶಕ್ಕೆ ಕಾರಣ ರೂಪವಾದ ದ್ವೇಷದದ್ದೆಸೆಯಿಂದ ಉತ್ಥಂ= ಉಂಟಾದ ಪಾಪಾತ್= ದುರಿತದೆಸೆಯಿಂದ ಉನ್ಮುಚ್ಯ= ಬಹುಜನ್ಮಗಳಲ್ಲಿ ಅನುಭವಿಸಬೇಕಾದ ಮಹಾಪಾಪವನ್ನು ತನ್ನನ್ನು ಶರಣು ಹೊಂದಿದ ಮಹಾ ಪುಣ್ಯದಿಂದ ಬೇಗನೇ ಬಿಡಿಸಿ ತೇನ= ಆದ್ಯನಾಮಕ ವಸುವಿನ ಮೂಲರೂಪವನ್ನು ಹೊಂದಿದ ಭೀಷ್ಮರಿಂದ ಆಶು= ಭೀಷ್ಮರು ಮೂಲರೂಪವನ್ನು ಪ್ರವೇಶಿಸುವ ಸಮಯದಲ್ಲಿಯೇ ಅಯೋಜಯತ್= ಕೂಡಿಸಿದರು. ॥ ತದಾ= ಪರಶುರಾಮ ದೇ ಸವಿೂಪದಿಂದ ಬಂದ ನಂತರ ಸಾ= ಆ ಅಂಬೆಯು ಭೀಷ್ಮಸ್ಯ= ಭೀಷ್ಮರ ನಿಧನಾರ್ಥಾಯ= ಸಂಹಾರಕ್ಕಾಗಿಯೂ ಪುಂಸ್ತ್ವಂಚ= ತನಗೆ ಪುರುಷತ್ವ ಪ್ರಾಪ್ತಿಗೋಸ್ಕರವೂ ಶಾಂಕರಂ= ರುದ್ರ ಸಂಬಂಧಿಯಾದ ತಪಃ= ತಪಸ್ಸನ್ನು ಚಕಾರ= ಮಾಡಲು' ಭೀಷ್ಮಃ= ಭೀಷ್ಮರು ಯಥಾ= ಹೇಗೆ ತ್ವಾಂ= ನಿನ್ನನ್ನು ಗೃಹ್ಣೀಯಾತ್ = ಸ್ವೀಕರಿಸುವರೋ ತಥಾ= ಹಾಗೆಯೆ ಕುರ್ಯಾಂ= ಮಾಡುವೆನು ಇತಿ= ಎಂದು ರಾಮೇಣ= ಪರಶುರಾಮನಿಂದ ಈರಿತಂ= ಅಂಬೆಯನ್ನು ಕುರಿತು ಹೇಳಲ್ಪಟ್ಟ ಮಾತನ್ನು ಭೀಷ್ಮೇ= ಭೀಷ್ಮರು ದೇಹಾಂತರಂಗತೇಸತಿ= ಭೀಷ್ಮ ದೇಹವನ್ನು ಬಿಟ್ಟು ವಸುದೇವತಾ ಸ್ವರೂಪವನ್ನು ಹೊಂದಿಶ್ತರಲು ಸತ್ಯಂ= ತಾನು ಶಿಖಂಡಿಗೆ ಗಂಡನಿಂದ ಕೂಡಿಸುವೆನು ಎಂದು ಹೇಳಿದ ಮಾತನ್ನು ಯಥಾರ್ಥವನ್ನಾಗಿ ಚಕ್ರೇ ಮಾಡಿದರು. ॥ ೯೬ ॥ ೯೮ ॥ ೯೯ ॥

ರುದ್ರಸ್ತು ತಸ್ಯಾಸ್ತಪಸಾ ತುಷ್ಟಃ ಪ್ರಾದಾದ್ವರಂ ತದಾ ॥
ಭೀಷ್ಮಸ್ಯ ಮೃತಿಹೇತುತ್ವಂ ಕಾಲಾತ್ಪುಂ ದೇಹಸಂಭವಮ್ ॥ ೧೦೦ ॥

ರುದ್ರಸ್ತು=ರುದ್ರನಾದರೂ ತಸ್ಯಾಃ=ಆ ಅಂಬೆಯ ತಪಸಾ=ತಪಸ್ಸಿನಿಂದ ತುಷ್ಟಃಸನ್=ಸಂತೋಷಗೊಂಡವನಾಗಿ ತದಾ=ಆಗ ಭೀಷ್ಮಸ್ಯ=ಭೀಷ್ಮರ ಮೃತಿ ಹೇತುತ್ವಂ=ಮರಣಕ್ಕೆ ಕಾರಣತ್ವವನ್ನೂ ಕಾಲಾತ್=ಸ್ತ್ರೀ ರೂಪ ದೇಹದ ಪ್ರಾಪ್ತಿ ನಂತರದ ಕಾಲದ ದೆಸೆಯಿಂದ ಪುಂದೇಹಸಂಭವಂ=ಪುರುಷದೇಹದ ಪ್ರಾಪ್ತಿಯನ್ನೂ ಇತಿ=ಹೀಗೆ ವರಂ=ಎರಡು ವರಗಳನ್ನು ಪ್ರಾದಾತ್=ಕೊಟ್ಟನು. ॥ ೧೦೦ ॥

ಮಾಲಾಂಚ ಯ ಇಮಾಂ ಮಾಲಾಂಗ್ಯಹ್ಣೀಯಾತ್ಸಹನಿಷ್ಯತಿ ॥
ಭೀಷ್ಮಮಿತ್ಯೇವ ತಾಂ ಮಾಲಾಂ ಗೃಹೀತ್ವಾ ಸಾ ನೃಪಾನ್ಯಯೌ ॥ ೧೦೧ ॥

ಯಃ=ಯಾವನಂ ಇಮಾಂ=ಈ ಮಾಲಾಂ=ಪುಷ್ಪಮಾಲೆಯನ್ನು ಗೃಹ್ಣೀಯಾತ್=ಸ್ವೀಕರಿಸುವನೋ ಸವಿವ=ಅವನೇ ಭೀಷ್ಮಂ=ಭೀಷ್ಮರನ್ನು ಹನಿಷ್ಯತಿ=ಕೊಲ್ಲುವನು ಇತಿ=ಹೀಗೆ ಹೇಳುತ್ತಾ ಮಾಲಾಂ=ಮಾಲೆಯನ್ನು ಪ್ರಾದಾತ್=ಕೊಟ್ಟನು. ಸಾ=ಆ ಅಂಬೆಯು ತಾಂ=ಆ ಮಾಲೆಯನ್ನು ಗೃಹೀತ್ವಾ=ಹಿಡಿದುಕೊಂಡು ನೃಪಾನ್=ರಾಜರನ್ನು ಕುರಿತಂ ಯಯೌ=ಹೋದಳು. ॥ ೧೦೧ ॥

ತಾಂ ನ ಭೀಷ್ಮ ಭಯಾತ್ಕೇಽಪಿ ಜಗೃಹುಸ್ತಾಂ ಹಿ ಸಾತತಃ ॥
ದ್ರುಪದಸ್ಯ ಗೃಹದ್ವಾರಿ ನ್ಯಸ್ಯ ಯೋಗಾತ್ತನುಂ ಜಹೌ ॥ ೧೦೨ ॥

ಭೀಷ್ಮಭಯಾತ್ = ಭೀಷ್ಮರ ಹೆದರಿಕೆಯಿಂದ ಕೇಽಪಿ=ಯಾವರಾಜರೂ ಕೂಡ ತಾಂ=ಆ ಮಾಲೆಯನ್ನು ನಜಗೃಹುಃ=ಸ್ವೀಕರಿಸಲೇ ಇಲ್ಲ. ಹಿ=ಭೀಷ್ಮರಿಗೆ ಸಾಮರ್ಥ್ಯಾತಿಶಯವು ಪ್ರಸಿದ್ಧವು. ತತಃ=ಅನಂತರ ಸಾ=ಆ ಅಂಬೆಯು ತಾಂ= ಆ ಮಾಲೆಯನ್ನು ದ್ರುಪದಸ್ಯ = ದ್ರುಪದರಾಜನ ಗೃಹದ್ವಾರಿ = ಮನೆಯ ಬಾಗಿಲಿನಲ್ಲಿ ನ್ಯಸ್ಯ=ಇಟ್ಟು ಯೋಗಾತ್=ಯೋಗದಿಂದ ತನುಂ=ಶರೀರವನ್ನು ಜಹೌ = ಬಿಟ್ಟಳು. ದ್ರುಪದನ ಮನೆಯ ಬಾಗಿಲಿನಲ್ಲಿ ಎಂದು ಹೇಳಿದ್ದರಿಂದ ದ್ರುಪದನಂ ಬಾಡದಿರುವ ಪದ್ಮಮಯವಾದ ಆ ಮಾಲೆಯನ್ನು ತನ್ನ ಕೋಶದಲ್ಲಿಟ್ಟು ದ್ರೌಪದೀ ಸ್ವಯಂವರ ಕಾಲದಲ್ಲಿ ಆ ಮಾಲೆಯನ್ನೇ ಭೀಷ್ಮರನ್ನು ಕೊಲ್ಲುತಕ್ಕ ಅರ್ಜುನನ ಕೊರಳಲ್ಲಿ ದ್ರೌಪದಿಯು ಕೈಯಿಂದ ಅರ್ಪಿಸುವನು ಎಂದು ಸೂಚಿತವಾಯಿತು. ಇಲ್ಲದಿದ್ದರೆ ಯಾರು ಈ ಮಾಲೆಯನ್ನು ಸ್ವೀಕರಿಸುವನೋ ಅವನು ಭೀಷ್ಮರನ್ನು ಕೊಲ್ಲುವನು ಎಂಬ ರುದ್ರನ ಮಾತು ವ್ಯರ್ಥವಾಗುವುದು. ಅರ್ಜುನನು ಭೀಷ್ಮಾಚಾರ್ಯರನ್ನು ಕೊಲ್ಲುವದು ಎಂದರೆ ಭೀಷ್ಮಾಚಾರ್ಯರಿಂದ ಶಸ್ತ್ರ ಪರಿತ್ಯಾಗವನ್ನು ಮಾಡಿಸುವದು. ॥ ೧೦೨ ॥

ವಿತಸ್ಮಿನ್ನೇವ ಕಾಲೇತು ಸುತಾರ್ಥಂ ದ್ರುಪದಸ್ತಪಃ ॥
ಚಕಾರ ಶಂಭವೇ ಚೈನಂ ಸೋಽಬ್ರವೀತ್ಕನ್ಯಕಾ ತವ ॥ ೧೦೩ ॥

ಭೂತ್ವಾ ಭವಿಷ್ಯತಿ ಪುಮಾನಿತಿ ಸಾಂಬಾ ತತೋಽಜನಿ
ನಾಮ್ನಾಶಿಖಂಡಿನೀ ತಸ್ಯಾಃ ಪುಂವತ್ಕರ್ಮಾಣಿ ಚಾಕರೋತ್ ॥ ೧೦೪ ॥

ತಸ್ಮೈ ಪಾಂಚಾಲರಾಜಃ ಸ ದಶಾರ್ಣಾಧಿಪತೇಃ ಸುತಾಮ್ ॥
ಉದ್ವಾಹಯಾಮಾಸ ಸಾತಾಂ ಪುಂವೇಷೇಣೈವಗೂಹಿತಾಮ್ ॥ ೧೦೫ ॥

ಅನ್ಯತ್ರಮಾತಾಪಿತ್ರೋಸ್ತು ನ ವಿಜ್ಞಾತಾಂ ಬುಬೋಧಹ ।
ಧಾತ್ರೇಯ್ಯನ್ಯವೇದ ಯತ್ಸಾಥ ತತ್ಪಿತ್ರೇ ಸಾನ್ಯವೇದಯತ್ ॥ ೧೦೬

ಏತಸ್ಮಿನ್ನೇವಕಾಲೇ=ಇದೇ ಸಮಯದಲ್ಲಿಯೇ ದ್ರುಪದಃ=ದ್ರುಪದನು ಸುತಾರ್ಥಂ=ಮಗನಾಗುವುದಕ್ಕೋಸ್ಕರ ಶಂಭವೇ = ರುದ್ರನನ್ನು ಚಕಾರ=ಮಾಡಿದನಂ. ಸತು=ಆ ರುದ್ರನಾದರೂ ಏನಂ=ಈ ದ್ರುಪದನನ್ನು ಕುರಿತು ತವ=ನಿನಗೆ ಆದೌ=ಮೊದಲು ಕನ್ಯಕಾ=ಹೆಣ್ಣು ಭೂತ್ವಾ = ಹುಟ್ಟಿ ಕಾಲಾಂತರೇ=ಕೆಲವು ಕಾಲದ ನಂತರ ಸೈವ=ಆ ಹೆಣ್ಣು ಹುಡುಗಿಯೇ ಪುಮಾನ್=ಪುರುಷನು ಭವಿಷ್ಯತಿ=ಆಗುವನು. ಇತಿ ಎಂದು ಅಬ್ರವೀತ್=ಹೇಳಿದನಂ. ತತಃ=ವರವನ್ನು ಪಡೆದ ನಂತರ

ಸಾಂಬಾ=ಆ ಅಂಬೆಯು ನಾಮ್ನಾ = ಹೆಸರಿನಿಂದ ಶಿಖಂಡಿನೀ=ಶಿಖಂಡಿನಿಯೊಂಗೆ ಅಜನಿ=ದ್ರುಪದನಿಂದ ಹುಟ್ಟಿದಳು. ಪಾಂಚಾಲ ರಾಜಃ=ಪಾಂಚಾಲ ದೇಶಕ್ಕೆ ಅಧಿಪತಿಯಾದ ಸಃ=ಆ ದ್ರುಪದನು ತಸ್ಯಾಃ=ಆ ಶಿಖಂಡಿನಿಗೆ ಪುಂವತ್ಕರ್ಮಾಣಂ=ಗಂಡು ಮಗು ವಿನಂತೆ ಚೌಲ, ಉಪನಯನಾದಿ ಸಂಸ್ಕಾರಗಳನ್ನು ಅಕರೋತ್=ಮಾಡಿದನು. ಸಃ=ಆ ದ್ರುಪದವು ತಸ್ಮೈ=ಆ ಶಿಖಂಡಿನಿ ಗೋಸ್ಕರ ದಶಾರ್ಣಾಧಿಪತೇಃ=ದಶಾರ್ಣ ದೇಶಕ್ಕೆ ರಾಜನಾದ ಹಿರಣ್ಯವರ್ಮನ ಸುತಾಂ=ಮಗಳನ್ನು, ಉದ್ವಾಹಯಾಮಾಸ= ವಿವಾಹ ಮಾಡಿಸಿದನು. ಸಾ=ಆ ದಶಾರ್ಣರಾಜನ ಮಗಳು ತಾಂ=ಆ ದ್ರುಪದನ ಮಗಳನ್ನು ಪುಂವೇಷೇಣೈವ=ಪುರುಷವೇಷ ದಿಂದಲೇ ಗೂಹಿತಾಂ= ಆಚ್ಛಾದಿತಳಾದ ಮಾತಾಪಿತ್ರೋಃ=ತಂದೆ ತಾಯಿಗಳಿಂದ ಹೊರತು ಅನ್ಯತ್ರ=ಬೇರೆಯವರಿಂದ ನ ವಿಜ್ಞಾತಾಂ=ಹೆಣ್ಣು ಎಂಬುದಾಗಿ ತಿಳಿಯದ ಶಿಖಂಡಿನಿಯನ್ನಾಗಿ ಬುಬೋಧ=ಇವಳು ಹೆಣ್ಣುಗಂಡೂ ಅಲ್ಲವೆಂದು ತಿಳಿದಳು, ಅಥ = ಅನಂತರ ಸಾ=ಹಿರಣ್ಯವರ್ಮನ ಮಗಳು ಧಾತ್ರ್ಯೈ=ಉಪಮಾತೆಗೆ, ನ್ಯವೇದಯತ್=ತಿಳಿಸಿದಳು. ಸಾ=ಆ ಧಾತ್ರಿಯೂ ತತ್ಪಿತ್ರೇ=ಅವಳ ತಂದೆಯಾದ ಹಿರಣ್ಯವರ್ಮನಿಗೋಸ್ಕರ ನ್ಯವೇದಯತ್=ತಿಳಿಸಿದಳು. ॥ ೧೦೩ ॥ ೧೦೪ ॥ ೧೦೫ ॥ ॥ ೧೦೬ ॥

ಸ ಕ್ರುದ್ಧಃ ಪ್ರೇಷಯಾಮಾಸ ನಿಹನ್ಮಿತ್ವಾಂ ಸ ಬಾಂಧವಮ್ ।
ಇತಿಪಾಂಚಾಲರಾಜಾಯ ನಿರ್ಜಗಾಮಚ ಸೇನಯಾ ॥ ೧೦೭ ॥

ಸಃ=ಆ ಹಿರಣ್ಯವರ್ಮನು ಕ್ರುದ್ಧಃಸನ್=ಕೋಪಗೊಂಡವನಾಗಿ ಸ ಭಾಂದವಂ=ಬಂಧುಗಳಿಂದ ಕೂಡಿದ ತ್ವಾಂ= ನಿನ್ನನ್ನು ನಿಹನ್ಮಿ=ಕೊಲ್ಲುವೆನು. ಇತಿ=ಎಂಬುದಾಗಿ ಪಾಂಚಾಲರಾಜಾಯ=ದ್ರುಪದನಿಗೋಸ್ಕರ ದೂತಂ=ಸೇವಕನನ್ನು ಪ್ರೇಷಯಾಮಾಸ=ಕಳುಹಿಸಿದನು. ಸಃ=ಅವನು ಸೇನಯಾ = ಸೈನ್ಯದಿಂದ ಕೂಡಿಕೊಂಡು ನಿರ್ಜಗಾಮಚ=ಯಬುದ್ಧಕ್ಕಾಗಿ ಹೊರಟನು ॥ ೧೦೭ ॥

ವಿಶ್ವಸ್ಯ ವಾಕ್ಯಂ ರುದ್ರಸ್ಯ ಪುಮಾನೇವೇತಿ ಪಾರ್ಷದಃ ॥
ಪ್ರೇಷಯಾಮಾಸಧಿ ಗ್ಬುದ್ಧಿ ರ್ಭಿನ್ನಾತೇ ಬಾಲ್ಯವಾಕ್ಯತಃ ॥
ಅಪರೀಕ್ಷಕಸ್ಯತೇ ರಾಷ್ಟ್ರಂ ಕಥವಿತ್ಯೇವ ನರ್ಮಕೃತ್ ॥ ೧೦೮ ॥

ಪಾರ್ಷತಃ=ಪೃಷತ ಪುತ್ರನಾದ ದ್ರುಪದನು ರುದ್ರಸ್ಯ=ಶಿವನ ವಾಕ್ಯಂ=ಮೊದಲು ಹೆಣ್ಣು ಹುಟ್ಟಿ ಮತ್ತೆ ಪುರುಷನಾಗು ವನು. ಎಂಬ ಮಾತನ್ನು ವಿಶ್ವಸ್ಯ=ನಂಬಿ ತೇ=ನಿನ್ನ ಬುದ್ಧಿಃ=ಬುದ್ಧಿಯು ಬಾಲವಾಕ್ಯತಃ=ಮಕ್ಕಳ ಮಾತಿನಿಂದ ಭಿನ್ನಾ=ನಷ್ಟವಾ ದದ್ದು. ಧಿಕ್ = ಆದ್ದರಿಂದ ನಿನಗೆ ಧಿಕ್ಕಾರವು. ಅಪರೀಕ್ಷಕಸ್ಯ=ವಿಚಾರಶಕ್ತಿ ಇಲ್ಲದ ತೇ=ನಿನಗೆ ರಾಷ್ಟ್ರಂ=ರಾಜ್ಯವು ಕಥಂ=ಹೇ ಯೋಗ್ಯವು? ಇತ್ಯೇವ=ಈ ರೀತಿಯಾಗಿಯೇ ನರ್ಮಕೃತ್ಸನ್=ಹಾಸ್ಯವನ್ನು ಮಾಡತಕ್ಕವನಾಗಿ ಪುಮಾನೇವ=ಶಿಖಂಡಿನಿಯ ಪುರುಷನೇ ಇತಿ=ಎಂದು ಹೇಳಿ ಪ್ರೇಷಯಾಮಾಸ=ದೂತನನ್ನು ಕಳುಹಿಸಿದನು. ॥ ೧೦೮ ॥

ಅಥ ಭಾರ್ಯಾ ಸಮೇತಂ ತಂ ಪಿತರಂ ಚಿಂತಯಾ ಕುಲಂ ॥
ದೃಷ್ಟ್ವಾ ಶಿಖಂಡಿನೀ ದುಃಖಾನ್ಮನ್ನಿಮಿತ್ತಾನ್ನ ನಶ್ಯತು ॥
ಇತಿ ಮತ್ವಾ ವನಾಯೈವ ಯಯೌ ಯತ್ರ ಚ ತುಂಬುರುಃ ॥ ೧೦೯ ॥

ಅಥ=ದೂತನನ್ನು ಕಳುಹಿಸಿದ ನಂತರ ಶಿಖಂಡಿನೀ=ಶಿಖಂಡಿನಿಯು ಭಾರ್ಯಾಸಮೇತಂ=ಹಂಡತಿಯಿಂದ ಕೂಡಿ ಚಿಂತಯಾ = ದುಃಖದಿಂದ ಆಕುಲಂ=ಕೂಡಿದ ಪಿತರಂ=ತಂದೆಯನ್ನು ದೃಷ್ಟ್ವಾ=ನೋಡಿ ಮನ್ನಿಮಿತ್ತಾತ್=ನನ್ನ ಕಾರಣ ದಿಂದ ನ ನಶ್ಯತು=ತಂದೆಯು ನಾಶವನ್ನು ಹೊಂದದಿರಲಿ. ಇತಿ=ಈ ರೀತಿಯಾಗಿ ಮತ್ವಾ=ತಿಳಿದು ದುಃಖಾತ್=ದುಃಖದಿಂ ಯತ್ರ=ಯಾವ ವನದಲ್ಲಿ ತುಂಬುರುಃ = ತುಂಬುರು ಎಂಬ ಗಂಧರ್ವನು (ತಿಷ್ಠತಿ=ಇದ್ದಾನೋ ತಸ್ಮೈ)ವನಾಯೈವ=ಆ ಅರಣ್ಯ ಕ್ಕೋಸ್ಕರವೇ ಯಯೌ=ಹೋದನು. ॥ ೧೧೦ ॥

ಅವಃ– ಕೆಲವು ಕಡೆ ಸ್ಥೂಣಾಕರ್ಣನೆಂಬವನು ಶಿಖಂಡಿನಿಗೆ ಶರೀರವನ್ನು ಕೊಟ್ಟನು ಎಂದು ಕಥೆ ಇದೆ. ಆದರೆ ಅಭಿಪ್ರಾಯ ವನ್ನು ಹೇಳುತ್ತಾರೆ.

ಸ್ಥೂಣಾಕರ್ಣಾಭಿಧೇಯಸ್ತಾಮುಪಶ್ಯದ್ದೃಢಕರ್ಣತಃ ।
ಸ ತಸ್ಯಾ ಅಖಿಲಂ ಶ್ರುತ್ವಾ ಕೃಪಾಂ ಚಕ್ರೇ ಮಹಾಮನಾಃ ॥ ೧೧೦ ॥

ದೃಢಕರ್ಣತಃ=ದೃಢಗಳಾದ ಕಿವಿಗಳಿರುವುದರಿಂದ ಸ್ಥೂಣಾಕರ್ಣಾಭಿದಃ=ಸ್ಥೂಣಾಕರ್ಣನೆಂದು ಹೆಸರುಳ್ಳ ತುಂಬುರು ಗಂಧರ್ವನು ತಾಂ = ಆಶಿಖಂಡಿನಿಯನ್ನು ಅಪಶ್ಯತ್ ಕಂಡನು ಮಹಾಮನಾಃ=ಶ್ರೇಷ್ಠವಾದ ಮನಸ್ಸುಳ್ಳ ಆ ತುಂಬುರುವು ತಸ್ಯಾಃ= ಆ ಶಿಖಂಡಿಯ ದೆಸೆಯಿಂದ ಅಖಿಲಂ = ಎಲ್ಲ ವೃತ್ತಾಂತವನ್ನು ಶ್ರುತ್ವಾ=ಕೇಳಿ ಕೃಪಾಂ=ದಯೆಯನ್ನು ಚಕ್ರೇ= ಮಾಡಿದನು. ॥೧೧೦ ॥

ಸ ತಸ್ಮೈ ಸ್ವಂ ವಪುಃ ಪ್ರಾದಾತ್ತದೀಯಂ ಜಗೃಹೇ ತದಾ ।
ಅಂಶೇನ ಪುಂಸ್ತ್ವಭಾವಾರ್ಥಂ ಪೂರ್ವದೇಹೇ ಸಮಾಸ್ಥಿತಃ ॥ ೧೧೧ ॥

ಪುಂಸಾಂ ಸ್ತ್ರೀತ್ವಂ ಭವೇತ್ಕ್ವಾಪಿ ತಥಾಪ್ಯಂತೇ ಪುಮಾನ್ಭವೇತ್ ।
ಸ್ತ್ರೀಣಾಂ ನೈವಹಿ ಪುಂಸ್ತ್ವಂ ಸ್ಯಾದ್ಬಲವತ್ಕಾರಣೈರಪಿ ॥ ೧೧೨ ॥

ಸಃ=ಆ ತುಂಬುರು ಗಂಧರ್ವನು ತಸ್ಮೈ=ಆ ಶಿಖಂಡಿಗೋಸ್ಕರ ಸ್ವಂ=ತನ್ನ ವಪುಃ=ಪುರುಷ ಶರೀರವನ್ನು ಪ್ರಾದಾತ್=ಕೊಟ್ಟನು. ತದೀಯಂವಪುಃ=ಶಿಖಂಡಿನಿ ಸಂಬಂಧಿಯಾದ ಶರೀರವನ್ನು ಜಗೃಹೇ=ಸ್ವೀಕರಿಸಿದನು. ತದಾ=ಆಗ ಪೂರ್ವದೇಹೇ=ಶಿಖಂಡಿನಿಗೆ ಕೊಟ್ಟ ತನ್ನ ಮೊದಲಿನ ಶರೀರದಲ್ಲಿ ಪುಂಸ್ತ್ವಭಾವಾರ್ಥಂ=ಪುರುಷತ್ವದ ಪ್ರಾಪ್ತಿಗೋಸ್ಕರ ಅಂಶೇನ=ಒಂದು ಅಂಶದಿಂದ ಸಮಾಸ್ಥಿತಃ=ಆ ಗಂಧರ್ವನು ಇದ್ದನು. ಪುರುಷರಿಗೆ ಸ್ತ್ರೀತ್ವವು ಸ್ತ್ರೀಯ ಅಂಶವಿಲ್ಲದಿದ್ದರೂ ಅರ್ಜುನಾದಿಗಳಂತೆಸ್ವಭಾವದಿಂದಲೇ ಯುಕ್ತವಾಗುತ್ತದೆ. ಸ್ತ್ರೀಯರಿಗೆ ಮಾತ್ರ ಪುರುಷತ್ವವು ಪುರುಷನ ಅಂಶವಿಲ್ಲದೆ ಬರುವುದಿಲ್ಲ. ॥ ೧೧೧ ॥ ಗಂಧರ್ವನು ತನಗೆ ಪುಣ್ಯ ಬರುವುದಕ್ಕೋಸ್ಕರ ಶಿಖಂಡಿನಿಗೆ ಕೊಟ್ಟ ದೇಹದಲ್ಲಿ ಒಂದು ಅಂಶದಿಂದ ಏಕೆ ಇದ್ದನು ಎಂಬ ಶಂಕೆಯನ್ನು ಪರಿಹರಿಸುತ್ತಾರೆ. ಪುಂಸಾಂ=ಪುರುಷರಿಗೆ ಸ್ತ್ರೀತ್ವಂ=ಸ್ತ್ರೀಸ್ವರೂಪವು ಕ್ವಾಪಿ=ಕೆಲವು ವೇಳೆ ಅಂದರೆ ಶಾಪದಿಂದಾಗಲಿ ದುಷ್ಕರ್ಮದಿಂದಾಗಲೀ ವರಗಳಿಂದಲಾಗಲೀ ಭವೇತ್=ಬರಬಹುದು. ತಥಾಪಿ=ಹಾಗಾದರೂ ಅಂತೇ= ಸ್ತ್ರೀತ್ವಪ್ರಾಪ್ತಿಗೆ ಕಾರಣವಾದ ಶಾಪಾದಿಗಳು ನಿವೃತ್ತಿಯಾಗುವಾಗ ತಥಾ=ಹಿಂದಿನಂತೆ ಪುಮಾನ್=ಪುರುಷನು ಭವೇತ್= ಆಗುವನು, ಸ್ತ್ರೀಣಾಂ=ಸ್ವಾಭಾವಿಕ ಸ್ತ್ರೀಯರಿಗೆ ಬಲವತ್ಕಾರಣೈರಪಿ=ದೇವತೆಗಳ ವರ. ಉತ್ತಮ ಪುಣ್ಯ ಮೊದಲಾದ ಕಾರಣ ಗಳಿಂದಲೂ ಕೂಡ ಪುಂಸ್ತ್ವಂ=ಪುರುಷತ್ವವು ಹಿ=ಯಾವ ಕಾರಣದಿಂದ ನೈವಸ್ಯಾತ್=ಆಗಲಾರದೋ ಆದ್ದರಿಂದ ಶಿಖಂಡಿನಿಗೆ ಕೊಟ್ಟ ತನ್ನ ಪೂರ್ವದೇಹದಲ್ಲಿ ಗಂಧರ್ವನು ಒಂದಂಶದಿಂದ ಇದ್ದನು. ॥ ೧೧೨ ॥

ಅತಃ ಶಿವವರೇಽಪ್ಯೇಷಾ ಜಜ್ಞೇ ಯೋಷೈವ ನಾನ್ಯಥಾ ॥
ಪಶ್ಚಾಚ್ಚ ಪುಂತನುಂ ಸೈಷಾ ಪ್ರವಿವೇಶೈವ ಪುಂಯುತಾಮ್ ॥ ೧೧೩ ॥
ನಾಸ್ಯಾದೇಹಃ ಪುಂಸ್ತ್ವಮಾಪ ನಚ ಪುಂಸಾನಧಿಷ್ಠಿತೇ ॥
ಪುಂದೇಹೇನ್ಯವಸತ್ಸಾಥ ಗಂಧರ್ವೇಣ ತ್ವಧಿಷ್ಠಿತೇ (ತಂ) ॥
ಗಾಂಧರ್ವಂ ದೇಹಮಾವಿಶ್ಯ ಸ್ವಕೀಯಂ ಭವನಂ ಯಯೌ ॥ ೧೧೪ ॥

ಅತಃ=ಹಿಂದೆ ಹೇಳಿದ ಸ್ತ್ರೀಯರಿಗೆ ಪುಂಸ್ತ್ವಾಭಾವ ನಿಯಮದಿಂದ ಶಿವವರೇ ಸತ್ಯಪಿ=ಮೊದಲು ಹೆಣ್ಣು ಹುಟ್ಟಿ ಮತ್ತೆ ಪುರುಷನು ಆಗುವನೆಂದು ರುದ್ರನ ವರವಿದ್ದರೂ ಕೂಡ ಏಷಾ=ಈ ಅಂಬೆಯು ಯೋಷೈವ=ಹೆಣ್ಣಾಗಿಯೇ ಜಜ್ಞೇ= ಹುಟ್ಟಿದಳು. ಅನ್ಯಥಾನ=ಅಂಬೆಗೆ ಪುಂಸ್ತ್ವವು ರುದ್ರವರದಿಂದಲೂ ಆಗಲಿಲ್ಲ. ಇನ್ನು ಮುಂದೆಯೂ ಪುಂಸ್ತ್ವವು ಬರುವುದಿಲ್ಲ ವೆನ್ನುತ್ತಾರೆ. ಪಶ್ಚಾತ್=ಸ್ತ್ರೀಯಾಗಿ ಹುಟ್ಟಿದ ನಂತರವೂ ಸಾ=ಪುರುಷನಾಗುವನೆಂದು ರುದ್ರನ ವರಪ್ರಸಾದವುಳ್ಳ ಏಷಾ= ಈ ಕನ್ನಿಕೆಯು ಪುಂಯುತಾಂ=ಗಂಧರ್ವ ಪುರುಷನಿಂದ ಕೂಡಿದ ಪುಂತನುಂ=ಪುರುಷ ದೇಹವನ್ನೇ ಪ್ರವಿವೇಶ = ಪ್ರವೇಶ ಮಾಡಿದಳು. ಹೊರತು ತಾನೇ ಪುರುಷ ದೇಹವನ್ನು ಹೊಂದಲಿಲ್ಲ. ॥ ೧೧೩ ॥

ಅಸಾಃ = ಈ ಶಿಖಂಡಿಯ ದೇಹಃ = ಶರೀರವು ಪುಂಸ್ತ್ವಂ = ಪುಂರೂಪನಾದ ಅರ್ಜುನನ ದೇಹವು ಶಾಪದಿಂದ ಸ್ತ್ರೀತ್ವವನ್ನೆ ಹೊಂದಿದಂತೆ ಶಿವವರದಿಂದಲೂ ಕೂಡ ಪುರುಷತ್ವವನ್ನು ನಾಪ = ಹೊಂದಲಿಲ್ಲ. ತನ್ನ ಸ್ತ್ರೀ ದೇಹವನ್ನು ಗಂಧರ್ವನಿಗೆ ಕೊಟ್ಟು ಗಂಧರ್ವನ ಪುರುಷ ದೇಹವನ್ನೇ ತಾನು ಹೊಂದಿದಳು. ಸಾ = ಅಂಬೆಯು ಪುಂಸಾ = ಗಂಧರ್ವನಿಂದ ಅನಧಿಷ್ಠಿತೇ = ಅವಸ್ಥಿತಿ ಇಲ್ಲದ ಪುಂದೇಹೇ = ಪುರುಷ ದೇಹದಲ್ಲಿ ನನ್ಯವಸತ್ = ತನ್ನ ಶಕ್ತಿಯಿಂದ ವಾಸಮಾಡಲಿಲ್ಲ; ಅವನ ಅಂಶದಿಂದ ಕೂಡಿಕೊಂಡೇ ವಾಸ ಮಾಡಿದಳು. ಅಥ = ಅನಂತರ ಸಾ = ಆ ಶಿಖಂಡಿಯು ಗಂಧರ್ವೇಣ = ತುಂಬುರು ನಾಮಕ ಗಂಧರ್ವನಿಂದ ತು = ಪುರುಷರಂತೆ ಸ್ಥೈರ್ಯ, ಧೈರ್ಯ, ಗಂಭೀರ ಸ್ವರಾದಿ ಕಾರ್ಯ ವಿಶೇಷಗಳು ಹೇಗೆ ಆದೀತೋ ಹಾಗೆ ಅಧಿಷ್ಠಿತಂ = ಆಶ್ರಿತವಾದ ಗಂಧರ್ವಂ = ಗಂಧರ್ವ ಸಂಬಂಧಿಯಾದ ದೇಹಂ = ಶರೀರವನ್ನು ಆವಿಶ್ಯ = ಪ್ರವೇಶಿಸಿ ಸ್ವಕೀಯಂ = ತನ್ನ ಭವನಂ = ಮನೆಯನ್ನು ಯಯೌ = ಹೋದಳು. (ಆದ ಕಾರಣ ಈ ಪುರುಷ ದೇಹವು ಗಂಧರ್ವಸದ್ದೇಃ ಶಿಖಂಡಿನಿಯು ಶರೀರವಲ್ಲ. ಈ ಶಿಖಂಡಿನಿಗೆ ಗ್ರಹಸ್ಥನ ಮನೆಯನ್ನು ಪ್ರವೇಶಿಸಿದ ಭಿಕ್ಷುಕನಂತೆ ಬರಲಾರದು. ಅಂಬೆಗೂ ಇರೋಣ ಮಾತ್ರವು. ಆದ್ದರಿಂದ ಸನ್ಯಾಸಿಗಳಿಗೆ ಗ್ರಹಸ್ಥತ್ವವು ಹೇಗೆ ಬರಲಾರದೋ ಹಾಗೆಯೇ ಸ್ತ್ರೀಯರಿಗೆ ಪುರುಷತ್ವವುಂ ಪುರುಷತ್ವವು ಬರಲಿಲ್ಲ.) ॥ ೧೧೪ ॥

ಅವಃ- ಶಿಖಂಡಿನಿಯು ಗಂಧರ್ವನ ಶರೀರವನ್ನು ಸ್ವೀಕಾರ ಮಾಡಿ ಮನೆಗೆ ಹೋದರೆ ಮಾವ ಮೊದಲಾದವರಿಗೆ ಇವಳು ಶಿಖಂಡಿ ಎಂಬ ತಿಳುವಳಿಕೆ ಹೇಗೆ ಬಂದಿತು ಎಂಬ ಶಂಕೆಯನ್ನು ಪರಿಹರಿಸುತ್ತಾರೆ.

ತಸ್ಯಾಸ್ತದ್ದೇಹಸಾದೃಶ್ಯಂ ಗಂಧರ್ವಸ್ಯ ಪ್ರಸಾದತಃ ।
ಪ್ರಾಪ ಗಂಧರ್ವದೇಹೋऽಪಿ ತಯಾ ಪಶ್ಚಾದಧಿಷ್ಠಿತಃ ॥ ೧೧೫ ॥
ಶ್ವೋದೇಹಿ ಮಮ ದೇಹಂ ಮೇ ಸ್ವಂ ಚ ದೇಹಂ ಸಮಾವಿಶ ।
ಇತ್ಯುಕ್ತ್ವಾ ಸತು ಗಂಧರ್ವಃ ಕನ್ಯಾ ದೇಹಂ ಸಮಾಸ್ಥಿತಃ ॥ ೧೧೬ ॥

ತಸ್ಯಾಃ = ಆ ಶಿಖಂಡಿನಿಗೆ ತದ್ದೇಹಸಾದೃಶ್ಯಂ = ತನ್ನ ಮೊದಲಿನ ಶರೀರದಲ್ಲಿ ತನ್ನದು ಎಂಬ ಅಭಿಮಾನ ಹೇಗೆ ಇತ್ತೋ ಹಾಗೆಯೇ ಪರಕೀಯ ಗಂಧರ್ವ ದೇಹದಲ್ಲಿಯೂ ಕೂಡ ನನ್ನದು ಎಂಬ ಅಭಿಮಾನವು ಗಂಧರ್ವಸ್ಯ = ಗಂಧರ್ವನ ಪ್ರಸಾದತಃ = ಅನುಗ್ರಹದಿಂದ ಅಭೂತ್ = ಉಂಟಾಯಿತು. ತಯಾ = ಆ ಶಿಖಂಡಿನಿಯಿಂದ ಅಧಿಷ್ಠಿತಃ = ಆಶ್ರಿತವಾದ ಗಂದರ್ವದೇಹೋऽಪಿ = ಗಂಧರ್ವನ ಶರೀರವಾದರೂ ಪಶ್ಚಾತ್ = ಶಿಖಂಡಿನಿಯು ಪ್ರಯೋಜನವಾಡೆ ನಂತರ ಗಂಧರ್ವೇಣ = ಗಂದರ್ವನನ್ನೇ ಪ್ರಾಪ = ಹೊಂದಿತು. ॥ ೧೧೫ ॥ ಶ್ವಃ = ನಾಳೆ ಮಮ = ನನ್ನ ದೇಹಂ = ಪುರುಷ ದೇಹವನ್ನು ಮೇ = ನನಗೆ ದೇಹಿ = ಕೊಡು. ಸ್ವಂಚ = ನಿನ್ನದಾದ ದೇಹಂ = ಸ್ತ್ರೀ ಶರೀರವನ್ನು ತ್ವಂ = ನೀನು ಸಮಾವಿಶ = ಪ್ರವೇಶಿಸು. ಇತಿ = ಈ ರೀತಿ ಉಕ್ತ್ವಾ = ಹೇಳಿ ಸತು=ಗಂಧರ್ವನಾದರೂ ಕನ್ಯಾದೇಹಂ= ಶಿಖಂಡಿನಿಯ ಸ್ತ್ರೀ ದೇಹವನ್ನು ಸಮಾಸ್ಥಿತಃ = ಆಶ್ರಯಿಸಿದನು. ॥ ೧೧೬ ॥

ಉವಾಸೈವ ವನೇ ತಸ್ಮಿನ್ ಧನದಸ್ತತ್ರಚಾಗಮತ್ ।
ಅಪ್ರತ್ಯುತ್ಥಾಯಿನಂ ತಂತು ಲೀಯಮಾನಂ ವಿಲಜ್ಜಯಾ ॥ ೧೧೭ ॥
ಶಶಾಪ ಧನದೋದೇವಶ್ಚಿರಮಿತ್ಥಂ ಭವೇತಿ ತಂ ।
ಯದಾ ಯುದ್ಧೇಮೃತಂ ಯಾತಿ ಸಾಕನ್ಯಾ ಪುಂತನುಸ್ಥಿತಾ ॥ ೧೧೮ ॥
ತದಾ ಪುಂಸ್ತ್ವಂ ಪುನರ್ಯಾಸಿ ಚಪಲತ್ವಾದಿತೀರಿತಃ ॥ ೧೧೯ ॥

ಸಃ = ಆ ಗಂಧರ್ವನು ತಸ್ಮಿನ್ವನೇಪಿವ = ಆ ವನದಲ್ಲಿಯೇ ಉವಾಸ = ವಾಸ ಮಾಡಿದನು. ತತ್ರ = ಅಲ್ಲಿಗೆ ಧನದಃ = ಕುಬೇರನು ಆಗಮತ್ = ಬಂದನು. ತದಾ = ಕುಬೇರನು ಬಂದಾಗ ಅಪ್ರತ್ಯುತ್ಥಾಯಿನಂ = ಎದ್ದು ನಿಲ್ಲದಿರುವ ವಿಲಜ್ಜಯಾ = ನಾಚಿಕೆಯಿಂದ ತಂತಾಂಲೀಯಮಾನಂ = ಸೊಪ್ಪಾಲಗಳಾದ ಹುಲ್ಲುಗಳ ಗುಂಪುಗಳಲ್ಲಿ ಅಡಗಿಕೊಂಡ ತಂ = ತನ್ನ ಪುರುಷದೇಹವನ್ನು

ಕೊಟ್ಟಿರುವ ಆ ಗಂಧರ್ವನನ್ನು ಚಿರಂ= ಬಹುಕಾಲ ಇತ್ಥಂ= ಹೀಗೆಯೇ ಸ್ತ್ರೀದೇಹವುಳ್ಳವನಂ ಭವ= ಆಗಂ ಇತಿ= ಈ ರೀತಿಯಾಗಿ= ಧನದೇವಃ ದೇವತೆಯಾದ ಕುಬೇರನಂ ಶಶಾಪ= ಶಾಪ ಕೊಟ್ಟನು. ಸಾಕನ್ಯಾ= ಆ ಕನ್ಯೆಯು ಯದಾ= ಯಾವಾಗ ಯುದ್ಧೇ= ಶಿಬಿರದಲ್ಲಿ ರಾತ್ರಿಯಲ್ಲಿ ಅಶ್ವತ್ಥಾಮನಿಂದ ಕೂಡಿಕೊಂಡು ಯುದ್ಧದಲ್ಲಿ ವ್ಯತಿಂ= ಖಡ್ಗದಿಂದ ಮರಣವನ್ನು ಯಾತಿ= ಹೊಂದುತ್ತಾಳೋ ತದಾ= ಆಗಲೇ ಚಪಲತ್ವಾತ್= ಶಿಖಂಡಿನಿಗೆ ನೀನು ಕೊಟ್ಟ ದೇಹವು ಚಂಚಲವಾದ್ದರಿಂದ ಅಂದರೆ ಸ್ವಾಭಾವಿಕವಾಗಿ ಅವಳ ಶರೀರವಾಗದಿರುವುದರಿಂದ ಅಥವಾ ಮಾಡಲು ಅಯೋಗ್ಯವಾದ ಕೆಲಸವನ್ನು ಮಾಡಿರುವುದರಿಂದ ಪುಸ್ತ್ವಂ= ನಿನ್ನ ಪುರುಷದೇಹವನ್ನು ಪುನಃ= ತಿರುಗಿ ಯಾಸಿ= ಹೊಂದುವಿ ಇತಿ= ಎಂದು ಈರಿತಃ= ಗಂಧರ್ವನು ಕುಬೇರನಿಂದ ಹೇಳಿಸಿಕೊಳ್ಳಲ್ಪಟ್ಟನು. ॥ ೧೧೭ ॥ ೧೧೮ ॥ ೧೧೯ ॥

ತಥಾವಸತ್ಸ ಗಂಧರ್ವಃ ಕನ್ಯಾ ಪಿತ್ರೋರಶೇಷತಃ ।
ಕಥಯಾಮಾಸಾನುಭೂತಂ ತೌ ಭೃಶಂ ಮುದಮಾಪತುಃ ॥ ೧೨೦ ॥

ಸಗಂಧರ್ವಃ=ಆ ತುಂಬುರು ಗಂಧರ್ವನು ತಥಾ=ಹಾಗೆಯೇ ಅಂದರೆ ಸ್ತ್ರೀಶರೀರದಿಂದಲೇ ಕೌರವರಿಗೂ ಪಾಂಡವರಿಗೂ ಯುದ್ಧ ಮುಂಗಿಯಂತೆ ತನಕ ಅವಸತ್=ವಾಸ ಮಾಡಿದನು; ಕನ್ಯಾ=ಶಿಖಂಡಿಯು ಪಿತ್ರೋಃ=ತಂದೆ ತಾಯಿಗಳಿಗೆ ಅಶೇಷತಃ ಅನುಭೂತಂ=ತಾನು ಅನುಭವಿಸಿದ ಎಲ್ಲವನ್ನೂ ಕಥಯಾಮಾಸ=ಹೇಳಿದಳು. ತೌ=ಆ ಮಾತಾಪಿತೃಗಳು ಭೃಶಂ= ಬೆನ್ನಾಗಿ ಮುದಂ=ಸಂತೋಷವನ್ನು ಆಪತುಃ=ಹೊಂದಿದರು. ॥ ೧೨೦ ॥

ಪರೀಕ್ಷ್ಯ ತಾಮುಪಾಯೈಸ್ತು ಶ್ವಶುರೋಲಜ್ಜಿತೋಯಯೌ ॥ ೧೨೧ ॥

ಶ್ವೋಭೂತೇ ಸಾತು ಗಂಧರ್ವಂ ಪ್ರಾಪ್ಯ ತದ್ವಚನಾತ್ಪುನಃ ।
ಯಯೌ ತೇನೈವ ದೇಹೇನ ಪುಸ್ತ್ವಮೇವ ಸಮಾಶ್ರಿತಾ ॥ ೧೨೨ ॥

ಸ ಶಿಖಂಡೀ ನಾಮತೋಽಭೂದಸ್ತ್ರ ಶಸ್ತ್ರ ಪ್ರತಾಪವಾನ್ ॥ ೧೨೩ ॥

ತಾಂತು = ಆ ಶಿಖಂಡಿಯನ್ನಾದರೂ ಶ್ವಶುರಃ=ಮಾವನಾದ ಹಿರಣ್ಯವರ್ಮನಂ ಉಪಾಯೈಃ=ಪುರುಷತ್ವಕ್ಕೆ ಜ್ಞಾಪಕಗಳಾದ ಉಪಾಯಗಳಿಂದ ಪರೀಕ್ಷ್ಯ=ಪರೀಕ್ಷಿಸಿ ಲಜ್ಜಿತಃಸನ್=ನಾಚಿಕೆಗೊಂಡವನಾಗಿ ಯಯೌ=ಹೋದನು. ॥ ೧೨೧ ॥ ಶ್ವೋಭೂತೇ=ಮರುದಿವಸ ಸಾತು=ಆ ಶಿಖಂಡಿನಿಯಾದರೂ ಗಂಧರ್ವಂ=ತುಂಬುರುವನ್ನು ಪ್ರಾಪ್ಯ=ಹೊಂದಿ ತದ್ವಚನಾತ್ = ನೀನು ಸಾಯುವ ತನಕ ನನ್ನ ಪುರುಷದೇಹವು ನಿನಗೆ ಇರಲಿ. ನಿನ್ನ ಸ್ತ್ರೀದೇಹವು ನನಗಿರಲಿ ಈ ರೀತಿಯಾದ ಗಂಧರ್ವನ ಮಾತಿನಿಂದ ಪುನಃ=ತಿರುಗಿ ತೇನೈವದೇಹೇನ=ಆ ಗಂಧರ್ವನ ಪುರುಷದೇಹದಿಂದಲೇ ಯಯೌ=ತನ್ನ ಮನೆಗೆ ಹೋದಳು. ಸಾ=ಆ ಶಿಖಂಡಿನಿಯಿಂದ=ಅಭಿಮನ್ಯಮಾನವಾದ ಗಂಧರ್ವಾಂಶದಿಂದ ಕೂಡಿದ ದೇಹವು ನಾಮತಃ=ಹೆಸರಿನಿಂದ ಶಿಖಂಡೀ = ಶಿಖಂಡಿಯೆಂದು ಅಭೂತ್=ಆಯಿತು. ಸಃ=ಆ ಶಿಖಂಡಿಯು ಅಸ್ತ್ರಶಸ್ತ್ರಪ್ರತಾಪವಾನ್=ಅಸ್ತ್ರವಿದ್ಯೆಯಲ್ಲಿಯಂತೂ ಶಸ್ತ್ರವಿದ್ಯೆಯಲ್ಲಿಯೂ ಪ್ರತಾಪಶಾಲಿಯು ಅಭೂತ್=ಆದನು. ॥ ೧೨೨ ॥ ೧೨೩ ॥

ಅವಃ- ಪ್ರಸಂಗಸಂಗತಿಯಿಂದ ಪ್ರಾಪ್ತವಾದ ಕಥೆಯನ್ನು ಹೇಳಿ ಪ್ರಕೃತವಾದ ಕಥೆಯನ್ನು ಹೇಳುತ್ತಾರೆ.

ವಿಚಿತ್ರವೀರ್ಯಃಪ್ರಮದಾದ್ವಯಂ ತತ್ಸಂಪ್ರಾಪ್ಯರೇಮೇಽಬ್ದಗಣಾನ್ಸುಸಕ್ತಃ ।
ತತ್ಯಾಜ ದೇಹಂ ಸಚಯಕ್ಷ್ಮಣಾರ್ದಿತಸ್ತತೋಽಸ್ಯಮಾತಾಸ್ಮರದಾಶುಕೃಷ್ಣಮ್ ॥ ೧೨೪ ॥

ವಿಚಿತ್ರವೀರ್ಯಃ=ಶಂತನು ಮಗನಾದ ವಿಚಿತ್ರವೀರ್ಯನು ತತ್ಪ್ರಮದಾದ್ವಯಂ=ಹಿಂದೆ ಹೇಳಿದ ಅಂಬಿಕಾಂಬಾಲಿಕೆಯರೆಂಬ ಸ್ತ್ರೀದ್ವಂದ್ವವನ್ನು ಸಂಪ್ರಾಪ್ಯ=ಹೊಂದಿ ಸುಸಕ್ತಃಸನ್=ಚೆನ್ನಾಗಿ ಆ ಸ್ತ್ರೀಯರಲ್ಲಿ ಆಸಕ್ತನಾದವನಾಗಿ ಅಬ್ದಗಣಾನ್=ಬಹುವರ್ಷಗಳಲ್ಲಿ ರೇಮೇ=ಕ್ರೀಡಿಸಿದನು ಸಃ=ವಿಚಿತ್ರವೀರ್ಯನು ಯಕ್ಷ್ಮಣಾ=ಕ್ಷಯ ರೋಗದಿಂದ ಅರ್ದಿತಃಸನ್= ಪೀಡಿಸಿಕೊಳ್ಳಲ್ಪಟ್ಟವನಾಗಿ ದೇಹಂ=ಶರೀರವನ್ನು ತತ್ಯಾಜ=ಬಿಟ್ಟನು. ತತಃ=ಅನಂತರ ಅಸ್ಯ=ಈ ವಿಚಿತ್ರವೀರ್ಯನ ಮಾತಾ = ತಾಯಿಯಾದ ಸತ್ಯವತಿಯು ಕೃಷ್ಣಂ=ವೇದವ್ಯಾಸ ದೇವರನ್ನು ಆಶು=ಕೂಡಲೇ ಅಸ್ಮರತ್=ಸ್ಮರಿಸಿದಳು. ॥೧೨೪॥

ಆವಿರ್ಬಭೂವಾಶು ಜಗಜ್ಜನಿತ್ರೋ ಜನಾರ್ದನೋ ಜನ್ಮಜರಾಭಯಾಪಹಃ ।
ಸಮಸ್ತವಿಜ್ಞಾನ ತನುಃ ಸಖಾರ್ಣವಃ ಸಂಪೂಜಯಾಮಾಸ ಚತಂ ಜನಿತ್ರೀ ॥ ೧೨೫ ॥

ಜಗಜ್ಜನಿತ್ರಃ=ಲೋಕಕ್ಕೆ ತಂದೆಯಾದ ಜನ್ಮಜರಾಭಯಾಪಹಃ=ಹುಟ್ಟುವಿಕೆಯನ್ನು ಮುದಿತನವನ್ನು ಹೆಡ
ಯನ್ನು ನಾಶಮಾಡತಕ್ಕ ಸಮಸ್ತವಿಜ್ಞಾನ ತನುಃ=ಸರ್ವವಿಷಯಕವಾದ ವಿಶೇಷ ಜ್ಞಾನವೇ ದೇಹವಾಗಿ ಉಳ್ಳ ಸಂಖಾರ್ಣವ
ಆನಂದದಿಂದ ಸಮುದ್ರದಂತಿರುವ ಜನಾರ್ದನಃ=ಶ್ರೀವೇದವ್ಯಾಸ ದೇವರು ಆಶು=ಸ್ಮರಿಸಿದ ಕೂಡಲೇ ಆವಿರ್ಬಭೂವ=ಪ
ರಾದರು. ಜನಿತ್ರೀ=ತಾಯಿಯಾದ ಸತ್ಯವತಿಯು ತಂ=ಆ ವೇದವ್ಯಾಸ ದೇವರನ್ನು ಸಂಪೂಜಯಾಮಾಸ=ಭಕ್ತಿಪೂವ
ಪೂಜಿಸಿದಳು. ॥ ೧೨೫ ॥

ತಂ ಭೀಷ್ಮಪೂರ್ವೈಃ ಪರಮಾದರಾರ್ಚಿತಂ ಸ್ವಭಿಷ್ಟುತಂ ಚಾವದದಸ್ಯಮಾತಾ ।
ಪುತ್ರೌ ಮೃತೌ ಮೇ ನತು ರಾಜ್ಯಮೈಚ್ಛದ್ಭೀಷ್ಮೋ ಮಯಾನಿತರಾಮರ್ಥಿತೋಽಪಿ ॥ ೧೨೬ ॥
ಕ್ಷೇತ್ರೇ ತವಭ್ರಾತುರಪತ್ಯಮುತ್ತಮಮುತ್ಪಾದಯಾಸ್ಮತ್ಪರಮಾದರಾರ್ಥಿತಃ ।
ಇತೀರಿತಃ ಪ್ರಣತಶ್ಚಾಪ್ಯಭಿಷ್ಟುತೋ ಭೀಷ್ಮಾದಿ ಭಿಶ್ಚಾಹ ಜಗದ್ಗುರುರ್ವಚಃ ॥ ೧೨೭ ॥

ಅಸ್ಯ=ಈ ವೇದವ್ಯಾಸದೇವರ ಮ್ಮಾತಾ=ತಾಯಿಯಾದ ಸತ್ಯವತಿಯು ಭೀಷ್ಮಪೂರ್ವೈಃ=ಭೀಷ್ಮರೇ ಮೊದಲಾ
ರಿಂದ ಪರಮಾದರಾರ್ಚಿತಂ=ಅತಿಶಯಿತ ಭಕ್ತಿಯಿಂದ ಪೂಜಿಸಲ್ಪಟ್ಟ ಸ್ವಭಿಷ್ಟುತಂ=ಚೆನ್ನಾಗಿ ಸ್ತೋತ್ರ ಮಾಡಿಸಿ ಕೊಳ್ಳಲ್ಪ
ತಂ=ಆ ವೇದವ್ಯಾಸದೇವರನ್ನು ಕುರಿತು ಮೇ=ನನ್ನ ಪುತ್ರೌ=ಚಿತ್ರಾಂಗದ ಚಿಚಿತ್ರವೀರ್ಯರೆಂಬ ಇಬ್ಬರು ಮಕ್ಕಳು ಮೃತ
ಸತ್ತಿರುವರು. ಭೀಷ್ಮಃ=ಭೀಷ್ಮನು ಮಯಾ=ನನ್ನಿಂದ ನಿತರಾಂ=ಚೆನ್ನಾಗಿ ಅರ್ಥಿತೋಪಿ=ರಾಜ್ಯವನ್ನು ಪರಿಪಾಲಿಸು ಎಂ
ಪ್ರಾರ್ಥಿಸಿಕೊಳ್ಳಲ್ಪಟ್ಟವನಾದರೂ ಕೂಡ ರಾಜ್ಯಂ=ರಾಜ್ಯವನ್ನು ನೈಚ್ಛತ್=ಇಚ್ಛಿಸಲೇ ಇಲ್ಲ. ತತಃ=ಆದ್ದರಿಂದ ಅಸ್ಮತ್ಪರಮಾ
ದರಾರ್ಥಿತಃ=ನನ್ನಿಂದ ವಿಶೇಷ ಭಕ್ತಿಯಿಂದ ಪ್ರಾರ್ಥಿಸಿಕೊಳ್ಳಲ್ಪಟ್ಟ ತ್ವಂ=ನೀನು ತವ=ನಿನ್ನ ಭ್ರಾತುಃ=ಸಹೋದರನ
ವಿಚಿತ್ರವೀರ್ಯನ ಕ್ಷೇತ್ರೇ=ಹೆಂಡತಿಯಲ್ಲಿ ಉತ್ತಮಂ=ಶ್ರೇಷ್ಠವಾದ ಅಪತ್ಯಂ=ಮಗನನ್ನು ಉತ್ಪಾದಯ=ಹುಟ್ಟಿಸು ಇ
ಎಂದು ಆವದತ್=ಹೇಳಿದಳು. ಇತಿ=ಈ ರೀತಿಯಾಗಿ ಈರಿತೇಃ=ತಾಯಿಯಿಂದ ಹೇಳಿಸಿಕೊಳ್ಳಲ್ಪಟ್ಟ ಪ್ರಣತಃ=ನಮಸ್ಕ
ಕೊಳ್ಳಲ್ಪಟ್ಟ ಅಭೀಷ್ಟುತಃ=ಸ್ತೋತ್ರ ಮಾಡಿಸಿ ಕೊಳ್ಳಲ್ಪಟ್ಟ ಭೀಷ್ಮಾದಿಭಿಶ್ಚ=ಭೀಷ್ಮಾದಿಗಳಿಂದಲೂ ಕೂಡ ನಮಸ್ಕ
ಮತ್ತು ಸ್ತೋತ್ರ ಮಾಡಿಸಿ ಕೊಳ್ಳಲ್ಪಟ್ಟ ಜಗದ್ಗುರುಃ=ಲೋಕಕ್ಕೆ ಉಪದೇಶಕರಾದ ವೇದವ್ಯಾಸ ದೇವರು ವಚಃ=ಮಾತ
ಆಹ=(ತಾಯಿಯನ್ನು ಕುರಿತು) ಹೇಳಿದರು. ॥ ೧೨೬ ॥ ೧೨೭ ॥

ಋತೇ ರಮಾಂ ಜಾತು ಮಮಾಂಗ ಸಂಗಯೋಗ್ಯಾಂಗನಾನ್ಯೈವ ಸುರಾಲಯೇಽಪಿ ।
ತಥಾಪಿ ತೇ ವಾಕ್ಯಮಹಂ ಕರಿಷ್ಯೇ ಸಾವತ್ಸರಂಸಾ ಚರತು ವ್ರತಂ ಮೇ ॥ ೧೨೮ ॥

ರಮಾಂ=ಲಕ್ಷ್ಮೀದೇವಿಯನ್ನು ಋತೇ=ಹೊರತು ಜಾತು=ಯಾವಾಗಲೂ ಮಮ=ನನ್ನ ಅಂಗಸಂಗಯೋಗ್ಯಾ
ಗನಾ=ಅವಯವಗಳ ಸಂಬಂಧಕ್ಕೆ ಅಂದರೆ ಸಂಭೋಗಕ್ಕೆ ಯೋಗ್ಯಳಾದ ಸ್ತ್ರೀಯರು ಸುರಾಲಯೇಪಿ=ಸ್ವರ್ಗದಲ್ಲಿಯೂ ಕೂ
ನೈವ=ಇಲ್ಲವೇ ಇಲ್ಲ. ತಥಾಪಿ=ಹಾಗಾದರೂ ತೇ= ನಿನ್ನ ವಾಕ್ಯಂ= ಮಕ್ಕಳನ್ನು ಹುಟ್ಟಿಸಬೇಕೆಂಬ ಮಾತನ್ನು ಕರಿಷ್ಯೇ
ಮಾಡುವೆನು. ಸಾ= ಆ ನಿನ್ನ ಸೊಸೆಯು ಸಾಂವತ್ಸರಂ= ಒಂದು ವರ್ಷ ಪರ್ಯಂತವಾದ ಮೇ= ನನ್ನ ವ್ರತಂ= ವೈಷ್ಣ
ವ್ರತವನ್ನು ಚರತು= ಮಾಡಲಿ. ॥ ೧೨೮ ॥

ಸಾಪ್ಲುತ ದೇಹಾಥಚ ವೈಷ್ಣವ ವ್ರತಾನ್ಮತ್ತಃ ಸಮಾಪ್ನೋತು ಸುತಂ ವರಿಷ್ಟಃ ।
ಇತೀರಿತೇ ರಾಷ್ಟ್ರಮುಪೈತಿನಾಶಮಿತಿಬ್ರುವಂತೀಂ ಪುನರಾಹ ವಾಕ್ಯಮ್ ॥ ೧೨೯ ॥

ಅಥ= ವ್ರತಾಚರಣೆಯ ಅನಂತರ ವೈಷ್ಣವವ್ರತಾತ್= ವಿಷ್ಣುಪಂಚಕದ್ದೀಸೆಯಿಂದ ಪೂತದೇಹಾ= ಪವಿತ್ರವಾ
ಶರೀರವುಳ್ಳ ಸಾ= ಆ ಅಂಬೆಯು ಮತ್ತಃ=ನನ್ನ ದೆಸೆಯಿಂದ ವರಿಷ್ಠಂ=ಶ್ರೇಷ್ಠನಾದ ಸುತಂ=ಮಗನನ್ನು ಸಮಾಪ್ನೋತು

ಪೊಂದಲಿ. ಇತಿ=ಈ ರೀತಿಯಾಗಿ ಈರಿತೇಸತಿ=ವೇದವ್ಯಾಸರು ಹೇಳುತ್ತಿರಲು ರಾಷ್ಟ್ರಂ=(ಈಗಲೇ ಮಗನನ್ನು ಹುಟ್ಟಿಸದಿದ್ದಲ್ಲಿ ರಾಜರು ಇಲ್ಲದಿರುವುದರಿಂದ) ರಾಜ್ಯವು ನಾಶಂ = ನಾಶವನ್ನು ಉಪೈತಿ=ಹೊಂದುತ್ತದೆ. ಇತಿ=ಈ ರೀತಿಯಾಗಿ ಬ್ರುವಂತೀಂ= ಹೇಳತಕ್ಕ ತಾಯಿಯನ್ನು ಕುರಿತು ಪುನಃ=ಮತ್ತೆ ವಾಕ್ಯಂ = ಮಾತನ್ನು ಆಹ=(ವೇದವ್ಯಾಸರು) ಹೇಳಿದರು. ॥ ೧೨೯ ॥

ಸೌಮ್ಯಸ್ವರೂಪೋಪ್ಯತಿ ಭೀಷಣಂ ಮೃಷಾತಚ್ಚಕ್ಷುಷೋರೂಪಮಹಂ ಪ್ರದರ್ಶಯೇ ।
ಸಹೇತ ಸಾ ತದ್ಯದಿ ಪುತ್ರಕೋsಸ್ಯಾಭವೇದ್ಗುಣಾಢ್ಯೋ ಬಲವೀರ್ಯಯುಕ್ತಃ ॥ ೧೩೦ ॥

ಅಹಂ = ನಾನು ಸೌಮ್ಯಸ್ವರೂಪೋಪಿ=ಅತ್ಯಂತ ಶಾಂತವಾದ ರೂಪವುಳ್ಳವನಾದರೂ ಕೂಡ ತಚ್ಚಕ್ಷುಷೋಃ=ನಿನ್ನ ಸೊಸೆಯ ಕಣ್ಣುಗಳಿಗೆ ಅತಿಭೀಷಣಂ=ಅತ್ಯಂತ ಭಯಂಕರವಾದ ರೂಪಂ=ರೂಪವನ್ನು ಮೃಷಾ=ಸುಮ್ಮನೇ ಪ್ರದರ್ಶಯೇ= (ಸಂಹಾರಕಾಲದಲ್ಲಿ ತೋರಿಸಲು ಯೋಗ್ಯವಾದ ರೂಪವನ್ನು ಸಂಹಾರ ಕಾಲವಾಗದಿದ್ದರೂ ತೋರಿಸುವೆನು.) ಸಾ = ಆ ನಿನ್ನ ಸೊಸೆಯು ತತ್=ಆ ಭಯಂಕರವಾಗಿ ಕಾಣತಕ್ಕ ರೂಪವನ್ನು ಯದಿಸಹೇತ=ನೋಡಲು ಸಹನೆವುಳ್ಳವಳಾದರೆ ಅಸ್ಯಾಃ = ಈ ನಿನ್ನ ಸೊಸೆಗೆ ಗುಣಸ್ಯ=ಗುಣಗಳಿಂದ ಯುಕ್ತನಾದ ಬಲವೀರ್ಯಯುಕ್ತಃ=ಬಲವೀರ್ಯಗಳಿಂದ ಕೂಡಿದ ಪುತ್ರಕಃ=ಮಗನು ಭವೇತ್=ಆಗುವನು. ॥ ೧೩೦ ॥

ಇತೀರಿತೇsಸ್ತ್ವತ್ಯುದಿತಸ್ತಯಾ ಗಮತ್ಕೃಷ್ಣೋಂಬಿಕಾಂ ಸಾತು ಭಯಾನ್ನ್ಯಮೀಲಯತ್ ।
ಅಭೂಚ್ಚತಸ್ಯಾಂ ಧೃತರಾಷ್ಟ್ರನಾಮಕೋ ಗಂಧರ್ವರಾಟ್ ಪವನಾವೇಶಯುಕ್ತಃ ॥ ೧೩೧ ॥

ಇತಿ=ಈ ರೀತಿಯಾಗಿ ಈರಿತೇಸತೀ=ವೇದವ್ಯಾಸರಿಂದ ಹೇಳಲ್ಪಡುತ್ತಿರಲಂ ತಯಾ=ಆ ಸತ್ಯವತಿಯಿಂದ ಅಸ್ತು ಇತಿ=ಹಾಗೆಯೇ ಆಗಲೆಂದು ಉದಿತಃ=ಹೇಳಿಸಿಕೊಳ್ಳಲ್ಪಟ್ಟ ಕೃಷ್ಣಃ=ವೇದವ್ಯಾಸರು ಅಂಬಿಕಾಂ=ಅಂಬಿಕೆಯನ್ನು ಅಗಮತ್=ಪುತ್ರೋತ್ಪತ್ತಿಗಾಗಿ ಹೊಂದಿದರು. ಸಾ ತು=ಆ ಅಂಬಿಕೆಯಾದರೂ ಭಯಾತ್=ಭಯಂಕರ ರೂಪದರ್ಶನದಿಂದುಂಟಾದ ಹೆದರಿಕೆಯಿಂದ ನ್ಯಮೀಲಯತ್=ಕಣ್ಣುಗಳನ್ನು ಮುಚ್ಚಿದಳು. ಗಂಧರ್ವರಾಟ್=ಹಂಸನೆಂದು ಹೆಸರುಳ್ಳ ಗಂಧರ್ವ ಶ್ರೇಷ್ಠನು. ~~ಪವನಾವೇಶಯುಕ್ತಃಸನ್=ವಾಯುದೇವರ ಆವೇಶದಿಂದ ಕೂಡಿದವನಾಗಿ ತಸ್ಯಾಂ=ಆ ಅಂಬಿಕೆಯಲ್ಲಿ ಧೃತರಾಷ್ಟ್ರನಾಮಕಃ~~ ಸನ್=ಧೃತರಾಷ್ಟ್ರನೆಂದು ಹೆಸರುಳ್ಳವನಾಗಿ ಅಭೂತ್=ಹುಟ್ಟಿದನು. ॥ ೧೩೧ ॥

ಸಮಾರುತಾವೇಶವಶಾದ್ಬಲಾಧಿಕೋ ಬಭೂವರಾಜಾಧೃತರಾಷ್ಟ್ರನಾಮಾ ॥
ಅದಾದ್ವರಂ ಚಾಸ್ಯ ಬಲಾಧಿಕತ್ವಂ ಕೃಷ್ಣೋಂsಥ ಆಸಿತ್ಸತುಮಾತ್ರದೋಷತಃ ॥ ೧೩೨ ॥

ಸ ಧೃತರಾಷ್ಟ್ರನಾಮಾ = ಆ ಧೃತರಾಷ್ಟ್ರನೆಂದು ಹೆಸರುಳ್ಳ ರಾಜಾ=ರಾಜನು ಮಾರುತಾವೇಶವಶಾತ್=ವಾಯುದೇವರ ಆವೇಶ ಬಲದಿಂದ ಬಲಾಧಿಕಃ=ಹೆಚ್ಚು ಬಲವುಳ್ಳವನು ಬಭೂವ=ಆದನು. ಅಸ್ಯ=ಈ ಧೃತರಾಷ್ಟ್ರನಿಗೆ ಕೃಷ್ಣಃ= ವೇದವ್ಯಾಸರು ಬಲಾಧಿಕತ್ವಂ=ಅಧಿಕ ಬಲ (ಬಲಾಧಿಕತ್ವ)ರೂಪವಾದ ವರಂ=ವರವನ್ನು ಅದಾತ್=ಕೊಟ್ಟರು. ಸತು=ಆ ಧೃತರಾಷ್ಟ್ರನಾದರೂ ಮಾತೃದೋಷತಃ=ತಾಯಿಯು ಕಣ್ಣನ್ನು ಮುಚ್ಚಿದ ದೋಷದಿಂದ ಅಂಧಃ=ಕುರುಡನು ಆಸೀತ್= ಆದನು. ॥ ೧೩೨ ॥

ಜ್ಞಾತ್ವಾತಮಂಧಂ ಪುನರೇವಕೃಷ್ಣಂ ಮಾತಾಬ್ರವೀಜ್ಜನಯಾನ್ಯಂ ಗುಣಾಢ್ಯಮ್ ॥
ಅಂಬಾಲಿಕಾಯಾಮಿತಿ ತತ್ತಥಾಕರೊದ್ಭಯಾತ್ತುಸಾಪಾಂಡುರಭೂನ್ಮೃಷಾದೃಕ್ ॥೧೩೩॥

ಮಾತಾ=ತಾಯಿಯಾದ ಸತ್ಯವತಿಯು ತಂ=ಆ ಧೃತರಾಷ್ಟ್ರನನ್ನು ಅಂಧಂ=ಕುರುಡನನ್ನಾಗಿ ಜ್ಞಾತ್ವಾ=ತಿಳಿದು ಪುನಃ=ಮತ್ತು ಕೃಷ್ಣಃ = ವೇದವ್ಯಾಸರನ್ನು ಕುರಿತು ಅಂಬಾಲಿಕಾಯಾಂ=ಅಂಬಾಲಿಕೆಯಲ್ಲಿ ಗುಣಾಢ್ಯಂ=ಗುಣ ಸಂಪನ್ನನಾದ ಅನ್ಯಂ=ಇನ್ನೊಬ್ಬ ಮಗನನ್ನು ಜನಯ=ಹುಟ್ಟಿಸು. ಇತಿ=ಎಂದು ಅಬ್ರವೀತ್=ಹೇಳಿದಳು. ತತ್=ಆ ಸತ್ಯವತಿಯು ಮಾತನ್ನು ತಥಾ=ಸತ್ಯವತಿಯು ಹೇಳಿದಂತೆಯೇ ಅಕರೋತ್=(ವೇದವ್ಯಾಸರು) ಮಾಡಿದರು. ತು=ಅಂಬಿಕೆ ಯಮಗನಂತೆ ನನ್ನ

ಮಗನಂ ಕುರುಡನಂ ಆಗಬಾರದು ಎಂಬ ಕಾರ್ಯವಿಶೇಷದಿಂದ ಮೃಷಾದೃಕ್=ವ್ಯರ್ಥವಾಗಿ ವೇದವ್ಯಾಸರಿಂದ ತೋರಿಸಲ್ಪ
ಭಯಂಕರ ರೂಪವನ್ನು ಕಣ್ಣುಗಳನ್ನು ಮುಚ್ಚದೆ ನೋಡತಕ್ಕ ಸಾ=ಆ ಅಂಬಾಲಿಕೆಯು ಭಯಾತ್=ಭಯಂಕರ ರೂಪವನ
ನೋಡುವುದರಿಂದುಂಟಾದ ಭಯದಿಂದ ಪಾಂಡುಃ=ತನ್ನ ಭಂಗಾರದಂತಹ ವರ್ಣವನ್ನು ಬಿಟ್ಟು ಭಯದಿಂದ ಪಾಂಡುರೋ
ಗ್ರಸ್ತರಂತೆ ಆರಸಿನ ಬಣ್ಣವುಳ್ಳವಳು ಅಭೂತ್=ಆದಳು. ॥ ೧೩೩ ॥

ಪರಾವಹೋ ನಾಮ ಮರುತ್ತತೋsಭವದ್ವರ್ಣೇನಪಾಂಡುಃಸಹಿ ನಾಮತಶ್ಚ ।
ಸ ಚಾಸ ವೀರ್ಯಾಧಿಕ ಏವ ವಾಯೋ ರಾವೇಶತಃ ಸರ್ವಶಸ್ತ್ರಾಸ್ತ್ರವೇತ್ತಾ ॥ ೧೩೪ ॥

ತತಃ=ಆ ಅಂಬಾಲಿಕೆಯ ದೆಸೆಯಿಂದ ಪರಾವಹೋನಾಮ=ಪರಾವಹನೆಂದೂ ಪ್ರಸಿದ್ಧನಾದ ಮರುತ್ = ವಾಯು
ಅಭವತ್=ಹುಟ್ಟಿದನು. ಹಿ = ಯಾವ ಕಾರಣದಿಂದ ಸಃ=ಆ ಅಂಬಾಲಿಕೆಯ ಮಗನು ವರ್ಣೇನ=ಬಣ್ಣದಿಂದ ಪಾಂಡುಃ
ಪಾಂಡುರನೂ ಅಭವತ್=ಆದನೋ ತತಃ=ಆ ಕಾರಣದಿಂದ ನಾಮತಶ್ಚ=ಹೆಸರಿನಿಂದಲೂ ಕೂಡ ಪಾಂಡುಃ=ಪಾಂಡು ರಾ
ನೆಂದೂ ಅಭವತ್=ಆದನು. ಸಚ=ಆ ಪಾಂಡು ರಾಜನಾದರೂ ವಾಯೋಃ=ವಾಯುದೇವರ ಆವೇಶತಃ=ಆವೇಶದ ನಿಮ್ಮಿ
ದಿಂದ ವೀರ್ಯಾಧಿಕಃ=ಅಧಿಕ ವೀರ್ಯವುಳ್ಳವನೂ ಸರ್ವಶಸ್ತ್ರಾಸ್ತ್ರವೇತ್ತಾ=ಎಲ್ಲಾ ಅಸ್ತ್ರ. ಶಸ್ತ್ರ ವಿದ್ಯೆಗಳನ್ನು ತಿಳಿದವ
ಅಸ=ಆದನು. ॥ ೧೩೪ ॥

ತಸ್ಮೈ ತಥಾ ಬಲವೀರ್ಯಾಧಿಕತ್ವವರಂಪ್ರಾದಾತ್ ಕೃಷ್ಣ ಏವಾಥ ಪಾಂಡುಮ್ ।
ವಿಜ್ಞಾಯ ತಂ ಪ್ರಾಹ ಪುನಶ್ಚಮಾತಾ ನಿರ್ದೋಷಮನ್ಯಂಜನಯೋತ್ತಮಂಸುತಮ್ ॥ ೧೩೫ ॥

ಕೃಷ್ಣಃ=ವೇದವ್ಯಾಸರು, ತಸ್ಮೈ=ಪಾಂಡುರಾಜನಿಗೋಸ್ಕರ=ತಥಾ=ಹಾಗೆಯೇ ಬಲವೀರ್ಯಾಧಿಕತ್ವವರಂ=ಬ
ವೀರ್ಯಗಳ ಅಧಿಕ್ಯ ರೂಪವಾದ ವರವನ್ನು ಪ್ರಾದಾತ್=ಕೊಟ್ಟರು. ಅಥ=ಅನಂತರ ಮಾತಾ = ತಾಯಿಯಾದ ಸತ್ಯವತಿಯ
ತಂ=ಆ ಅಂಬಾಲಿಕೆಯಲ್ಲಿ ಹುಟ್ಟಿದ ಮಗನನ್ನು ಪಾಂಡುಂ=ಪಾಂಡುರ ವರ್ಣವುಳ್ಳವನನ್ನಾಗಿ ವಿಜ್ಞಾಯ=ತಿಳಿದು ಪುನಃ
ಮತ್ತು ನಿರ್ದೋಷಂ=ಅಂಧತ್ವ, ಪಾಂಡುತ್ವ ಮೊದಲಾದ ದೋಷವಿಲ್ಲದ ಅನ್ಯಂ=ಇನ್ನೊಬ್ಬ ಉತ್ತಮಂ ಸುತಂ=ಶ್ರೇ
ಮಗನನ್ನು ಜನಯ=ಹುಟ್ಟಿಸು ಇತಿ=ಎಂದು ಪ್ರಾಹ=ಹೇಳಿದಳು. ॥ ೧೩೫ ॥

ಉಕ್ತ್ವೇತಿ ಕೃಷ್ಣಂ ಪುನರೇವಚ ಸ್ನುಷಾವಾಹ ತ್ವಯಾಕ್ಷ್ಣೋರ್ಹಿನಿಮೀಲನಂಪುರಾ ।
ಕೃತಂತತಸ್ತೇ ಸುತ ಏಷ ಚಾಂಧಃ ತತಃ ಪುನಃ ಕೃಷ್ಣಮುಪಾಸ್ಯ ಭಕ್ತಿತಃ ॥ ೧೩೬ ॥

ಪುನಃ=ಮತ್ತು ಕೃಷ್ಣಂ=ವೇದವ್ಯಾಸರನ್ನು ಉಕ್ತ್ವಾ=ಒಳ್ಳೇ ಮಗನನ್ನು ಹುಟ್ಟಿಸು ಎಂದು ಹೇಳಿ ಸ್ನುಷಾಂ=ಸೊ
ಯಾದ ಅಂಬಿಕೆಯನ್ನು ಕುರಿತು ಪುರಾ=ಹಿಂದೆ ತ್ವಯಾ = ನಿನ್ನಿಂದ ಅಕ್ಷ್ಣೋಃ=ಕಣ್ಣುಗಳ ನಿಮೀಲನಂ=ಮುಚ್ಚಿ ವಿಕೃ
ಯಂತಃ = ಯಾವ ಕಾರಣದಿಂದ ಕೃತಂ = ಮಾಡಲ್ಪಟ್ಟಿತೋ ತತಃ = ಆ ಕಾರಣದಿಂದ ತೇ = ನಿನ್ನ ಸುತಃ = ಮಗ
ಅಂಧಃ = ಕುರುಡನು ಏಷ = ಆದನು. ತತಃ = ಆದ್ದರಿಂದ ದೋಷವಿಲ್ಲದ ಮಗನು ಹುಟ್ಟುವುದಕ್ಕೋಸ್ಕರ ಪುನಃ
ಮತ್ತೊಮ್ಮೆ ಭಕ್ತಿತಃ = ಭಕ್ತಿಯಿಂದ ಕೃಷ್ಣಂ = ವೇದವ್ಯಾಸ ದೇವರನ್ನು ಉಪಾಸ್ಯ = ಸೇವಿಸು ಇತಿ= ಎಂಬುದಾಗಿ ಅಹ
ಸತ್ಯವತಿಯು ಹೇಳಿದಳು. ॥ ೧೩೬ ॥

ಇತೀರಿತಾಪ್ಯಸ್ಯಽಂ ಮಾಯಯಾ ಸಾ ಭೀತಾ ಭುಜಿಷ್ಯಾಂ ಕುಮತಿರ್ನ್ಯಯೋಜಯತ್ ।
ಸಾತಂ ಪರಾನಂದತನುಂ ಗುಣಾರ್ಣವಂ ಸಂಪ್ರಾಪ್ಯ ಭಕ್ತ್ಯಾಪರಯೈವ ರೇಮೇ ॥ ೧೩೭ ॥

ಇತಿ = ಈ ರೀತಿಯಾಗಿ ಈರಿತಾಪಿ = ಹೇಳಿಸಿಕೊಳ್ಳಲ್ಪಟ್ಟವಳಾದರೂ ಕೂಡ ಅಸ್ಯ = ಈ ವೇದವ್ಯಾ
ಮಾಯಯಾ = ಇಚ್ಛೆಯಿಂದ ಭೀತಾ = ಹೆದರಿದ ಕುಮತಿಃ = ಕೆಟ್ಟ ಬುದ್ಧಿಯುಳ್ಳ ಸಾ = ಆ ಅಂಬಿಕೆಯು ಭುಜಿಷ್ಯಾಂ
ಸೇವಕಳಾದ ಶೂದ್ರ ಸ್ತ್ರೀಯನ್ನು ನ್ಯಯೋಜಯತ್ = ಕಳುಹಿಸಿಕೊಟ್ಟಳು. ಸಾ = ಆ ಶೂದ್ರ ಸ್ತ್ರೀಯು ಪರಾನಂದತನುಂ
ಉತ್ತಮವಾದ ಸುಖವೇ ಶರೀರವಾಗಿ ಉಳ್ಳ ಗುಣಾರ್ಣವಂ = ಗುಣಗಳಿಂದ ಸಮುದ್ರದಂತಿರುವ ತಂ= ಆ ವೇದವ್ಯಾಸರ
ಪರಯಾ = ಉತ್ತಮವಾದ ಭಕ್ತ್ಯೈವ = ಭಕ್ತಿಯಿಂದಲೇ ಸಂಪ್ರಾಪ್ಯ = ಹೊಂದಿ ರೇಮೇ = ಕ್ರೀಡಿಸಿದಳು. ॥ ೧೩೭ ॥

ತಸ್ಯಾಂ ಸದೇವೋೇsಜನಿ ಧರ್ಮರಾಜೋಮಾಂಡವ್ಯಶಾಪಾದ್ಯ ಉವಾಹ ಶೂದ್ರತಾಮ್ ।
ವಸಿಷ್ಠಸಾಮ್ಯಂ ಸಮಭೀಪ್ಸನಮಾನಂ ಪ್ರಾಚ್ಯಾವಯನ್ನಿಚ್ಛಯಾ ಶಾಪಮಾಪ ॥ ೧೫೮ ॥

ತಸ್ಯಾಂ = ಆ ಶೂದ್ರ ಸ್ತ್ರೀಯರಲ್ಲಿ ಯಃ = ಯಾವ ಧರ್ಮರಾಜಃ = ಯಮಧರ್ಮರಾಜನು ಮಾಂಡವ್ಯ ಶಾಪಾತ್ = ಶೂದ್ರನಾಗು ಎಂಬ ಮಾಂಡವ್ಯ ಋಷಿಯ ಶಾಪದಿಂದ ಶೂದ್ರತಾಂ = ಶೂದ್ರ ಸ್ತ್ರೀಯಲ್ಲಿ ಹುಟ್ಟಿದ ಕಾರಣ ಶೂದ್ರತ್ವವನ್ನೂ ಉವಾಹ = ಹೊಂದಿದನೋ ಸಃ = ಅಂತಹ ದೇವಃ = ಪೂಜ್ಯನಾದ ಧರ್ಮರಾಜನು ಅಜನಿ = ಹುಟ್ಟಿದನು. ಇದರನಾದ ಮಾಂಡವ್ಯನಿಂದ ಉತ್ತಮನಾದ ಯಮನು ಹೇಗೆ ಶಾಪವನ್ನು ಹೊಂದಿದನು ಎಂಬ ಶಂಕೆಗೆ ಉತ್ತಮನಾದ ತನಗೆ ಶಾಪವನ್ನು ಕೊಡುವುದರಿಂದ ಅವನ ತಪಸ್ಸು ನಾಶವಾಗುವದು ಎಂದು ಶ್ರೀಯಃಪತಿದೇವರು ತಿಳಿದಿದ್ದರು ಎಂದು ಉತ್ತರವನ್ನು ಹೇಳುತ್ತಾರೆ. ವಸಿಷ್ಠಸಾಮ್ಯಂ = ವಸಿಷ್ಠರಿಂದ ಸಮಾನತ್ವವನ್ನು ಸಮಭೀಪ್ಸಮಾನಂ = ಚೆನ್ನಾಗಿ ಹೊಂದಲು ಇಚ್ಛಿಸುವ ಮಾಂಡವ್ಯನನ್ನು ಪ್ರಚ್ಯಾವಯನ್ ಸನ್ = ವಸಿಷ್ಠರ ಸಾಮ್ಯ ಪ್ರಾಪ್ತಿಗಾಗಿ ಮಾಡತಕ್ಕ ತಪಸ್ಸಿನಿಂದ ಬಿಡಿಸುವವನಾಗಿ ಇಚ್ಛಯಾ = ತನ್ನ ಇಚ್ಛೆಯಿಂದಲೇ ಶಾಪಂ = ಶೂದ್ರಯೋನಿ ಪ್ರಾಪ್ತಿರೂಪವಾದ ಶಾಪವನ್ನು ಆಪ = ಹೊಂದಿದನು. ॥೧೫೮॥

ಅಯೋಗ್ಯ ಸಂಪ್ರಾಪ್ತಿಕೃತ ಪ್ರಯತ್ನ ದೋಷಾತ್ಸಮಾರೋಪಿತಮೇವ ಶೂಲೇ ।
ಚೋರೈರ್ಹೃತೇsರ್ಥೇsಪಿತು ಚೋರಬುದ್ಧ್ಯಾ ಮಕ್ಷೀವಧಾದಿತ್ಯವದದ್ಯಮಸ್ತಂ ॥ ೧೫೯ ॥

ಅಯೋಗ್ಯಸಂಪ್ರಾಪ್ತಿಕೃತಪ್ರಯತ್ನದೋಷಾತ್ = ತನಗೆ ಅಯೋಗ್ಯವಾದ, ವಸಿಷ್ಠರ ಸಾಮ್ಯವನ್ನು ಹೊಂದುವ ವಿಷಯದಲ್ಲಿ, ಮಾಡಲ್ಪಟ್ಟ ಪ್ರಯತ್ನದಿಂದುಂಟಾದ ದೋಷದಿಂದಲೇ ಅರ್ಥೇ = ಒಬ್ಬ ಧನಿಕನ ಹಣವು ಚೋರೈಃ = ಕಳ್ಳರಿಂದ ಹೃತೇಸತ್ಯಪಿ = ಅಪಹರಿಸಲ್ಪಟ್ಟರೂ ಚೋರಬುದ್ಧ್ಯಾ = (ಧನಿಕನ ದೂತರು ಕಳ್ಳನನ್ನು ಓಡಿಸಿಕೊಂಡು ಬಂದಾಗ ಆ ಕಳ್ಳರು ಆ ದ್ರವ್ಯವನ್ನು ಧ್ಯಾನ ಮಾಡುವ ಮಾಂಡವ್ಯನ ಮುಂದೆ ಇಟ್ಟು ಓಡಿ ಹೋದರು. ಆಗ ದೂತರು ಇವನ ಮುಂದೆ ಇರುವ ದ್ರವ್ಯವನ್ನು ನೋಡಿ ಇವನೇ ಕಳ್ಳನು ಎಂಬ ಬುದ್ಧಿಯಿಂದ ಶೂಲಕ್ಕೆ ಹಾಕಿದರು.) ಶೂಲೇ = ಶೂಲದಲ್ಲಿ ಸಮಾರೋಪಿತಂ = ಏರಿಸಲ್ಪಟ್ಟ ತಂ = ಆ ಮಾಂಡವ್ಯನನ್ನು ಕುರಿತು (ಯಮನೇ ನನಗೆ ಶೂಲಾರೂಪಣವು ಏಕೆ ಆಯಿತು ಎಂದು ಅಲ್ಲಿಗೆ ಬಂದಿರುವ ಯಮನನ್ನು ಕುರಿತು ಮಾಂಡವ್ಯನು ಕೇಳಲು ಯಮನು) ಮಕ್ಷೀವಧಾತ್ = (ವಸಿಷ್ಠರ ಸಾಮ್ಯವನ್ನು ಅಪೇಕ್ಷಿಸಿ ತಪಸ್ಸನ್ನು ಮಾಡಿರುವ ಮುಖ್ಯದೋಷವನ್ನು ಹೇಳದೆ ಮಾಂಡವ್ಯನಿಗೆ ಕೋಪ ಬರುವುದಕ್ಕೋಸ್ಕರ)ನೊಣವನ್ನು ಮುಳ್ಳಿಗೆ ಚುಚ್ಚಿ ಕೊಂದಿರುವುದರಿಂದ ನಿನಗೆ ಶೂಲ ಪ್ರಾಪ್ತಿಯು ಇತಿ = ಎಂದು ಯಮಃ = ಯಮನು. ತಂ = ಮಾಂಡವ್ಯನನ್ನು ಕುರಿತು ಅವದತ್ = ಹೇಳಿದನು.ಆಗ ಸಿಟ್ಟಿಗೊಂಡ ಮಾಂಡವ್ಯನು ನೀನು ಸುಳ್ಳುಹೇಳಿದ್ದರಿಂದ ಶೂದ್ರನಾಗು ಎಂದು ಶಾಪ ಕೊಟ್ಟನು. ॥ ೧೫೯ ॥

ಅವಃ- ಶೂಲಾರೋಪಣೆಗೆ ವಸಿಷ್ಠರ ಸಾಮ್ಯ ಪ್ರಾಪ್ತಿಗಾಗಿ ಮಾಡಿದ ಪ್ರಯತ್ನದಿಂದ ಉಂಟಾದ ದೋಷವೇ ಕಾರಣವಾದರೆ ಯಮನು ನೊಣವನ್ನು ಕೊಂದದ್ದರಿಂದ ಶೂಲರೋಪಣವಾಯಿತು ಎಂಬ ಮಾತು ಸುಳ್ಳು ಆಯಿತು ಎಂಬ ಶಂಕೆಗೆ ಸಮಾಧಾನವನ್ನು ಹೇಳುತ್ತಾರೆ.

ನಾಸತ್ಯತಾ ತಸ್ಯ ಚ ತತ್ರ ಹೇತುತಃ ಶಾಪಂಗೃಹೀತುಂ ಸತಥೈವಚೋಕ್ತ್ವಾ ।
ಅವಾಪ ಶೂದ್ರತ್ವಮಥಾಸ್ಯ ನಾಮ ಚಕ್ರೇಕೃಷ್ಣಃ ಸರ್ವವಿತ್ವಂ ತಥಾದಾತ್ ॥ ೧೬೦ ॥

ತಸ್ಯ ಚ = ನೊಣವನ್ನು ಕೊಂದ ಪಾಪಕ್ಕೂ ಕೂಡ ತತ್ರ = ಆ ಶೂಲಾರೋಪಣದಲ್ಲಿ ಹೇತುತಃ = ಅಮುಖ್ಯ ಕಾರಣತ್ವವಿರುವುದರಿಂದ ಅಸತ್ಯತಾನ = ಯಮನ ವಾಕ್ಯಕ್ಕೆ ಅನೃತತ್ವವಿಲ್ಲ. (ನೊಣವನ್ನು ಕೊಂದದ್ದಕ್ಕೆ ಪ್ರಾಯಶ್ಚಿತ್ತವನ್ನು ಮಾಡದಿರುವದರಿಂದ ಮಕ್ಷಿಕಾವಧವೂ ಶೂಲಾರೋಪಣೆಗೆ ಕಾರಣವಾಯಿತು. ವಸಿಷ್ಠರ ಸಾಮ್ಯಕ್ಕಾಗಿ ಮಾಡಿದ ತಪಸ್ಸು ಮಕ್ಷಿಕಾವಧಗಳೆಂಬ ಎರಡು ಕಾರಣಗಳಿರುವಾಗ ಮಕ್ಷೀವಧದಿಂದ ಶೂಲಾರೋಪಣ ಏಕೆ ಹೇಳಿದನು ಎಂಬ ಶಂಕೆಗೆ ಉತ್ತರವನ್ನು ಹೇಳುತ್ತಾರೆ. ವಸಿಷ್ಠರ ಸಾಮ್ಯಕ್ಕಾಗಿ ತಪಃಕಾರಣ ರೂಪ ಉಪಪನ್ನವಾದ ಪ್ರಬಲ ಕಾರಣವನ್ನು ಶೂಲಾರೋಪಣೆಗೆ ಹೇಳಿದರೆ ಋಷಿಗೆ ಕೋಪ ಬರಲಾರದು, ಶಾಪವನ್ನೂ ಕೊಡಲಾರನು. ತಪಸ್ಸಿನ ನಾಶವಾಗಬೇಕಾದರೆ ಅವನು ಶಾಪವನ್ನು ಕೊಡಬೇಕು. ಆದಕ್ಕಾಗಿ) ಸಃ = ಆ ಯಮನು ಶಾಪಂ = ಮಾಂಡವ್ಯನಿಂದ ಶಾಪವನ್ನು ಗೃಹೀತುಂ = ಸ್ವೀಕರಿಸುವುದಕ್ಕಾಗಿಯೆ

ತಥೈವ= ಹಾಗೆಯೇ ಅಂದರೆ ನೊಣವನ್ನು ಕೊಂದಿರುವುದರಿಂದಲೇ ಶಿಕ್ಷೆಯಾಗಿದೆ ಎಂದು ಉಕ್ತ್ವಾ= ಹೇಳಿಶೂದ್ರತ್ವಂ = ಶೂದ್ರ ಜನ್ಮವನ್ನು ಅವಾಪ = ಹೊಂದಿದನು. ಅಥ = ಅನಂತರ ಕೃಷ್ಣಃ = ವೇದವ್ಯಾಸರು ಅಸ್ಯ = ಈ ದಾಸೀ ಪುತ್ರನಿಗೆ ನಾಮ=ಹೆಸರನ್ನು ಚಕ್ರೇ=ಮಾಡಿದರು. ತಥಾ=ಹಾಗೆಯೇ ಅಸ್ಯ=ಇವನಿಗೆ ಸರ್ವವಿತ್ವಂ=ಸರ್ವಜ್ಞತ್ವವನ್ನು ಅದಾತ್= ಕೊಟ್ಟರು. ॥ ೧೪೦ ॥

ಅವಃ- ಯಾವ ಹಸರಿನ್ನಿಟ್ಟರು ಎಂಬುದನ್ನು ನಿರ್ವಚನ ಪೂರ್ವಕವಾಗಿ ಹೇಳುತ್ತಾರೆ.

ವಿದ್ಯಾರತೇರ್ವಿದುರೋ ನಾಮ ಚಾಯಂ ಭವಿಷ್ಯತಿ ಜ್ಞಾನ ಬಲೋಪಪನ್ನಃ ॥
ಮಹಾಧನುರ್ಬಾಹು ಬಲಾಧಿಕಶ್ಚ ಸುನೀತಿಮಾನಿತ್ಯವದತ್ಸ ಕೃಷ್ಣಃ ॥ ೧೪೧ ॥

ಸ ಕೃಷ್ಣಃ= ಆ ವೇದವ್ಯಾಸರು ವಿದ್ಯಾರತೇಃ= ತತ್ವಜ್ಞಾನದಲ್ಲಿ ಸ್ವಭಾವದಿಂದಲೇ ಆಸಕ್ತನಾದ್ದರಿಂದ ವಿದುರಃ= ವಿದುರನೆಂದು ನಾಮ= ಪ್ರಸಿದ್ಧನಾದ ಅಯಂ= ಈ ದಾಸೀ ಪುತ್ರನು ಜ್ಞಾನಬಲೋಪನ್ನಃ= ಯಥಾರ್ಥ ಜ್ಞಾನದ ಆಧಿಕ್ಯದಿಂದ ಕೂಡಿದವನೂ ಮಹಾಧನಃ= ಶ್ರೇಷ್ಠ ಧನಸ್ಸುಳ್ಳವನೂ ಬಾಹುಬಲಾದಿಕಶ್ಚ =ಭುಜಗಳ ಬಲದಿಂದ ಅಧಿಕನೂ ಸುನೀತಿ ಮಾನ್ = ಉತ್ತಮ ನೀತಿಜ್ಞನೂ ಭವಿಷ್ಯತಿ=ಆಗುವನು ಇತಿ=ಎಂಬುದಾಗಿ ಅವದತ್=ಹೇಳಿದರು. ॥ ೧೪೧ ॥

ಜ್ಞಾತ್ವಾಸ್ಯ ಶೂದ್ರತ್ವಮಥಾಸ್ಯ ಮಾತಾಪುನಶ್ಚಕೃಷ್ಣಂ ಪ್ರಣತಾ ಯಯಾಚೇ ।
ಅಂಬಾಲಿಕಾಯಾಂ ಜನಯಾನ್ಯ ಮಿತ್ಯಥೋ ನೈಚ್ಛತ್ಸಕೃಷ್ಣೋsಭವದಪ್ಯದೃಶ್ಯಃ ॥ ೧೪೨ ॥

ಅಥ=ವಿದುರನು ಹುಟ್ಟಿದ ನಂತರ ಅಸ್ಯ=ಈ ವೇದವ್ಯಾಸರ ಮಾತಾ=ತಾಯಿಯಾದ ಸತ್ಯವತಿಯು ಅಸ್ಯ=ಈ ವಿದುರನಿಗೆ ಶೂದ್ರತ್ವಂ=ಶೂದ್ರತ್ವವನ್ನು ಜ್ಞಾತ್ವಾ=ತಿಳಿದೂ ಪುನಶ್ಚ=ಪುನಃ ಕೂಡ ಕೃಷ್ಣಂ=ವೇದವ್ಯಾಸರನ್ನು ಪ್ರಣತಾ ಸತೀ=ನಮಸ್ಕರಿಸಿದವಳಾಗಿ ಅಂಬಾಲಿಕಾಯಾಂ= ಅಂಬಾಲಿಕೆಯಲ್ಲಿ ಅನ್ಯಂ=ಇನ್ನೊಬ್ಬ ವಂಗನನ್ನು ಜನಯ= ಹುಟ್ಟಿಸು ಇತಿ= ಎಂಬುದಾಗಿ ಯಯಾಚೇ = ಬೇಡಿದಳು. ಅಥೋ = ಮೂರು ಮಕ್ಕಳು ಹುಟ್ಟಿದ ನಂತರ ಕೃಷ್ಣಃ = ವೇದವ್ಯಾಸರು ನೈಚ್ಛತ್ = ಮಕ್ಕಳನ್ನು ಹುಟ್ಟಿಸಲು ಇಚ್ಛಿಸಲಿಲ್ಲ. ಅದೃಶ್ಯಃ = ಕಣ್ಣಿಗೆ ಕಾಣದವರೂ ಅಭವತ್ = ಆದರು. ॥ ೧೪೨ ॥

ಯೋಗ್ಯಾನಿ ಕರ್ಮಾಣಿ ತತಸ್ತು ತೇಷಾಂ ಚಕಾರ ಭೀಷ್ಮೋ ಮುನಿಭಿರ್ಯಥಾವತ್ ।
ವಿದ್ಯಾಃ ಸಮಸ್ತಾ ಅದದಾಚ್ಚ ಕೃಷ್ಣಸ್ತೇಷಾಂ ಪಾಂಡೋರಸ್ತ್ರಶಸ್ತ್ರಾಣಿ ಭೀಷ್ಮಃ ॥ ೧೪೩ ॥

ತತಃ= ಅನಂತರ ಭೀಷ್ಮಃ= ಭೀಷ್ಮರು ಮುನಿಭಿಃ= ಋಷಿಗಳಿಂದ ಕೂಡಿಕೊಂಡು ತೇಷಾಂ=ಆ ಧೃತರಾಷ್ಟ್ರ ಪಾಂಡು ವಿದುರ ಈ ಮೂವರಿಗೆ ಯೋಗ್ಯಾನಿ= ಕ್ಷತ್ರ ಶೂದ್ರವರ್ಣದವರಿಗೆ ಯೋಗ್ಯಗಳಾದ ಕರ್ಮಾಣಿ= ಜಾತಕರ್ಮಾದಿ ಸಂಸ್ಕಾರ ಗಳನ್ನು ಯಥಾವತ್= ಶಾಸ್ತ್ರದಲ್ಲಿ ಹೇಳಿದ ಕ್ರಮದಿಂದ ಚಕಾರ= ಮಾಡಿದರು. ಕೃಷ್ಣಃ= ವೇದವ್ಯಾಸರು ತೇಷಾಂ= ಆ ಮೂವರಿಗೆ ಸಮಸ್ತಾಃ= ಎಲ್ಲಾ ವಿದ್ಯಾಃ= ವಿದ್ಯೆಗಳನ್ನು ಅದದಾತ್= ಉಪದೇಶಿಸಿದರು. ಭೀಷ್ಮಃ= ಭೀಷ್ಮರು ಪಾಂಡೋಃ= ಪಾಂಡು ರಾಜನಿಗೆ ಅಸ್ತ್ರ ಶಸ್ತ್ರಾಣಿ= ಅಸ್ತ್ರವಿದ್ಯೆಗಳನ್ನು ಶಸ್ತ್ರವಿದ್ಯೆಗಳನ್ನು ಅದದಾತ್= ಉಪದೇಶಿಸಿದರು. ॥ ೧೪೩ ॥

ತೇ ಸರ್ವವಿದ್ಯಾಪ್ರವರಾ ಬಭೂವುರ್ವಿಶೇಷತೋ ವಿದುರಃ ಸರ್ವವೇತ್ತಾ ।
ಪಾಂಡುಃ ಸಮಸ್ತಾಸ್ತ್ರವಿದೇಕವೀರೋಜಿಗಾಯ ಪೃಥ್ವೀಮಖಿಲಾಂ ಧನುರ್ಧರಃ ॥ ೧೪೪ ॥

ತೇ = ಆ ಮೂವರು ಸರ್ವವಿದ್ಯಾಪ್ರವರಾಃ = ಎಲ್ಲಾ ವಿದ್ಯೆಗಳಲ್ಲಿ ನಿಪುಣರು ಬಭೂವುಃ = ಆದರು ವಿದುರಃ = ವಿದುರನು ವಿಶೇಷತಃ = ವಿಶೇಷವಾಗಿ ಸರ್ವವೇತ್ತಾ = ಎಲ್ಲವನ್ನೂ ತಿಳಿದವನು ಬಭೂವ = ಆದನು. ಸಮಸ್ತಾಸ್ತ್ರವಿದೇಕ ವೀರಃ = ಎಲ್ಲಾ ಅಸ್ತ್ರಜ್ಞಾನಿಗಳಲ್ಲಿ ಅಪ್ರತಿಭಟನಾದ ಪಾಂಡುಃ = ಪಾಂಡುರಾಜನು ಧನುರ್ಧರಃಸನ್ = ಧನುಸ್ಸನ್ನು ಧರಿಸಿ ದವನಾಗಿ ಅಖಿಲಾಂ = ಎಲ್ಲಾ ಪೃಥ್ವಿಂ = ಭೂಮಿಯನ್ನು ಜಿಗಾಯ = ಗೆದ್ದನು. ॥ ೧೪೪ ॥

ಗವದ್ಗಣಾ ದಾಸ ತಥೈವ ಸೂತಾತ್ಸಮಸ್ತಗಂಧರ್ವಪತಿಃ ಸ ತುಂಬುರುಃ ।
___ಯು ಉದ್ವಹೋನಾಮ ಮರುತ್ತದಂಶಯುಕ್ತೋ ವಶೀ ಸಂಜಯ ನಾಮಧೇಯಃ ॥ ೧೪೫ ॥

ತಥೈವ= ಹಾಗೆಯೇ ಸಮಸ್ತಗಂಧರ್ವಪತಿಃ= ಎಲ್ಲಾ ಗಂಧರ್ವರಿಗೆ ಒಡೆಯನಾದ ಯಃ= ಯಾವ ತುಂಬುರುಃ= ತುಂಬುರು ಎಂಬ ಗಂಧರ್ವನೋ ಸಃ=ಆ ತುಂಬುರುವು ಉದ್ವಹೋನಾಮ=ಉದ್ವಹನೆಂದು ಪ್ರಸಿದ್ಧನಾದ ಯಃ=ಯಾವ ಮರುತ್=ವಾಯುವೋ ತದಂಶಯುಕ್ತಃ ಸನ್=ಅವನ ಅಂಶದಿಂದ ಕೂಡಿದವನಾಗಿ ವಶೀಸನ್=ಜಿತೇಂದ್ರಿಯನಾಗಿ ಆದ್ದರಿಂದ ಸಂಜಯ: ನಾಮಧೇಯಃಸನ್=ಸಂಜಯನೆಂದು ಹೆಸರುಳ್ಳವನಾಗಿ ಸೂತಾತ್=ವಿಚಿತ್ರವೀರ್ಯನ ಸಾರಥಿಯಾದ ಗವಲ್ಗಣಾತ್= ಗವಲ್ಗಣನ ದೆಸೆಯಿಂದ ಆಸ = ಹುಟ್ಟಿದನು. ॥ ೧೪೫ ॥

ವಿಚಿತ್ರವೀರ್ಯಸ್ಯ ಸಸೂತಪುತ್ರಃ ಸಖಾಚತೇಷಾಮಭವತ್ಪ್ರಿಯಶ್ಚ ।
ಸಪುಸ್ತವಿನ್ಮತಿವಾಸ್ಯಶಿಷ್ಯೋ ವಿಶೇಷತೋ ಧೃತರಾಷ್ಟ್ರಾನುವರ್ತೀ ॥ ೧೪೬ ॥

ಸಮಸ್ತವಿತ್=ಸರ್ವಜ್ಞನಾದ ಮತಿವಾನ್=ವಿವೇಕಿಯಾದ ವ್ಯಾಸಶಿಷ್ಯಃ=ವೇದವ್ಯಾಸರ ಶಿಷ್ಯನಾದ ವಿಚಿತ್ರವೀರ್ಯಸ್ಯ= ವಿಚಿತ್ರವೀರ್ಯನ ಸೂತಪುತ್ರಃ=ಸಾರಥಿಯಾದ ಗವಲ್ಗಣನ ಮಗನಾದ ಸಃ=ಆ ಸಂಜಯನು ತೇಷಾಂ=ಆಧೃತರಾಷ್ಟ್ರಾದಿ ಮೂವರಿಗೆ ಸಖಾ=ಗೆಳಯನೂ ಪ್ರಿಯಶ್ಚ=ಪ್ರೀತಿಪಾತ್ರನೂ ಕೂಡ ಅಭವತ್=ಆದನು ವಿಶೇಷತಃ=ವಿಶೇಷವಾಗಿ ಧೃತ ರಾಷ್ಟ್ರಾನುವರ್ತೀ=ಧೃತರಾಷ್ಟ್ರನನ್ನು ಅನುಸರಿಸಿ ಇರತಕ್ಕವನು ಅಭವತ್= ಆದನು. ॥ ೧೪೬ ॥

ಗಾಂಧಾರರಾಜಸ್ಯ ಸುತಾಮುವಾಹ ಗಾಂಧಾರಿನಾವ್ನೀಂ ಸುಬಲಸ್ಯ ರಾಜಾ ।
ಜ್ಯೇಷ್ಠೋಜ್ಯೇಷ್ಠಾಂ ಶಕುನೇರ್ದ್ವಾಪರಸ್ಯ ನಾಸ್ತಿಕ್ಯರೂಪಸ್ಯ ಕುಕರ್ಮಹೇತೋಃ ॥ ೧೪೭ ॥

ಜ್ಯೇಷ್ಠಃ=ಪಾಂಡುರಾಜನ ದೆಸೆಯಿಂದ ಜ್ಯೇಷ್ಠನಾದ ರಾಜಾ=ಧೃತರಾಷ್ಟ್ರನು ಗಾಂಧಾರರಾಜಸ್ಯ=ಗಾಂಧಾರ ದೇಶದ ರಾಜನಾದ ಸುಬಲಸ್ಯ=ಸುಬಲನೆಂಬ ರಾಜನ ಸುತಾಂ=ಮಗಳಾದ ನಾಸ್ತಿಕ್ಯರೂಪಸ್ಯ=ಪರಲೋಕವಿಲ್ಲವೆಂಬ ಬುದ್ಧಿಗೆ ಅಭಿ ಮಾನಿಯಾದ ಕುಕರ್ಮಹೇತೋಃ=ಕೆಟ್ಟ ಕೆಲಸಗಳಿಗೆ ಕಾರಣನಾದ ದ್ವಾಪರಸ್ಯ=ಪೂರ್ವದಲ್ಲಿ ದ್ವಾಪರನೆಂದು ಹೆಸರುಳ್ಳ ಮತ್ತು ದ್ವಾಪರಯುಗಕ್ಕೆ ಅಭಿಮಾನಿಯಾದ ಶಕುನೇಃ=ಶಕುನಿಯ ಜ್ಯೇಷ್ಠಾಂ=ಜ್ಯೇಷ್ಠ ಭಗಿನಿಯಾದ ಗಾಂಧಾರಿನಾವ್ನೀಂ= ಗಾಂಧಾರಿಯೆಂದು ಹೆಸರುಳ್ಳವಳನ್ನು ಉವಾಹ=ಮದುವೆಯಾದನು ॥ ೧೪೭ ॥

ಶೂರಸ್ಯ ಪುತ್ರೀ ಗುಣಶೀಲರೂಪಯುಕ್ತಾ ದತ್ತಾ ಸಖ್ಯುರೇವ ಸ್ವಪಿತ್ರಾ ।
ನಾಮ್ನಾಪೃಥಾ ಕುಂತಿ ಭೋಜಸ್ಯ ತೇನ ಕುಂತೀ ಭಾರ್ಯಾ ಪೂರ್ವದೇಹೇsಪಿ ಪಾಂಡೋಃ ॥೧೪೮॥

ಯಾ = ಯಾವಳು ಪಾಂಡೋಃ=ಪಾಂಡುರಾಜನಿಗೆ ಪೂರ್ವದೇಹೇsಪಿ = ಪರಾವಹನೆಂಬ ಮರುತ್ತಿನ ಮೂಲರೂಪ ನೇಹದಲ್ಲಿಯೂ ಕೂಡ ಕುಂತೀಭಾರ್ಯಾ=ಕುಂತಿಯೆಂದು ಹೆಸರುಳ್ಳ ಹೆಂಡತಿಯೋ ಸಾ=ಅವಳು ಶೂರಸ್ಯಪುತ್ರೀ=ಶೂರ ರಾಜನ ಮಗಳು ಗುಣಶೀಲರೂಪಯುಕ್ತಾ=ಗುಣಶೀಲರೂಪಗಳಿಂದ ಕೂಡಿದವಳು. ನಾಮ್ನಾ=ಹೆಸರಿನಿಂದ ಪೃಥಾ=ಪೃಥೆಯು ಸ್ವಪಿತ್ರಾ=ತನ್ನ ತಂದೆಯಾದ ಶೂರನಿಂದ ಸಖ್ಯುಃ=ಶೂರನಿಗೆ ಗೆಳೆಯನಾದ ಕುಂತಿಭೋಜಸ್ಯ=ಕುಂತಿಭೋಜನಿಗೆ ದತ್ತಾ= ಮಕ್ಕಳಿಲ್ಲದ ನೀನು ಇವಳನ್ನು ಮಗಳನ್ನಾಗಿ ರಕ್ಷಿಸು ಎಂದು ಕೊಡಲ್ಪಟ್ಟಳು. ತೇನ=ಕುಂತಿಭೋಜನಿಗೆ ಮಗಳನ್ನಾಗಿ ಕೊಟ್ಟದ್ದ ರಿಂದಲೂ ಕುಂತೀ=ಕುಂತಿಯೆಂದು ಹೆಸರುಳ್ಳವಳು. ॥ ೧೪೮ ॥

ಅವಃ– ಕುಂತಿ ಭೋಜನ ಸ್ವರೂಪವನ್ನು ಹೇಳುತ್ತಾರೆ.

ಕೂರ್ಮಶ್ಚ ನಾಮ್ನಾ ಮರುದೇವ ಕುಂತಿಭೋಜೋsಥೈನಾಂ ವರ್ಧಯಾಮಾಸ ಸಮ್ಯಕ್ ।
ತತ್ರಾಗಮಚ್ಛಂಕರಾಂಶೋsತಿಕೋಪೋ ದೂರ್ವಾಸಾಸ್ತಂ ಪ್ರಾಹ ಮಾಂ ವಾಸಯೇತಿ ॥ ೧೪೯ ॥

ಕುಂತಿಭೋಜಃ=ಕುಂತಿಭೋಜನು ಪೂರ್ವಂ=ಮೊದಲು ನಾಮ್ನಾ=ಹೆಸರಿನಿಂದ ಕೂರ್ಮಃ=ಕೂರ್ಮನೆಂಬ ಮರ್ತ್ಯ ದೇವ=ವಾಯುವೇ ಆಗಿದ್ದಾನೆ. = ಅಥ=ಅನಂತರ ಕುಂತಿಭೋಜನು ಏನಾಂ=ಈ ಕುಂತಿಯನ್ನು ಸಮ್ಯಕ್=ಪ್ರೀತಿಪೂರ್ವಕವಾಗಿ ವರ್ಧಯಾಮಾಸ=ಬೆಳೆಸಿದನು. ತತ್ರ = ಕುಂತಿಭೋಜನ ಮನೆಗೆ ಶಂಕರಾಂಶಃ=ರುದ್ರನ ಅವತಾರಭೂತರಾದ ಅತಿಕೋಪಃ=

ಅತ್ಯಂತ ಕೋಪಿಷ್ಠರಾದ ದೂರ್ವಾಸಾಃ=ದೂರ್ವಾಸ ಋಷಿಗಳು ಆಗಮತ್=ಬಂದರು. ಮಾಂ=ನನ್ನನ್ನು ವಾಸಯ=ವಾಸ ಮಾಡಿಸು. ಎಂದವೆ ಚಾತುರ್ಮಾಸ್ಯ ವ್ರತವನ್ನು ಮಾಡಿಸು ಇತಿ=ಎಂಬುದಾಗಿ ತಂ=ಆ ಕುಂತಿಭೋಜನನ್ನು ಕೃತಿ ಪ್ರಾಹ= ದೂರ್ವಾಸರು ಹೇಳಿದರು. ॥ ೧೪೯ ॥

ತವಾಹ ರಾಜಾಯದಿ ಕನ್ಯಕಾಯಾಃ ಕ್ಷಮಿಷ್ಯಸೇ ಶಕ್ತಿತಃ ಕರ್ಮಕರ್ತ್ರ್ಯಾಃ ।
ಸುಖಂ ವಸೇತ್ಯೋವಿತಿ ತೇನ ಚೋಕ್ತೇ ಶುಶ್ರೂಷಣಾಯಾದಿಶದಾಶು ಕುಂತೀಮ್ ॥ ೧೫೦ ॥

ಶಕ್ತಿತಃ=ತನ್ನ ಶಕ್ತಿಗೆ ಅನುಸಾರವಾಗಿ ಕರ್ಮ ಕರ್ತ್ರ್ಯಾಃ=ಸೇವಾರೂಪ ಕರ್ಮವನ್ನು ಮಾಡತಕ್ಕ ಕನ್ಯಕಾಯಾಃ= ಹುಡುಗಿಯಂ, ಕರ್ಮ=ಸೇವೆಯನ್ನು ಯದಿಕ್ಷಮಿಷ್ಯಸೇ=ಕೆಲವು ವೇಳೆ ಸ್ವಲ್ಪ ಸೇವೆಯು ನ್ಯೂನವಾದರೂ ಕ್ಷಮಿಸುವುದಾದರೆ ಸುಖಂ=ಸುಖವಾಗಿ ವಸ=ವಾಸ ಮಾಡು ಇತಿ=ಈ ರೀತಿಯಾಗಿ ತಂ=ಆ ದೂರ್ವಾಸರನ್ನು ರಾಜಾ=ಕುಂತಿಭೋಜನು ಆಹ= ಹೇಳಿದನಂ. ತೇನ=ಆ ದೂರ್ವಾಸರಿಂದ ಓಮಿತಿ=ಹಾಗೆಯೇ ಆಗಲಿ ಎಂದು ಉಕ್ತೇಷತಿ=ಹೇಳಲ್ಪಡುತ್ತಿರಲು ರಾಜಾ=ರಾಜನು ಕುಂತೀಂ=ಕುಂತಿಯನ್ನು ಆಶು=ಕೂಡಲೇ ಶುಶ್ರೂಷಣಾಯ=ದೂರ್ವಾಸರ ಸೇವೆ ಮಾಡುವುದಕ್ಕೋಸ್ಕರ ಅದಿಶತ್=ಆಜ್ಞಾಪಿಸಿದನಂ. ॥ ೧೫೦ ॥

ಚಕಾರ ಕರ್ಮಸಾ ಪೃಥಾ ಮುನೇಃ ಸುಕೋಪನಸ್ಯ ಹಿ ।
ಯಥಾ ನಶಕ್ಯತೇ ಪರೈಃ ಶರೀರವಾಙ್ಮನೋಽನುಗಾ ॥ ೧೫೧ ॥

ಶರೀರವಾಙ್ಮನೋನುಗಾ=ದೇಹ, ಮಾತು, ಚಿತ್ತ ಇವುಗಳಿಂದ ಮುನಿಗಳನ್ನು ಅನುಸರಿಸಿ ಕೊಂಡಿರುವ ಸಾಪೃಥಾ= ಆ ಕುಂತೀದೇವಿಯು ಪರೈಃ=ತನ್ನಿತರರಿಂದ ಯಥಾನಶಕ್ಯತೇ=ಹೇಗೆ ಮಾಡಲು ಸಾಧ್ಯವಾಗಲಾರದೋ ತಥಾ=ಹಾಗೆಯೇ ಸುಕೋಪನಸ್ಯ=ಅತ್ಯಂತ ಕೋಪಿಷ್ಠನಾದ ಮುನೇಃ=ದೂರ್ವಾಸ ಮುನಿಗಳ ಕರ್ಮ=ಸೇವಾರೂಪಕರ್ಮವನ್ನು ಚಕಾರ= ಮಾಡಿದಳು. ಹಿ=ಪ್ರಸಿದ್ಧ. ॥ ೧೫೧ ॥

ಸವತ್ಸರ ತ್ರಯೋದಶಂ ತಯಾ ಯಥಾವದರ್ಚಿತಃ ।
ಉಪಾದಿಶತ್ಪರಂ ಮನುಂ ಸಮಸ್ತದೇವವಶ್ಯದಮ್ ॥ ೧೫೨ ॥

ತಯಾ=ಆ ಕುಂತಿಯಿಂದ ವತ್ಸರತ್ರಯೋದಶಂ=ಹದಿಮೂರು ವರ್ಷಗಳ ಪರ್ಯಂತವಾಗಿ ಯಥಾವತ್=ಪ್ರಥಮ ದಿನವನ್ನಾರಂಭಿಸಿ ಕೊನೆಯದಿನದವರೆಗೂ ಒಂದೇ ರೀತಿಯಾಗಿ ಅರ್ಚಿತಃ= ಪೂಜಿಸಿಕೊಳ್ಳಲ್ಪಟ್ಟ ಸಃ=ಆ ದೂರ್ವಾಸರ ಸಮಸ್ತದೇವವಶ್ಯದಂ=ಎಲ್ಲಾ ದೇವತೆಗಳನ್ನು ವಶಮಾಡಿಕೊಳ್ಳುವ ಶಕ್ತಿಯನ್ನು ಕೊಡತಕ್ಕ ಪರಂ=ಉತ್ತಮವಾದ ಮನುಂ= ಮಂತ್ರವನ್ನು ಉಪಾದಿಶತ್=ಕುಂತಿಗೆ ಉಪದೇಶಿಸಿದರು. ॥ ೧೫೨ ॥

ಋತೌತು ಸಾಸಮಾಪ್ಲುತಾ ಪರೀಕ್ಷಣಾಯತನ್ಮನೋಃ ।
ಸಮಾಹ್ವಯದ್ದಿವಾಕರಂ ಸಚಾಜಗಾಮ ತತ್ಕ್ಷಣಾತ್ ॥ ೧೫೩ ॥

ಋತೌತು=ಋತುಕಾಲದಲ್ಲಾದರೂ ಸಮಾಪ್ಲುತಾ=ಸ್ನಾನ ಮಾಡುವಾಗ ಸಾ=ಆ ಕುಂತಿಯಂ ತನ್ಮನೋಃ= ದೂರ್ವಾಸದತ್ತವಾದ ಆ ಮಂತ್ರದ ಪರೀಕ್ಷಣಾಯಂ=ದೇವತೆಗಳನ್ನು ಕರೆದರೆ ಬರುತ್ತಾರೋ ಇಲ್ಲವೋ ಎಂಬ ಪರೀಕ್ಷೆಗಾ ದಿವಾಕರಂ=ಸೂರ್ಯನನ್ನು ಸಮಾಹ್ವಯತ್=ಭಕ್ತಿ ಪೂರ್ವಕವಾಗಿ ಮಂತ್ರದಿಂದ ಕರೆದಳಂ ಸಚ=ಆ ಸೂರ್ಯನಾದರಂ ತತ್ಕ್ಷಣಾತ್=ಕರೆದ ಕೂಡಲೇ ಆಜಗಾಮಂ= ಬಂದನು ॥ ೧೫೩ ॥

ತತೋಸ ಸಾ ವಿಸರ್ಜಿತುಂ ಶಶಾಕತಂ ವಿನಾರತಿಮ್ ।
ಸುವಾಕ್ಸ್ರಯತ್ನತೋಽಪಿ ತಾಮಥಾಸಸಾದ ಭಾಸ್ಕರಃ ॥ ೧೫೪ ॥

ತತಃ=ಸೂರ್ಯನಂ ಬಂದ ನಂತರ ಸಾ=ಆ ಕುಂತಿಯಂ ಸಂವಾಕ್ಯಯತ್ನತೋಪಿ=ನನ್ನಲ್ಲಿ ರವಿಸದೇ ಹೋಗಂ, ಮಂತ್ರದ ಪರೀಕ್ಷೆಗಾಗಿ ಕರದದ್ದು ಎಂಬ ಒಳ್ಳೆಯಂ ಮಾತಂ ಮತ್ತಂ ಪಾದಗಳಿಗೆ ನಮಸ್ಕಾರ ಮೊದಲಾದ ಪ್ರಯತ್ನಗಳಿಂದಲೂ ಕೂಡ ತಂ=ಆ ಸೂರ್ಯನನ್ನು. ರತಿಂ=ರಮಣನವನ್ನು ವಿನಾ = ಹೊರತು ವಿಸರ್ಜಿತಂ = ಬಂದ ಹಾಗೆ ಕಳುಹಿಸಲುಂ ನಶಶಾಕ=ಸಮರ್ಥಳಾಗಲಿಲ್ಲ. ಅಥ=ಅನಂತರ ಭಾಸ್ಕರಃ=ಸೂರ್ಯನಂ ತಾಂ=ಆ ಕುಂತಿಯನ್ನು ಅಸಸಾದ= ಕ್ರೀಡಿಸಿದನು. ॥ ೧೫೪ ॥

ಸ ತತ್ರ ಜಜ್ಞಿವಾನ್ ಸ್ವಯಂ ದ್ವಿತೀಯರೂಪಕೋವಿಭುಃ ।
ಸ ವರ್ಮದಿವ್ಯಕುಂಡಲೋ ಜ್ವಲನ್ನಿವಸ್ವತೇಜಸಾ ॥ ೧೫೫ ॥

ಸವರ್ಮದಿವ್ಯಕುಂಡಲಃ=ಕವಚವೂ ಅಲೌಕಿಕಗಳಾದ ಕರ್ಣಾಭರಣಗಳೂ ಇವುಗಳಿಂದ ಕೂಡಿದ ದ್ವಿತೀಯರೂಪಕಃ= ಸೂರ್ಯನ ಎರಡನೇ ಅವತಾರರೂಪನಾದ ವಿಭುಃ=ಸಮರ್ಥನಾದ ಸಃ=ಆ ಸೂರ್ಯನಂ ಸ್ವತೇಜಸಾ=ತನ್ನ ಕಾಂತಿಯಿಂದ ಜ್ವಲನ್ನಿವ = ಪ್ರಕಾಶಿಸುವವನಂತೆ ತತಃ=ಆ ಕುಂತಿಯಲ್ಲಿ ಸ್ವಯಂ = ತಾನೇ ಜಜ್ಞಿವಾನ್=ಹುಟ್ಟಿದನು. ॥ ೧೫೫ ॥

ಪುರಾ ಸ ವಾಲಿ ವಾರಣಪ್ರಭೂತದೋಷಕಾರಣಾತ್ ।
ಸಹಸ್ರವರ್ಮನಾಮಿನಾsಸುರೇಣ ವೇಷ್ಟಿತೋsಜನಿ ॥ ೧೫೬ ॥

ಪುರಾ=ತ್ರೇತಾಯುಗದಲ್ಲಿ ಸಃ=ಸುಗ್ರೀವನ ಸ್ವರೂಪನಾದ ಆ ಸೂರ್ಯನಂ ವಾಲಿವಾರಣಪ್ರಭೂತದೋಷ ಕಾರಣಾತ್=ವಾಲಿಯನ್ನು ಕೊಲ್ಲಿಸುವುದರಿಂದ ಉಂಟಾದ ಪಾಪದ ನಿಮಿತ್ತದಿಂದ ಸಹಸ್ರವರ್ಮನಾಮಿನಾ=ಸಹಸ್ರವರ್ಮ ನೆಂದು ಹೆಸರುಳ್ಳ ಅಸುರೇಣ=ದೈತ್ಯನಿಂದ ವೇಷ್ಟಿತಃಸನ್=ಆವಿಷ್ಟನಾದವನಾಗಿ ಅಜನಿ = ಹುಟ್ಟಿದನಂ. ॥ ೧೫೬ ॥

ಯಥಾಗ್ರಹೈರ್ವಿದೂಷ್ಯತೇ ಮತಿರ್ನೃಣಾಂ ತಥೈವಹಿ ।
ಅಭೂಚ್ಚ ದೈತ್ಯದೂಷಿತಾ ಮತಿರ್ದಿವಾಕರಾತ್ಮನಃ ॥ ೧೫೭ ॥

ತಥಾಪಿ ರಾಮ ಸೇವನಾದ್ಧರೇಶ್ಚ ಸನ್ನಿಧಾನಯುಕ್ ।
ಸುದರ್ಶನೀಯಕರ್ಣತಃ ಸಕರ್ಣನಾಮಕೋsಭವತ್ ॥ ೧೫೮ ॥

ಯಥಾ=ಹೇಗೆ ಗೃಹೈಃ=ಪಿಶಾಚಾದಿಗಳಿಂದ ನೃಣಾಂ=ಮನುಷ್ಯರ ಮತಿಃ= ಬುದ್ಧಿಯು ವಿದೂಷ್ಯತೇ= ದೂಷಿಸಲ್ಪ ಡುತ್ತದೋ ತಥೈವ= ಹಾಗೆಯೇ ದಿವಾಕರಾತ್ಮನಃ= ಸೂರ್ಯನ ಸ್ವರೂಪನಾದ ಕುಂತಿಯಂ ಮಗನ ಮತಿಃ= ಬುದ್ಧಿಯುಂ ದೈತ್ಯದೂಷಿತಾ= ಸಹಸವರ್ಮನಿಂದ ದೂಷಿತವಾದದ್ದು ಅಭೂತ್= ಆಯಿತು ತಥಾಪಿ= ಪಾಪನಿಮಿತ್ತದಿಂದ ಅಸುರಾವೇಂ ಷ್ಟಿತವಾದರೂ ರಾಮಸೇವನಾನ್= ಹಿಂದೆ ಮಾಡಿದ ರಘುರಾಮನ ಸೇವೆಯಿಂದ ಹರೇಃ= ಪರಮಾತ್ಮನ ಸನ್ನಿಧಾನ ಯುಕ್ ಸಾನ್ನಿಧ್ಯದಿಂದ ಕೂಡಿದವನೂ ಸುದರ್ಶನೀಯ ಕರ್ಣತಃ= ನೋಡಲು ಯೋಗ್ಯಗಳಾದ ಪ್ರಶಸ್ತ ಕಿವಿಗಳಿರುವುದರಿಂದ ಸಃ= ಆ ಕೌಂತೇಯನುಂ ಕರ್ಣನಾಮಕಃ= ಕರ್ಣನೆಂದು ಹೆಸರುಳ್ಳವನು ಅಭವತ್= ಆದನು. ॥ ೧೫೭ ॥ ೧೫೮ ॥

ಸ ರತ್ನಪೂರ್ಣಮಂಜುಷಾ ಗತೋ ವಿಸರ್ಜಿತೋಜಲೇ ।
ಜನಾಪವಾದ ಭೀತಿತಸ್ತಯಾ ಯಮುಸ್ನಸುದ್ಭುತಮ್ ॥ ೧೫೯ ॥

ನದೀಪ್ರವಾಹತೋಗತಂ ದದರ್ಶಸೂತ ನಂದನಃ ।
ತಮುಗ್ರಹೀತ್ಸರತ್ನಕಂ ಚಕಾರ ಪುತ್ರಕಮ್ ನಿಜಮ್ ॥ ೧೬೦ ॥

ತಯಾ = ಆ ಕುಂತಿಯಿಂದ ಜನಾಪವಾದಭೀತಿತಃ =ಕನ್ನಿಕೆಯಲ್ಲಿ ಹುಟ್ಟಿದವನೆಂಬ ಎಂಬ ಜನರ ನಿಂದೆಯ ಭಯ ದಿಂದ ಜಲೇ = ಅಶ್ವನದಿಯ ನೀರಿನಲ್ಲಿ ರತ್ನಪೂರ್ಣಮಂಜುಷಾಗತಃ = ರತ್ನಗಳಿಂದ ಪೂರ್ಣವಾದ ಪೆಟ್ಟಿಗೆಯಲ್ಲಿರತಕ್ಕ

ಸಃ = ಆ ಕುಮಾರನು ವಿಸರ್ಜಿತಃ = ಬಿಡಲ್ಪಟ್ಟನು. (ಅಶ್ವನದಿಯಿಂದ ಚರ್ಮಣ್ವತೀನದಿಗೂ ಚರ್ಮಣ್ವತಿಯಿಂದ ಯಮುನಾ ನದಿಗೆ ಬಂದನು.) ಯಮುಸ್ವಸುಃ = ಯಮಪುರಿಸಾನದಿಯ ದೆಸೆಯಿಂದ ದ್ರುತಂ = ಬೇಗನೇ ನದೀಪ್ರವಾಹತಃ = ಗಂಗಾ ಪ್ರವಾಹದಿಂದ ಗತಂ=ಚಂಪಾಪಟ್ಟಣವನ್ನು ಕುರಿತು ಬಂದಿರುವ ಕುಮಾರನನ್ನು ಸೂತಸನಂದನಃ=ಸೂತನ ಪುತ್ರನಾದ ಅಧಿರಥನು ದದರ್ಶ=ನೋಡಿದನು. ಸರತ್ನಕಂ=ರತ್ನಗಳಿಂದ ಕೂಡಿದ ತಂ=ಆ ಕುಮಾರನನ್ನು ಅಗ್ರಹೀತ್=ಸ್ವೀಕರಿಸಿದನು ನಿಜಂಪುತ್ರಕಂ=ತನ್ನ ಮಗನನ್ನಾಗಿ ಚಕಾರ=ಮಾಡಿದನು. ॥ ೧೫೯ ॥ ೧೬೦ ॥

ಸೂತೇನಾಧಿರಥೇನ ಲಾಲಿತತನುಸ್ತದ್ಭಾರ್ಯಯಾ ರಾಧಯಾ ಸಂವೃದ್ಧೋ ನಿಖಿಲಾಃ ಶ್ರುತೀರಧಿಜಗೌ ಶಾಸ್ತ್ರಾಣಿ ಸರ್ವಾಣಿ ಚ । ಬಾಲ್ಯಾದೇವ ಮಹಾಬಲೋ ನಿಜಗುಣೈಃ ಸಂಭಾಸಮಾನೋವಸನ್ನಾಮ್ನಾ ಸೌವಸುಷೇಣತಾ ಮಗಮುದಪ್ಯಾಸಿದ್ಧ್ಯಮಾ ತದ್ವಸು ॥ ೧೬೧ ॥

ಸೂತೇನ= ಸೂತನಾದ ಅಧಿರಥೇನ =ಅಧಿರಥನಿಂದ ಲಾಲಿತತನುಃ= ಕೊಂಡಾಡಲ್ಪಟ್ಟ ಶರೀರವುಳ್ಳ ತದ್ಭಾರ್ಯಯಾ=ಆ ಅಧಿರತನ ಹೆಂಡತಿಯಾದ ರಾಧಯಾ= ರಾಧೆಯಿಂದ ಸಂವೃದ್ಧಃ= ಬೆಳೆಸಲ್ಪಟ್ಟ ಬಾಲ್ಯಾದೇವ= ಬಾಲ್ಯವಸ್ಥೆಯಿಂದಲೇ ಮಹಾಬಲಃ= ಮಹತ್ತಾದ ಬಲವುಳ್ಳ ನಿಜಗುಣೈಃ= ತನ್ನ ಕಾರ್ಯ, ಔದಾರ್ಯ ಮೊದಲಾದ ಗುಣಗಳಿಂದ ಸಂಭಾಸ ಮಾನಃ=ಜೆನ್ನಾಗಿ ಶೋಭಿಸಿಕೊಂಡಿರುವ ಕರ್ಣನು ನಿಖಿಲಾಃ ಶ್ರುತೀಃ = ಎಲ್ಲಾ ವೇದಗಳನ್ನೂ ಸರ್ವಾಣಿ=ಎಲ್ಲಾ ಶಾಸ್ತ್ರಾಣಿ ಚ=ಶಾಸ್ತ್ರಗಳನ್ನೂ ಕೂಡ ಅಧಿಜಗೌ ಅಧ್ಯಯನ ಮಾಡಿದನು. ಹಿ=ಯಾವ ಕಾರಣದಿಂದ ತದ್ವಸು=ಆ ಪೆಟ್ಟಿಗೆಯಲ್ಲಿರುವ ರತ್ನಾದಿ ದ್ರವ್ಯವು ಅಮ್ಮಾ=ಕರ್ಣನ ಸಮೀಪವಲ್ಲಿ ಅಥವಾ ಒಟ್ಟಿಗೇನೆ ಆಸೀತ್=ಇರುತ್ತಿತ್ತೋ ತೇನ=ಆ ಕಾರಣದಿಂದ ಅಸೌ=ಈ ಕರ್ಣನು ನಾಮ್ನಾ= ಹೆಸರಿನಿಂದ ವಸುಷೇಣತಾಂ= ವಸುಷೇಣತ್ವವನ್ನು ಅಗಮತ್=ಹೊಂದಿದನು. (ವಸುನಾ= ದ್ರವ್ಯದಿಂದ ಷೇಣಃ= ಸಂಬದ್ಧನು ಈ ನಿರ್ವಚನದಿಂದ ವಸುಷೇಣನೆಂಬ ಹೆಸರುಳ್ಳವನಾದನು) ॥ ೧೬೧ ॥

ಅಥ ಕುಂತೀ ದತ್ತಾ ಸಾ ಪಾಂಡೋಃ ಸೋಪ್ಯೇತಯಾ ಚಿರಂ ರೇಮೇ ।
ಶೂರಾಚ್ಛೂದ್ರ್ಯಾಂಜಾತಾಂ ವಿದುರೋಽವಹದಾರುಣೇಂ ಗುಣಾಢ್ಯಾಂ ಸಃ ॥ ೧೬೨ ॥

ಅಥ=ಕರ್ಣನು ಹುಟ್ಟಿದ ನಂತರ ಸಾ ಕುಂತೀ=ಆ ಕುಂತಿಯು ಪಾಂಡೋಃ=ಪಾಂಡು ರಾಜನಿಗೆ ದತ್ತಾ=ಕೊಡಲ್ಪಟ್ಟಳು. ಸೋಪಿ=ಆ ಪಾಂಡುರಾಜನಾದರೂ ಏತಯಾ=ಈ ಕುಂತಿಯಿಂದ ಚಿರಂ = ಬಹುಕಾಲ ರೇಮೇ=ಕ್ರೀಡಿಸಿದನು. ಸಃ= ಆ ವಿದುರನು ಶೂರಾತ್=ಕುಂತಿಯ ತಂದೆಯಾದ ಶೂರನ ದೆಸೆಯಿಂದ ಶೂದ್ರ್ಯಾಂ=ಪಾಣಿಗ್ರಹಣ ಧರ್ಮದಿಂದ ಸ್ವೀಕೃತಳಾದ ಶೂದ್ರ ಸ್ತ್ರೀಯಲ್ಲಿ ಜಾತಾಂ = ಹುಟ್ಟಿದ ಗುಣಾಢ್ಯಾಂ = ಗುಣ ಸಂಪನ್ನಳಾದ ಆರುಣೇಂ = ಆರುಣಿ ಎಂಬಾಕೆಯನ್ನು ಅವಹತ್ = ಮದುವೆಯಾದನು. ॥ ೧೬೨ ॥

ಅಥ ಚತುರ್ಥಾಯನ ನಾಮಾ ಮದ್ರೇಶಃ ಶಕ್ರತುಲ್ಯ ಪುತ್ರಾರ್ಥೀ ।
ಕನ್ಯಾರತ್ನಂಚಾಪ್ತುಂ ಚಕ್ರೇಬ್ರಾಹ್ಮಂ ತಪೋವರಂ ಚಾಪ ॥ ೧೬೩ ॥

ಅಥ=ಅನಂತರ ಶಕ್ರ ತುಲ್ಯ ಪುತ್ರಾರ್ಥೀ= ಇಂದ್ರನಿಗೆ ಸದೃಶನಾದ ಪುತ್ರನನ್ನು ಅಪೇಕ್ಷಿಸತಕ್ಕ ಮದ್ರೇಶಃ= ಮದ್ರದೇಶಕ್ಕೆ ಸ್ವಾಮಿಯಾದ ಚತುರ್ಥಾಯನ ನಾಮಾ = ಚತುರ್ಥಾಯನನೆಂದು ಹೆಸರುಳ್ಳ ರಾಜನು ಕನ್ಯಾರತ್ನಂ ಚ = ಶ್ರೇಷ್ಠ ಕನ್ಯಾರತ್ನವನ್ನು ಕೂಡ ಆಪ್ತುಂ = ಹೊಂದಲು ಬ್ರಾಹ್ಮಂ = ಬ್ರಹ್ಮ ಸಂಬಂಧಿಯಾದ ತಪಃ = ತಪಸ್ಸನ್ನು ಚಕ್ರೇ = ಮಾಡಿದನು ವರಂ ಚ = ಅಪೇಕ್ಷಿತವಾದ ವರವನ್ನು ಕೂಡ ಆಪ = ಹೊಂದಿದನು. ॥ ೧೬೩ ॥

ಪ್ರಹ್ಲಾದಾವರಜೋಯಃ ಸಪ್ಲಾದೋನಾಮತೋಹರೇರ್ಭಕ್ತಃ ।
ಸೋಽಭೂದ್ಬ್ರಹ್ಮವರಾಂತೇ ವಾಯೋರಾವೇಶ ಯುಕ್ಸುತೋರಾಜ್ಞಃ ॥ ೧೬೪ ॥

ಯಃ= ಯಾವನು ಪ್ರಹ್ಲಾದಾವರಜಃ=ಪ್ರಹ್ಲಾದನ ತಮ್ಮನೋ ಹರೇಃ= ಪರಮಾತ್ಮನ ಭಕ್ತಃ= ಭಕ್ತನಾ ನಾಮತಃ= ಹೆಸರಿನಿಂದ ಸಹ್ಲಾದಃ = ಪೂರ್ವದಲ್ಲಿ ಸಹ್ಲಾದನೋ ಸಃ= ಅದನು ಬ್ರಹ್ಮನ ವರದ ಕೊನೆಯಂ

ಅಂದರೆ ಋತಾಯನನು ಬ್ರಹ್ಮನಿಂದ ವರವನ್ನು ಪಡೆದನಂತರ ವಾಯೋಃ=ವಾಯುದೇವರ ಆವೇಶಯಟಾಕ್=ಆವೇಶದಿಂದ ಕೂಡಿದವನಾಗಿ ರಾಜ್ಞಃ=ಋತಾಯನನಿಗೆ ಸುತಃ=ಮಗನಾಗಿ ಅಭೂತ್=ಹುಟ್ಟಿದನು. ॥ ೧೬೪ ॥

ಸಮೂರುತಾವೇಶವಶಾತ್ಪೃಥಿವ್ಯಾಂ ಬಲಾಧಿಕೋಽಭೂದ್ವರತಶ್ಚ ಧಾತುಃ ।
ಶಲ್ಯಶ್ಚ ನಾಮ್ನಾಖಿಲಶತ್ರುಶಲ್ಯೋ ಬಭೂವ ಕನ್ಯಾಸ್ಯ ಚ ಮಾದ್ರಿನಾಮ್ನೀ ॥ ೧೬೫ ॥

ಸಃ=ಆ ಮದ್ರರಾಜನು ಮಾರುತಾವೇಶವಶಾತ್=ವಾಯುದೇವರ ಆವೇಶದಿಂದಲೂ ಧಾತುಃ=ಬ್ರಹ್ಮನ ವರತಶ್ಚ=ವರದಿಂದಲೂ ಕೂಡ ಪೃಥಿವ್ಯಾಂ=ಭೂಮಿಯಲ್ಲಿ ಬಲಾಧಿಕಃ=ಅಧಿಕ ಬಲವುಳ್ಳವನು ಅಭೂತ್=ಆದನು. ಯತಃ=ಯಾವ ಕಾರಣದಿಂದ ಅಖಿಲಶತ್ರು ಶಲ್ಯಃ=ಎಲ್ಲಾ ಶತ್ರುಗಳಿಗೆ ಶಲ್ಯದಂತಿರುವನೋ ತತಃ=ಆದ್ದರಿಂದ ನಾಮ್ನಾ=ಹೆಸರಿನಿಂದ ಶಲ್ಯಃ=ಶಲ್ಯನು ಎಂದು ಬಭೂವ=ಆದನು. ಅಸ್ಯ=ಈ ಋತಾಯನನಿಗೆ ಮಾದ್ರಿನಾಮ್ನೀ=ಮಾದ್ರಿಯಿಂದು ಹೆಸರುಳ್ಳ ಕನ್ಯಾ ಚ=ಕನ್ಯೆಯು ಕೂಡ ಬಭೂವ=ಹುಟ್ಟಿದಳು. ॥ ೧೬೫ ॥

ಸಾಪಾಂಡುಭಾರ್ಯ್ಯೈವಚ ಪೂರ್ವಜನ್ಮನ್ಯ ಭೂತ್ಪುನಶ್ಚ ಪ್ರತಿಪಾದಿತಾಸ್ಮೈ ।
ಶಲ್ಯಶ್ಚ ರಾಜ್ಯಂ ಪಿತೃದತ್ತಮಂಜೋ ಜುಗೋಪ ಧರ್ಮೇಣ ಸಮಸ್ತ ಶಾಸ್ತ್ರವಿತ್ ॥ ೧೬೬ ॥

ಸಾ=ಆ ಕನ್ಯೆಯು ಪೂರ್ವಜನ್ಮನ್ಯಪಿ=ಹಿಂದಿನ ಜನ್ಮದಲ್ಲಿಯೂ ಕೂಡ ಪಾಂಡುಭಾರ್ಯ್ಯೈವ=ಪಾಂಡು ರಾಜನ ಮೂಲರೂಪನಾದ ಪರಾವಹಮರುತ್ತಿನ ಹೆಂಡತಿಯೇ ಪುನಶ್ಚ=ಅವತಾರದಲ್ಲಿಯೂ ಕೂಡ ಅಸ್ಮೈ=ಈ ಪಾಂಡುರಾಜನಿಗೇ ಪ್ರತಿಪಾದಿತಾ=ಮಾದ್ರಿಯ ಅಣ್ಣನಾದ ಶಲ್ಯನಿಂದ ಹೆಂಡತಿಯಾಗಿ ಕೊಡಲ್ಪಟ್ಟಳು. ಯತಃ=ಯಾವ ಕಾರಣದಿಂದ ಸಮಸ್ತ ಶಾಸ್ತ್ರವಿತ್=ಎಲ್ಲಾ ಶಾಸ್ತ್ರಗಳನ್ನು ತಿಳಿದವನೋ ಅತಃ=ಆದ್ದರಿಂದ ಪಿತೃದತ್ತಂ=ತಂದೆಯಿಂದ ಕೊಟಲ್ಪಟ್ಟ ರಾಜ್ಯಂ=ರಾಜ್ಯವನ್ನು ಅಂಜಃ=ಚೆನ್ನಾಗಿ ಧರ್ಮೇಣ=ಧರ್ಮದಿಂದ ಜುಗೋಪ=ರಕ್ಷಿಸಿದನು. ॥ ೧೬೬ ॥

ಅಥಾಂಗನಾರತ್ನಮವಾಪ್ಯ ತದ್ದ್ವಯಂ ಪಾಂಡುಸ್ತು ಭೋಗಾನ್ಬುಭುಜೇ ಯಥೇಷ್ಟತಃ ।
ಅಪೀಪಲದ್ಧರ್ಮಸಮಾಶ್ರಯೋ ಮಹೀಂ ಜ್ಯೇಷ್ಠಾಪಚಾಯೀ ವಿದುರೋಕ್ತಮಾರ್ಗತಃ ॥ ೧೬೭ ॥

ಅಥ=ಮಾದ್ರಿಯನ್ನು ಮದುವೆಯಾದ ನಂತರ ಪಾಂಡುಸ್ತು=ಪಾಂಡುರಾಜನಾದರೂ ತತ್=ಆ ಹಿಂದೆ ಹೇಳಿದ ದ್ವಯಂ=ಕುಂತೀ ಮಾದ್ರೀ ಎಂಬ ಎರಡು ಅಂಗನಾರತ್ನಂ=ಕನ್ಯಾರತ್ನವನ್ನು ಆ ವಾಪ್ಯ=ಹೊಂದಿ ಯಥೇಷ್ಟತಃ=ಇಚ್ಛಾನುಸಾರವಾಗಿ ಭೋಗಾನ್=ವಿಷಯಭೋಗಗಳನ್ನು ಬುಭುಜೇ=ಅನುಭವಿಸಿದನು. ಧರ್ಮಸಮಾಶ್ರಯಃ=ಧರ್ಮವನ್ನು ಆಶ್ರಯಿಸಿಕೊಂಡಿರುವ ಅಂದರೆ ಧರ್ಮವನ್ನು ಆಚರಿಸಿ ಕೊಂಡಿರುವ ಜ್ಯೇಷ್ಠಾಪಚಾಯಿ=ತಾನು ಸಂಪಾದಿಸಿದ ಹಣವನ್ನು ಅಣ್ಣನ ಮನೆಯಲ್ಲಿಯೇ ಇಟ್ಟು ಅಣ್ಣನಾದ ಧೃತರಾಷ್ಟ್ರನನ್ನು ಹಣವಂತನನ್ನಾಗಿ ಮಾಡತಕ್ಕ ಪಾಂಡುರಾಜನು ವಿದುರೋಕ್ತ ಮಾರ್ಗತಃ=ವಿದುರನಿಂದ ಹೇಳಲ್ಪಟ್ಟ ನೀತಿಮಾರ್ಗದಿಂದ ಮಹೀಂ=ಭೂಮಿಯನ್ನು ಅಪೀಪಲತ್=ಪಾಲಿಸಿದನು ॥ ೧೬೭ ॥

ಭೀಷ್ಮೋಹಿರಾಷ್ಟ್ರೇಧೃತರಾಷ್ಟ್ರಮೇವ ಸಂಸ್ಥಾಪ್ಯ ಪಾಂಡುಂಯುವರಾಜಮೇವ ।
ಚಕ್ರೇ ತಥಾಪ್ಯಂಧ ಇತಿಸ್ಮ ರಾಜ್ಯಂ ಚಕಾರ ನಾಸಾವಕರೋಚ್ಚ ಪಾಡುಃ ॥ ೧೬೮ ॥

ಭೀಷ್ಮಃ=ಭೀಷ್ಮಾಚಾರ್ಯರು ರಾಷ್ಟ್ರೇ=ರಾಜ್ಯದಲ್ಲಿ ಧೃತರಾಷ್ಟ್ರಮೇವ=ಧೃತರಾಷ್ಟ್ರನನ್ನೇ ಸಂಸ್ಥಾಪ್ಯ=ರಾಜ್ಯನನ್ನಾಗಿ ಸ್ಥಾಪಿಸಿ ಪಾಂಡುಂ=ಪಾಂಡುವನ್ನು ಯುವರಾಜಮೇವ=ಯುವರಾಜನನ್ನಾಗಿಯೇ ಚಕ್ರೇ=ಮಾಡಿದನು. ತಥಾಪಿ=ಹಾಗಾದರೂ ಅಸೌ=ಈ ಧೃತರಾಷ್ಟ್ರನು ಅಂಧಃ ಇತಿ=ನಾನು ಕುರುಡನು ಎಂಬ ಬುದ್ಧಿಯಿಂದ ರಾಜ್ಯಂ=ರಾಜ್ಯವನ್ನು ಯತಃ=ಯಾವ ಕಾರಣದಿಂದ ನ ಚಕಾರ=ರಕ್ಷಿಸಲಿಲ್ಲವೋ ತತಃ=ಆ ಕಾರಣದಿಂದ ಪಾಂಡುರಾಜನು ಅಕರೋತ್=ರಾಜ್ಯಪರಿಪಾಲನೆ ಮಾಡಿದನು. ॥ ೧೬೮ ॥

ಭೀಷ್ಮಾಂಬಿಕೇಯೋಕ್ತಿಪರಃ ಸದೈವ ಪಾಂಡುಃ ಶಶಾಸಾವನಿಮೇಕವೀರಃ ।
ಅಥಾಂಬಿಕೆಯೋ ಬಹುಭಿಶ್ಚ ಯಜ್ಞೈರೀಜೇ ಸ ಪಾಂಡುಶ್ಚ ಮಹಾಧನೋಫೈಃ ॥ ೧೬೯ ॥

ಪಾಂಡುಃ=ಪಾಂಡುರಾಜನು ಏಕವೀರಃ=ಪ್ರತಿಭಟನಿಲ್ಲದಪನಾದರೂ ಸದೈವ=ಯಾವಾಗಲೂ ಭೀಷ್ಮಾಂಬಿಕೇಯೋ
ಕ್ತಿಪರಃ=ಭೀಷ್ಮಾಚಾರ್ಯರು ಧೃತರಾಷ್ಟ್ರನು ಇವರ ಆಜ್ಞಾರೂಪವಾದ ವಚನದಲ್ಲಿಯೇ ತಾತ್ಪರ್ಯವುಳ್ಳವನಾಗಿ ಅವನಿಂ=
ಭೂಮಿಯನ್ನು ಶಸಾಸ=ಆಳಿದನು. ಅಥ=ಅನಂತರ ಆಂಬಿಕೇಯಃ = ಅಂಬಿಕಾಪುತ್ರನಾದ ಧೃತರಾಷ್ಟ್ರನು ಸ ಪಾಂಡುಶ್ಚ=ಆ
ಪಾಂಡುರಾಜನೂ ಕೂಡ ಮಹಾಧನೌಘೈಃ=ರತ್ನಾದ್ಯುತ್ತಮ ಧನಗಳ ಸಮೂಹಗಳುಳ್ಳ ಬಹುಭಿಃ ಯಜ್ಞೈಃ = ಬಹಳ ಯಾಗ
ಗಳಿಂದ ಈಜೇಃ=ಪರಮಾತ್ಮನನ್ನು ಪೂಜಿಸಿದನಂ. ॥ ೧೭ ॥

ನೈಷಾ ವಿರೋಧೇ ಕುರುಪಾಂಡವಾನಾಂತಿಷ್ಠೇದಿತಿ ವ್ಯಾಸ ಉದೀರ್ಣಸದ್ಗುಣಃ ।
ಸ್ವಮಾತರಂ ಸ್ವಾಶ್ರಮಮೇವ ನಿನ್ಯೇ ಸುಷ್ಠೇಚ ತಸ್ಯಾ ಯಯತುಃ ಸ್ಮತಾಮನು ॥ ೧೭೦ ॥

ಉದೀರ್ಣಸದ್ಗುಣಃ=ಉತ್ಕೃಷ್ಟಗಳಾದ ನಿರ್ದುಷ್ಟಜ್ಞಾನಾದಿಗುಣಗಳುಳ್ಳ ವ್ಯಾಸಃ=ವೇದವ್ಯಾಸರು ಕುರುಪಾಂಡ
ವಾನಾಂ=ಕೌರವರಿಗೂ ಪಾಂಡವರಿಗೂ ವಿರೋಧೇಸತಿ=ಜಗಳವು ಉಂಟಾಗುತ್ತಿರಲು ಏಷಾ=ಈ ಸತ್ಯವತಿಯು ನತಿಷ್ಠೇತ್=
ನಾಗಪುರದಲ್ಲಿ ಇರಬಾರದು ಇತಿ = ಈ ಅಭಿಪ್ರಾಯದಿಂದ ಸ್ವಮಾಂತರಂ=ತನ್ನ ತಾಯಿಯಾದ ಸತ್ಯವತಿಯನ್ನು ಸ್ವಾಶ್ರಮ
ಮೇವ ತನ್ನ ಬದರಿಕಾಶ್ರಮವನ್ನೇ ನಿನ್ಯೇ=ಕರೆದುಕೊಂಡು ಹೋದರು. ತಸ್ಯಾಃ=ಆ ಸತ್ಯವತಿಯ ಸುಷ್ಠೇಚ=ಸೊಸೆಯರಾದ
ಅಂಬಿಕಾಂಬಾಲಿಕೆಯರೂ ಕೂಡ ತಾಮನು=ಆ ಸತ್ಯವತಿಯನ್ನು ಅನುಸರಿಸಿ ಯಯತುಃ=ಬದರಿಕಾಶ್ರಮಕ್ಕೆ
ಹೋದರು. ॥ ೧೭೦ ॥

ಸುತೋಕ್ತಮಾರ್ಗೇಣ ವಿಚಿಂತ್ಯ ತಂ ಹರಿಂ ಸುತಾತ್ಮನಾ ಬ್ರಹ್ಮತಯಾಚ ಸಾಯಯೌ ॥
ಪರಂಪದಂ ವೈಷ್ಣವಮೇವ ಕೃಷ್ಣಪ್ರಸಾದತಃ ಸ್ವರ್ಯಯತುಃ ಸುಷ್ಠೇಚ ॥ ೧೭೧ ॥

ಸಾ=ಆ ಸತ್ಯವತಿಯು ಸುತೋಕ್ತ ಮಾರ್ಗೇಣ=ಮಗನಾದ ವೇದವ್ಯಾಸರಿಂದ ಹೇಳಲ್ಪಟ್ಟ ರೀತಿಯಿಂದ ತಂ
ಹರಿಂ=ಆ ವೇದವ್ಯಾಸರನ್ನು ಸುತಾತ್ಮನಾ=ಪುತ್ರನೆಂದೂ ಬ್ರಹ್ಮತಯಾಚ=ಪರಬ್ರಹ್ಮನೆಂದೂ ವಿಚಿಂತ್ಯ=ಧ್ಯಾನ ಮಾಡಿ ಕೃಷ್ಣ
ಪ್ರಸಾದತಃ=ವೇದವ್ಯಾಸರ ಅನುಗ್ರಹದಿಂದ ಪರಂ=ಉತ್ತಮವಾದ ವೈಷ್ಣವಂ=ವಿಷ್ಣುಸಂಬಂಧಿಯಾದ ಪದಂ=ವೈಕುಂಠವನ್ನು
ಯಯೌ=ಹೋದಳು ಸುಷ್ಠೇ ಚ = ಸೊಸೆಯಂದಿರಾದ ಅಂಬಿಕಾಂಬಾಲಿಕೆಯರೂ ಕೂಡ ಸ್ವಃ=ಸ್ವರ್ಗವನ್ನು ಯಯತುಃ=ಹೋದ
ವ್ಯಾಸರ ಅನುಗ್ರಹದಿಂದ ಹೊಂದಿದರಂ ॥ ೧೭೧ ॥

ಮಾತಾಚ ಸಾ ವಿದುರಸ್ಯಾಪಲೋಕಂವೈರಿಂಚಮನ್ವೇವ ಗತಾಂಬಿಕಾಂ ಸತೀ ।
ವ್ಯಾಸಪ್ರಸಾದಾತ್ಸುತ ಸದ್ಗುಣೈಶ್ಚ ಕಾಲೇನ ಮುಕ್ತಿಂಚ ಜಗಾಮಸನ್ಮತಿಃ ॥ ೧೭೨ ॥

ಯಾ=ಯಾವ ಸತೀ=ನಿರ್ದುಷ್ಟಳಾದ ಅಂಬಿಕೆಯ ಸೇವಕಿಯು ಅಂಬಿಕಾಂ=ತನ್ನ ಸ್ವಾಮಿನಿಯಾದ ಅಂಬಿಕೆಯನ್ನು
ಅನ್ವೇವ=ಅನುಸರಿಸಿಯೇ ಗತಾ=ನಾಗಪುರದಿಂದ ಬದರಿಕಾಶ್ರಮವನ್ನು ಕುರಿತು ಹೋದಳೋ ಸಾ=ಆದಾವ ವಿದುರಸ್ಯ
ವಿದುರನ, ಮಾತಾ = ತಾಯಿಯು ವ್ಯಾಸಪ್ರಸಾದಾತ್=ರಮಣ ಕಾಲದಲ್ಲಿ ಭಕ್ತಿಯನ್ನು ಮಾಡುವುದರಿಂದುಂಟಾದ ವ್ಯಾಸ
ಅನುಗ್ರಹದಿಂದ ಸುತಸದ್ಗುಣೈಶ್ಚ = ಯಮ ಸ್ವರೂಪನಾದ ವಿದುರನ ಉತ್ತಮ ಭಕ್ತ್ಯಾದಿ ಗುಣಗಳಿಂದಲೂ ವೈರಿಂಚಂ
ಬ್ರಹ್ಮ ಸಂಬಂಧಿಯಾದ ಲೋಕಂ=ಸತ್ಯ ಲೋಕವನ್ನು ಆಪ=ಹೊಂದಿದಳು. ಸನ್ಮತಿಃ=ನಿರ್ದುಷ್ಟವಾದ ಹರಿಯಲ್ಲಿ ಮನಸ್ಸು
ವಿದುರನ ತಾಯಿಯು ಕಾಲೇನ=ಯೋಗ್ಯತಾನುಸಾರವಾಗಿ ಸಾಧನಪೂರ್ತ್ಯನಂತರ ಮುಕ್ತಿಂ ಚ=ಮೋಕ್ಷವನ್ನು ಕೂ
ಜಗಾಮ=ಹೊಂದಿದಳು. ॥ ೧೭೨ ॥

ಅಂಬಾಲಿಕಾಪಿ ಕ್ರಮಯೋಗತೋsಗಾತ್ಪರಾಂಗತಿಂ ನೈವ ತತಾಂಬಿಕಾಯಯೌ ।
ಯಥಾ ಯಥಾ ವಿಷ್ಣುಪರಶ್ಚಿದಾತ್ಮಾ ತಥಾ ತಥಾಹ್ಯಸ್ಯಗತಿಃ ಪರತ್ರ ॥ ೧೭೩ ॥

ಅಂಬಾಲಿಕಾಪಿ=ಅಂಬಾಲಿಕೆಯಂಊ ಕೂಡ ಕ್ರಮಯೋಗತಃ=ಕಾಲಕ್ರಮದಿಂದ ಸಂಪಾದಿಸಲ್ಪಟ್ಟ ಮೋಕ್ಷೋಪಾ
ದಿಂದ ಪರಾಂ=ಉತ್ತಮವಾದ ಗತಿಂ=ವೈಕುಂಠ ಸ್ಥಾನವನ್ನು ಅಗಾತ್=ಹೊಂದಿದಳು. ಅಂಬಿಕಾ=ಅಂಬಿಕೆಯು ಎರಡನೇ

ತಾನು ವ್ಯಾಸರನ್ನು ಹೊಂದದೆ ದಾಸಿಯನ್ನು ಕಳುಹಿಸಿದ ಅಪರಾಧದಿಂದ ತಥಾ= ಅತ್ತೆಯಂತೆಯೂ ತಂಗಿಯಾದ ಅಂಬಾಲಿಕೆಯಂತೆಯೂ ದಾಸಿಯಂತೆಯೂ ಪರಾಂಗತಿಂ=ಉತ್ತಮವಾದ ವೈಕುಂಠ ಸ್ಥಾನವನ್ನು ನೈವಯಂಯೌ=ಹೊಂದಲಿಲ್ಲ. ಚಿದಾತ್ಮಾ= ಜ್ಞಾನಸ್ವರೂಪನಾದ ಜೀವನು ಯಥಾಯಥಾ= ಹೇಗೆ ಹೇಗೆ ತನ್ನ ಸ್ವರೂಪ ಯೋಗ್ಯತಾನುಸಾರದಿಂದ ವಿಷ್ಣು ಪರಃ= ವರಮಾತ್ಮನಲ್ಲಿ ಭಕ್ತಿ ಉಳ್ಳವನೋ ತಥಾ ತಥಾ= ಹಾಗೆಹಾಗೆಯೇ ಅಂದರೆ ತಮ್ಮ ತಮ್ಮ ಯೋಗ್ಯತಾನುಸಾರವಾದ ಭಕ್ತಿಯಿಂದ ಅಸ್ಯ= ಈ ಜೀವನಿಗೆ ಪರತ್ರ= ಪರಲೋಕದಲ್ಲಿ ಗತಿಃ =ಆನಂದಪ್ರಾಪ್ತಿಯು ಭವತಿ= ಆಗುತ್ತದೆ ॥ ೧೭೩ ॥

ಪಾಂಡುಸ್ತತೋ ರಾಜ್ಯಭರಂ ವಿಧಾಯ ಜ್ಯೇಷ್ಠೇನುಜೇಚ್ಛೈವ ವನಂಜಗಾಮ ।
ಪತ್ನೀದ್ವಯೇನಾನುಗತೋ ಬದರ್ಯಾಮುವಾಸ ನಾರಾಯಣ ಪಾಲಿತಾಯಾಮ್ ॥ ೧೭೪ ॥

ತತಃ = ಸತ್ಯವತ್ಯಾದಿಗಳಿಗೆ ವೈಕುಂಠ ಪ್ರಾಪ್ತ್ಯನಂತರ ಪಾಂಡುಃ = ಪಾಂಡುರಾಜನು ರಾಜ್ಯಭರಂ = ರಾಜ್ಯಭಾರವನ್ನು ಜ್ಯೇಷ್ಠೇ = ಅಣ್ಣನಾದ ಧೃತರಾಷ್ಟ್ರನಲ್ಲಿಯೂ ಅನುಜೇಚ = ತಮ್ಮನಾದ ವಿದುರನಲ್ಲಿಯೂ ಕೂಡ ವಿಧಾಯ= ಇಟ್ಟು ಪತ್ನೀದ್ವಯೇನ = ಕುಂತೀ ಮಾದ್ರಿ ಎಂಬ ಇಬ್ಬರು ಹೆಂಡಂದಿರಿಂದ ಅನುಗತ್ಃಸನ್ = ಕೂಡಿದವನಾಗಿ ವನಂ = ಅರಣ್ಯವನ್ನು ಕುರಿತು ಜಗಾಮ = ಹೋದನು. ನಾರಾಯಣ ಪಾಲಿತಾಯಾಂ = ನಾರಾಯಣ ದೇವರಿಂದ ರಕ್ಷಿಸಲ್ಪಟ್ಟ ಬದರ್ಯಾಂ = ಬದರಿಕಾಶ್ರಮದಲ್ಲಿ ಉವಾಸ = ವಾಸಮಾಡಿದನು. ॥ ೧೭೪ ॥

ಗೃಹಾಶ್ರಮೇಣೈವವನೇ ನಿವಾಸಂ ಕುರ್ವನ್ಸಭೋಗಾನ್ಬುಭುಜೇ ತಪಶ್ಚ ।
ಚಕ್ರೇಮುನೀಂದ್ರೈಃಸಹಿತೋ ಜಗತ್ಪತಿಂ ರಮಾಪತಿಂ ಭಕ್ತಿಯುತೋsಭಿಪೂಜಯನ್ ॥ ೧೭೫ ॥

ಗೃಹಾಶ್ರಣೇಮೇವ= ಗೃಹಾಶ್ರಮದಿಂದಲೇ ವನೇ= ಕಾಡಿನಲ್ಲಿ ನಿವಾಸಂ= ಆ ವಾಸವನ್ನು ಕುರ್ವನ್= ಮಾಡತಕ್ಕ ಸಃ= ಆ ಪಾಂಡುವು ಭೋಗಾನ್= ವಿಷಯಭೋಗಗಳನ್ನು ಬುಭುಜೇ = ಅನುಭವಿಸಿಕೊಂಡಿದ್ದನು. ಮುನೀಂದ್ರೈಃ = ಋಷಿಶ್ರೇಷ್ಠರಿಂದ ಸಹಿತಃ = ಕೂಡಿಕೊಂಡಿರುವ ಪಾಂಡುರಾಜನು ಜಗತ್ಪತಿಂ= ಲೋಕಕ್ಕೆ ಸ್ವಾಮಿಯಾದ ರಮಾಪತಿಂ = ಲಕ್ಷ್ಮೀಪತಿಯಾದ ನಾರಾಯಣನನ್ನು ಭಕ್ತಿಯುತಃಸನ್ = ಭಕ್ತಿಯಿಂದ ಕೂಡಿದವನಾಗಿ ಅಭಿಪೂಜಯನ್ = ಪೂಜಿಸುತ್ತಾ ತಪಃ= ತಪಸ್ಸನ್ನು ಚಕ್ರೇ= ಮಾಡಿದನು. ॥ ೧೭೫ ॥

ಸಕಾಮತೋ ಹರಿಣತ್ವಂ ಪ್ರಪನ್ನಂ ದೈವಾದೃಷಿಂಗ್ರಾಮ್ಯಕರ್ಮಾನುಷಕ್ತಮ್ ।
ವಿದ್ಧ್ವಾಶಾಪಂಪ್ರಾಪ ತಸ್ಮಾತ್ಸ್ತ್ರೀಯಾಯುಕ್ತಶ್ಚರಿಷ್ಯಸೀತ್ಯೇವ ಬಭೂವಚಾರ್ತಃ ॥ ೧೭೬ ॥

ಸಃ=ಆ ಪಾಂಡುರಾಜನು ಕಾಮತಃ=ಆಶಾದಿಗಳಿಲ್ಲದೆ ತನ್ನ ಇಚ್ಛೆಯಿಂದಲೇ ಹರಿಣತ್ವಂ=ಮೃಗರೂಪದಿಂದ ಸದಾ ಕ್ರೀಡಿಸಿಕೊಂಡಿರಲು ನಾಚಿಕೆಯಿಂದ ತನ್ನ ಹೆಂಡತಿಯಿಂದ ಕೂಡಿಕೊಂಡು ಬೆಂಕಿಯ ರೂಪವನ್ನು ಪ್ರಪನ್ನಂ=ಹೊಂದಿದ ದೈವಾತ್=ಹರೀಚ್ಛೆಯಿಂದಲೇ ಗ್ರಾಮ್ಯಕರ್ಮಾನುಷಕ್ತಃ=ರತಿರೂಪವಾದ ಗ್ರಾಮ್ಯಕರ್ಮದಲ್ಲಿ ಆಸಕ್ತನಾದ ಋಷಿಂ=ಕಿಂದಮ ಋಷಿಯನ್ನು ದೈವಾತ್=ಹರೀಚ್ಛೆಯಿಂದಲೇ ವಿದ್ಧ್ವಾ=ಬಾಣನಿಂದ ಹೊಡೆದು ತಸ್ಮಾತ್=ಆ ಕಿಂದಮ ಋಷಿಯಿಂದ ಸ್ತ್ರಿಯಾಯುಕ್ತಏವ=ನಿನ್ನ ಹೆಂಡತಿಯಿಂದ ರತಿಯಲ್ಲಿ ಕೂಡಿಕೊಂಡಿರುವವನಾಗಿರುವಾಗ ಮರಿಷ್ಯಸಿ=ಮರಣವನ್ನು ಹೊಂದುವಿಇತಿ=ಎಂಬುದಾಗಿ ಶಾಪಂ=ಶಾಪವನ್ನು ಪ್ರಾಪ=ಹೊಂದಿದನು.ಸಃ=ಆ ಪಾಂಡುವು ಆರ್ತಃ=ದುಃಖಿತನಂ ಬಭೂವ=ಆದನು. ॥ ೧೭೬ ॥

ನ್ಯಸಿಷ್ಣುರುಕ್ತಃ ಪೃಥಯಾ ಸ ನೇತಿ ಪ್ರಣಾಮಪೂರ್ವಂ ನ್ಯವಸತ್ತಥೈವ ।
ತಾಭ್ಯಾಂ ಸಮೇತಃ ಶತಶೃಂಗಪರ್ವತೇ ನಾರಾಯಣಸ್ಯಾಶ್ರಮ ಮಧ್ಯಗೇಪುರಃ ॥ ೧೭೭ ॥

ನ್ಯಸಿಷ್ಣುಃ = ಸನ್ಯಾಸವನ್ನು ಸ್ವೀಕರಿಸಲಂ ಇಚ್ಛಿಸುವ ಸಃ=ಆ ಪಾಂಡುವು ಪೃಥಯಾ=ಕುಂತಿಯಿಂದ ಪ್ರಣಾಮಂ ಪೂರ್ವಂ=ನಮಸ್ಕಾರ ಪೂರ್ವಕವಾಗಿ ನೇತಿ=ಸನ್ಯಾಸ ಸ್ವೀಕಾರ ಮಾಡಬಾರದೆಂದು ಉಕ್ತಃಸನ್=ಪ್ರಾರ್ಥಿಸಿಕೊಳ್ಳಲ್ಪಟ್ಟವನಾಗಿ ತಥೈವ=ಹಾಗೆಯೇ ಗ್ರಹಸ್ಥ ಧರ್ಮದಿಂದಲೇ ತಾಭ್ಯಾಂ=ಕುಂತೀ ಮಾದ್ರೀ ಎಂಬ ಇಬ್ಬರಿಂದ ಸಮೇತಃ ಸನ್=

ಕೂಡಿದವನಾಗಿ ಪುರಃ=ದಕ್ಷಿಣದಿಂದ ಬದರಿಕಾಶ್ರಮ ಯಾತ್ರೆ ಮಾಡುವಾಗ ಉತ್ತರದಲ್ಲಿರುವ ನಾರಾಯಣಾಶ್ರಮವುಳ್ಳ ಶತಶೃಂಗಪರ್ವತೇ=ಶತಶೃಂಗ ಪರ್ವತದಲ್ಲಿ ನ್ಯವಸತ್=ವಾಸ ಮಾಡಿದನು. ॥ ೧೭೭ ॥

ತಪೋನಿತಾಂತಂ ಸ ಚಕಾರ ತಾಭ್ಯಾಂ ಸಮನ್ವಿತಃ ಕೃಷ್ಣಪದಾಂಬುಜಾಶ್ರಯಃ ।
ತತ್ಸಂಗಪೂತದ್ಯುಸರಿದ್ವರಾಂಭಃ ಸದಾವಗಾಹಾತಿ ಪವಿತ್ರಿತಾಂಗಃ ॥ ೧೭೮ ॥

ತತ್ಸಂಗಪೂತದ್ಯುಸರಿದ್ವರಾಂಭಃ ಸದಾವಗಾಹಾತಿಪವಿತ್ರಿತಾಂಗಃ=ತ್ರಿವಿಕ್ರಮ ರೂಪಿಯಾದ ಪರಮಾತ್ಮನ ಉಗುರಿನ ಸಂಬಂಧದಿಂದ ಪವಿತ್ರವಾದ ದೇವ ನದಿಯಾದ ಗಂಗೆಯ ಜಲದಲ್ಲಿ ಯಾವಾಗಲೂ ಅವಗಾಹನ ಸ್ನಾನದಿಂದ ಅತ್ಯಂತ ಪವಿತ್ರವಾಗಿ ಮಾಡಲ್ಪಟ್ಟ ಅವಯವವುಳ್ಳ, ಕೃಷ್ಣಪದಾಂಬುಜಾಶ್ರಯಃ=ಶ್ರೀ ಕೃಷ್ಣನ ಪಾದ ಕಮಲಗಳನ್ನು ಆಶ್ರಯಿಸಿಕೊಂಡಿರುವ ಸಃ=ಆ ಪಾಂಡುರಾಜನು ತಾಭ್ಯಾಂ=ಆ ತನ್ನ ಇಬ್ಬರು ಹೆಂಡಂದಿರಿಂದ ಸಮನ್ವಿತಃಸನ್=ಕೂಡಿದವನಾಗಿ ನಿತಾಂತಂ=ಇನ್ನೊಬ್ಬರಿಂದ ಮಾಡಲಶಕ್ಯವಾದ ತಪಃ = ತಪಸ್ಸನ್ನು ಚಕಾರ = ಮಾಡಿದನು. ॥ ೯೭೮ ॥

ಅವಃ- ಶ್ರೀ ಕೃಷ್ಣನ ಚರಿತ್ರೆಯನ್ನು ಹೇಳುವವರಾಗಿ ಅದಕ್ಕೆ ಉಪಯುಕ್ತವಾದ ಪ್ರಮೇಯವನ್ನು ಹೇಳಂತ್ತಾರೆ.

ಏತಸ್ಮಿನ್ನೇವಕಾಲೇ ಕಮಲಭಶಿವಾಗ್ರೇಸರಾಃ ಶ್ರಕಪೂರ್ವಾ ।
ಭೂವ್ಯಾ ಪಾಪಾತ್ಮ ದೈತ್ಯೈರ್ಭುವಿ ಕೃತ ನಿಲಯೈರಾಕ್ರಮುಂಚಾಸಹಂತ್ಯಾ ।
ಈಯುರ್ದೇವಾಧಿದೇವಂ ಶರಣಮಜಗುರುಂ ಪೂರ್ಣಷಾಡ್ಗುಣ್ಯಮೂರ್ತಿಂ ।
ಕ್ಷೀರಾಬ್ಧೌ ನಾಗ ಭೋಗೇ ಶಯಿತ ಮನುಪಮಾನಂದ ಸಂದೋಹದೇಹಮ್ ॥ ೧೭೯ ॥

ಏತಸ್ಮಿನ್ನೇವಕಾಲೇ=ಪಾಂಡುವು ತಪಸ್ಸನ್ನು ಮಾಟಂತ್ತಿರುವ ಸಮಯದಲ್ಲಿ ಕಮಲಭವಶಿವಾಗ್ರೇಸರಾಃ=ಬ್ರಹ್ಮನೇ ರುದ್ರನು ಇವರೇ ಮುಂದಾಳುಗಳಾಗಿ ಉಳ್ಳ ಶಕ್ರಪೂರ್ವಾಃ=ಇಂದ್ರನೇ ಮೊದಲಾಗಿ ಉಳ್ಳ ದೇವತೆಗಳು ಭುವಿಕೃತನಿಲಯೈಃ ಭೂಮಿಯಲ್ಲಿ ಮಾಡಲ್ಪಟ್ಟ ಮಂದಿರಗಳುಳ್ಳ ಪಾಪಾತ್ಮದೈತ್ಯೈ=ಪಾಪವೇ ಸ್ವರೂಪವಾಗಿ ಉಳ್ಳ ದೈತ್ಯರಿಂದ ಆಕ್ರಮಣವನ್ನು ಅಸಹಂತ್ಯಾ=ಸಹಿಸಲಶಕ್ತಳಾದ ಭೂವ್ಯಾ=ಭೂದೇವಿಯಿಂದ ಸಹ=ಕೂಡಿಕೊಂಡು ದೇವಾಧಿದೇವಂ= ದೇವತೆಗಳಿಗೂ ಶ್ರೇಷ್ಠ ದೇವತೆಯಾದ ಶರಣಂ=ರಕ್ಷಕನಾದ ಅಜಗುರುಂ=ಬ್ರಹ್ಮನಿಗೂ ಉಪದೇಶಕನಾದ ಪೂರ್ಣಷಾಡ್ಗುಣ್ಯ ಮೂರ್ತಿಂ=ಪರಿಪೂರ್ಣಗಳಾದ ಐಶ್ವರ್ಯಾದಿ ಷಡ್ಗುಣಗಳೇ ದೇಹವಾಗಿ ಉಳ್ಳ ಕ್ಷೀರಾಬ್ಧೌ=ಕ್ಷೀರ ಸಮುದ್ರದಲ್ಲಿ ನಾಗಭೋಗೇ=ಶೇಷನ ಶರೀರದಲ್ಲಿ ಶಯಿತಂ=ಮಲಗಿರುವ ಅನುಪಮಾನಂದಸಂದೋಹದೇಹಂ=ಅಸದೃಶವಾದ ಆನಂದ ಸಮೂಹಗಳೇ ಶರೀರವಾಗಿ ಉಳ್ಳ ಶ್ರೀ ನಾರಾಯಣನನ್ನು ಈಯುಃ=ಹೊಂದಿದರು. ॥ ೧೭೯ ॥

ಊಚುಃ ಪರಂ ಪುರುಷಮೇನಮನಂತಶಕ್ತಿಂ ಸೂಕ್ತೇನ ತೇऽಬ್ಜಜಮುಖಾ ಅಪಿ ಪೌರುಷೇಣ ।
ಸ್ತುತ್ವಾಧರಾऽಸುರವರಾಕ್ರಮಣಾತ್ಪರೇಶಖಿನ್ನಾಹ್ಯತೋऽತಿವಿಮುಖಾಸ್ತವತೇऽತಿಪಾಪಾಃ ॥೧೮೦

ಅಬ್ಜಜಮುಖಾ ಅಪಿ=ಚತುರ್ಮುಖನೇ ಪ್ರಧಾನರಾಗಿ ಉಳ್ಳ ದೇವತೆಗಳೂ ಕೂಡ ಪೌರುಷೇಣ=ಪರಮ ಪುರುಷನನ್ನು ಪ್ರತಿಪಾದಿಸತಕ್ಕ ಸೂಕ್ತೇನ=ಪುರುಷ ಸೂಕ್ತದಿಂದ ಅನಂತ ಶಕ್ತಿಂ=ಅಪರಿಮಿತ ಸಾಮರ್ಥ್ಯವುಳ್ಳ ಪುರುಷಂ = ಪುರುಷ ಶಬ್ದ ವಾಚ್ಯನಾದ ಏನಂ=ಈ ನಾರಾಯಣನನ್ನು ಸ್ತುತ್ವಾ=ಸ್ತೋತ್ರ ಮಾಡಿ ಹೇಪರೇಶ=ಉತ್ತಮರಾದ ಬ್ರಹ್ಮಾದಿಗಳಿಗೆ ಸ್ವಾಮಿಯಾದ ಪರಮಾತ್ಮನೇ ಹಿ=ಯಾವ ಕಾರಣದಿಂದ ಅತಿಪಾಪಾಃ=ಅತ್ಯಂತ ಪಾಪಿಷ್ಠರಾದ ತೇ=ಆ ದೈತ್ಯರು ತವ=ನಿ ಅತಿವಿಮುಖಾಃ=ಅತ್ಯಂತ ದ್ವೇಷಿಗಳೋ ಅತಃ = ಆ ಕಾರಣದಿಂದ ಧರಾ=ಭೂಮಿಯು ಅಸುರವರಾಕ್ರಮಣಾತ್=ದ ಶ್ರೇಷ್ಠರ ಆಕ್ರಮಣದಿಂದ ಖಿನ್ನಾ=ದುಃಖಿವುಳ್ಳವಳು ಇತಿ=ಎಂಬುದಾಗಿ ಊಚಿವಾನ್=ಹೇಳಿದರು. ॥ ೧೮೦ ॥

ದುಃಸಂಗತಿರ್ಭವತಿ ಭಾರವದೇವದೇವ ನಿತ್ಯಂ ಸತಾಮುಪಿಹಿನಃ ಶೃಣುವಾಕ್ಯಮೀಶ ।
ಪೂರ್ವಂಹತಾದಿತಿಸುತಾ ಭವತಾರಣೇಷು ಹ್ಯಸ್ಮತ್ಪ್ರಿಯಾರ್ಥಮುಧುನಾಭುವಿತೇऽಭಿಜಾತಾಃ ॥೧೮೧

ಹೇದೇವ=ಎಲೋ ಕ್ರೀಡಾದಿಗುಣ ವಿಷಿಷ್ಟನಾದ ಪರಮಾತ್ಮನೇ ನಿತ್ಯಂ=ಯಾವಾಗಲೂ ದುಃಸಂಗತಿಃ=ದುರ್ಜನರ ಸಮಾಗಮವು ಸತಾಮಪಿ=ಎಲ್ಲವನ್ನೂ ಸಹಿಸತಕ್ಕ ಸಜ್ಜನರಿಗೂ ಕೂಡ ಹಿ=ಯಾವ ಕಾರಣದಿಂದ ಭಾರವದೇವ=ಭಾರ ದಂತೆಯೇ ಭವತಿ=ಆಗುತ್ತದೋ ಅತಃ = ಆದ್ದರಿಂದ ಹೇ ಈಶ=ಎಲೋ ಸ್ವಾಮಿಯೇ ನಃ=ನಮ್ಮ ವಾಕ್ಯಂ=ಮುಂದೆ ಹೇಳುವ ಮಾತನ್ನು ಶ್ಲಣುಃ=ಕೇಳು ಭವತಾ=ನಿನ್ನಿಂದ ಪೂರ್ವಂ=ಹಿಂದೆ ಅಸ್ಮತ್ಪ್ರಯಾರ್ಥಂ = ನಮ್ಮ ಸಂತೋಷಕ್ಕೋಸ್ಕರ ರಣೇಷು= ಯುದ್ಧಗಳಲ್ಲಿ ಯೇ ದಿತಿಸುತಾಃ=ಯಾವ ದೈತ್ಯರು ಹತಾಃ=ಸಂಹರಿಸಲ್ಪಟ್ಟರುವರೋ ತೇ=ಆ ದೈತ್ಯರು ಅಧುನಾ=ಈಗ ಭವಿ=ಭೂಮಿಯಲ್ಲಿ ಅಭಿಜಾತಾಃ= ಹುಟ್ಟಿರುವರು. ಹಿ= ಆಪ್ತಕಾಮುಸ್ಯ ಕಾಸ್ಪೃಹಾ ಎಂಬ ಶ್ರುತಿಯಿಂದ ದೈತ್ಯರ ಸಂಹಾರ ದಿಂದ ತನಗೆ ಪ್ರಯೋಜನವಿಲ್ಲವೆಂಬುದು ಪ್ರಸಿದ್ಧವು ॥ ೧೪೧ ॥

ಅಸೀತ್ಪುರಾದಿತಿಸುತೈರಮರೋತ್ತಮಾನಾಂ ಸಂಗ್ರಾಮ ಉತ್ತಮ ಗಜಾಶ್ವರಥದ್ವಿಪದ್ಭಿಃ ।
ಅಕ್ಷೌಹಿಣೀಶತಮಹೌಘ ಮಹೌಘಮೇವ ಸೈನ್ಯಂ ಸುರಾತ್ಮಕ ಮಭೂತ್ಪರಮಾಸ್ತ್ರಯುಕ್ತಮ್ ॥೧೪೨॥

ಪುರಾ=ಹಿಂದೆ ದಿತಿಸುತೈಃ=ದೈತ್ಯರಿಂದ ಸಹ=ಕೂಡಿಕೊಂಡು ಅಮರೋತ್ತಮಾನಾಂ = ದೇವ ಶ್ರೇಷ್ಠರಿಗೆ ಸಂಗ್ರಾಮಃ=ಯೆಂದ್ದವು ಅಸೀತ್=ಆಯಿತು. ತತ್ರ ದೇವಾಸುರ ಸೈನ್ಯಗಳ ಮಧ್ಯದಲ್ಲಿ ಉತ್ತಮ ಗಜಾಶ್ವರದ್ವಿಪದ್ಭಿಃ=ಶ್ರೇಷ್ಠ ಗಳಾದ ರಥಗಳು, ಕುದುರೆಗಳು, ಆನೆಗಳೂ, ಕಾಲಾಳುಗಳೂ ಇವುಗಳಿಂದ ಅಕ್ಷೌಹಿಣೀ ಶತಮಹೌಘ ಮಹೌಘಂ=ಅಕ್ಷೌಹಿಣಿ ಗಳ ನೂರರಿಂದ ಕೂಡಿದ ಮಹೌಘ ಸಂಖ್ಯೆಗಳ ಮಹೌಘ ಸಂಖ್ಯೆವುಳ್ಳ ಪರಮಾಸ್ತ್ರಯುಕ್ತಂ=ಉತ್ತಮಾಸ್ತ್ರಗಳಿಂದ ಕೂಡಿದ ಸುರಾತ್ಮಕಂ=ದೇವತಾ ಸಂಬಂಧಿಯಾದ ಸೈನ್ಯಂ=ಸೈನ್ಯವು ಅಭೂತ್=ಇತ್ತು. ॥ ೧೪೨ ॥

ತಸ್ಮಾನ್ಮಹೌಘಗುಣಮಾಸಮಹಾಸುರಾಣಾಂಸೈನ್ಯ ಶಿಲಾಗಿರಿ ಮಹಾಸ್ತ್ರಧರಂ ಸುಘೋರಂ ।
ತೇಷಾಂ ರಥಾಶ್ಚ ಬಹು ನಲ್ವ ಪರಿಪ್ರಮಾಣಾ ದೇವಾಸುರ ಪ್ರವರಕಾಮ್ರ್ಮುಕಬಾಣಪೂರ್ಣಾಃ ॥
ನಾನಾಂಬರಾಭರಣವೇಷವರಾಯುಧಾಢ್ಯಾದೇವಾಸುರಾಃ ಸಸೃಪುರಾಶುಪರಸ್ಪರಂತೇ ॥ ೧೪೩ ॥

ತಸ್ಮಾತ್= ಆ ದೇವತೆಗಳ ಸೈನ್ಯದ ಸಂಖ್ಯೆಗಿಂತ ಮಹೌಘಗುಣಂ= ಮಹೌಘ ಸಂಖ್ಯೆಯಿಂದ ಗುಣಿತವಾದ ಶಿಲಾಗಿರಿ ಮಹಾಸ್ತ್ರಧರಂ= ಕಲ್ಲು ಪರ್ವತ ಶ್ರೇಷ್ಠ ಅಸ್ತ್ರಗಳು ಇವುಗಳನ್ನು ಧರಿಸಿರುವ ಸುಘೋರಂ= ಅತ್ಯಂತ ಭಯಂಕರವಾದ ಮಹಾ ಸುರಾಣಾಂ= ಶ್ರೇಷ್ಠ ಅಸುರರ ಸೈನ್ಯಂ= ಸೈನ್ಯವು ಆಸ= ಇತ್ತು. ತೇಷಾಂ= ಆ ದೇವಾಸುರರ ರಥಾಶ್ಚ= ರಥಗಳೂ ಕೂಡ ಬಹುನಲ್ವಪರಿಪ್ರಮಾಣ= ನಾಲ್ಕು ಮೂರು ಮೊಳಗಳ ಸುತ್ತಳಲೂ ಪರಿಮಿತಿ ಉಳ್ಳವುಗಳು ದೇವಾಸುರ ಪ್ರವರ ಕಾಮುಕ ಬಾಣ ಪೂರ್ಣಾಃ= ದೇವತೆಗಳೂ ಮತ್ತು ಅಸುರರ ಶ್ರೇಷ್ಠಗಳಾದ ಧನಸ್ಸುಗಳೂ ಬಾಣಗಳೂ ಇವುಗಳಿಂದ ಪೂರ್ಣಗಳಾಗಿ ಆಸನ್= ಇದ್ದವು ನಾನಾಂಬರಾಭರಣ ವೇಷ ವರಾಯುಧಾಢ್ಯಾಃ= ಬಹುಪ್ರಕಾರಗಳಾವ ವಸ್ತ್ರಗಳಿಂದಲೂ ಆಭರಣಗಳಿಂದಲೂ ಅಲಂ ಕಾರವುಳ್ಳ ಉತ್ತಮ ಆಯುಧಗಳಿಂದ ಸಂಪನ್ನರಾದ ತೇ ದೇವಾಸುರಾಃ= ಆ ದೇವತೆಗಳೂ ಮತ್ತು ಅಸುರರು ಆಶು= ಕೂಡಲೇ ಪರಸ್ಪರಂ= ಅನೋನ್ಯವಾಗಿ ಸಸೃತುಃ= ಯುದ್ಧಕ್ಕಾಗಿ ಬಂದರು. ॥ ೧೪೩ ॥

ಜಘ್ನುರ್ಗಿರೀಂದ್ರತಲಮುಷ್ಟಿ ಮಹಾಸ್ತ್ರ ಶಸ್ತ್ರೈಶ್ಚ ಕುರ್ನದೀಶ್ಚ ರುಧಿರೌಘವಹಾಮಹೌಘಮ್ ।
ತತ್ರಸ್ಮದೇವಯುಷಭೈರ ಸುರೇಶ ಚಮ್ವ್ಯಯುದ್ಧೇವಿಷೂದಿತ ಉತೌಘ ಬಲೈಃ ಶತಾಂಶಃ ॥ ೧೪೪ ॥

ತೇ = ಆ ದೇವಾಸುರರು ಗಿರೀಂದ್ರತಲಮುಷ್ಟಿ ಮಹಾಸ್ತ್ರ ಶಸ್ತ್ರೈಃ = ಶ್ರೇಷ್ಠ ಪರ್ವತಗಳಿಂದಲೂ ಕೈ ಮತ್ತು ಪಾದದ ಅಡಿಭಾಗಗಳಿಂದಲೂ ಮುಷ್ಟಿ ಪ್ರಹಾರಗಳಿಂದಲೂ ಶ್ರೇಷ್ಠ ಮಂತ್ರಯುಕ್ತ ಆಯುಧಗಳಿಂದಲೂ ಖಡ್ಗ ಮೊದಲಾದ ಶಸ್ತ್ರಗಳಿಂದಲೂ ಜಘ್ನುಃ = ಪರಸ್ಪರವಾಗಿ ಹೊಡೆದುಕೊಂಡರು. ಮಹೌಘಂ= ಮಹತ್ತಾದ ಪ್ರವಾಹವು ಹೇಗೆ ಆಗುತ್ತದೋ ಹಾಗೆ ರುಧಿರಾಘವರಾಹ= ರಕ್ತಗಳ ಸಮುದಾಯದಿಂದ ಹರಿಯುತ್ತಿರುವ ನದೀಃ= ನದಿಗಳನ್ನು ಚಕ್ರುಂ=ಮಾಡಿದರು.ತತ್ರ= ಆ ಯುದ್ಧದಲ್ಲಿ ಓಘ ಬಲೈಃ= ಪರಂಪರೆಯಿಂದ ಯುಕ್ತವಾದ ಸೈನ್ಯವುಳ್ಳ ದೇವಯುಪಭೈಃ=ದೇವ ಶ್ರೇಷ್ಠರಿಂದ ಅಸುರೇಶಚ ಮ್ವಾಃ= ದೈತ್ಯ ಶ್ರೇಷ್ಠರ ಸೈನ್ಯದ ಶಶಾಂಶಃ= ನೂರು ಭಾಗಗಳಲ್ಲಿ ಒಂದು ಭಾಗವು ವಿಷೂದಿತಃ= ಕೊಲ್ಲಲಟ್ಟಿತು. ॥೧೪೪॥
("ಓಘಃ ಪರಂಪರಾಯಾಂ ಸ್ಯಾತ್" ಇತ್ಯಭಿಧಾನಂ ಮಹಾನ್ಓಘಃ ಪ್ರವಾಹೋ ಯಥಾಭವತಿ ತಥಾ ಮಹೌಘಂ ।)

ಅಥಾತ್ಮಸೇನಾಮವಮೃದ್ಯಮಾನಾಂ ವೀಕ್ಷ್ಯಾಸುರಃ ಶಂಬರನಾಮಧೇಯಃ ।
ಸಸಾರಮಾಯಾಮವಿದಸಹ್ಯಮಾಯೋ ವರಾದುಮೇಶಸ್ಯ ಸುರಾನ್ವಿಮೋಹಯನ್ ॥ ೧೪೫ ॥

ಮಾಯಾ ಸಹಸ್ರೇಣ ಸುರಾವಿಮರ್ದಿತಾರಣೇವಿಷೆದುಃಶಶಿಸೂರ್ಯ ಮುಖ್ಯಾಃ ।
ತಾನ್ವೀಕ್ಷ್ಯ ವಜ್ರೀ ಪರಮಾಖ್ಯ ವಿದ್ಯಾಂ ಸ್ವಯಂಭುದತ್ತಾಂ ಪ್ರಯುಯೋಜ ವೈಷ್ಣವೀಮ್ ॥ ೧೪೬ ॥

ಅಥ= ಆನಂತರ ಮಾಯಾಮಿತ್ = ಇಂದ್ರಜಾಲ ಮಾಯೆಯನ್ನು ತಿಳಿದಿರುವ ಉಮೇಶಸ್ಯ= ರುದ್ರನ ವರಾತ್= ವರದಿಂದ ಅಸ್ಯಹ್ಯಮಾಯಃ= ಇನ್ನೊಬ್ಬರಿಂದ ಸಹಿಸಲಾಗದ ಮಾಯೆಯುಳ್ಳ ಶಂಬರನಾಮಧೇಯಃ= ಶಂಬರನೆಂದೂ ಹೆಸರುಳ್ಳ ಅಸುರಃ= ದೈತ್ಯನು ಅವಮೃದ್ಯಮಾನಾಂ= ಪೀಡಿಸಿಕೊಳ್ಳಲ್ಪಡುತ್ತಿರುವ ಆತ್ಮಸೇನಾಂ= ತನ್ನ ಸೈನ್ಯವನ್ನು ವೀಕ್ಷ್ಯ= ನೋಡಿ ಮಾಯಾಸಹಸ್ರೇಣ=ಸಹಸ್ರಾರು ಇಂದ್ರಜಾಲಮಾಯೆಗಳಿಂದ ಸುರಾನ್= ದೇವತೆಗಳನ್ನು ವಿಮೋಹಯನ್ ಸನ್= ಮೋಹಗೊಳಿಸುವವನಾಗಿ ಸಸಾರ= ಬಂದನು. ರಣೇ= ಯುದ್ಧದಲ್ಲಿ ಮಾಯಾಸಹಸ್ರೇಣ = ಸಾವಿರಾರು ಇಂದ್ರಜಾಲಮಾಯೆಗಳಿಂದ ವಿಮರ್ದಿತಾಃ= ಚೆನ್ನಾಗಿ ಪೀಡಿಸಿಕೊಳ್ಳಲ್ಪಟ್ಟ ಶಶಿಸೂರ್ಯಮುಖ್ಯಾಃ= ಚಂದ್ರಸೂರ್ಯರು ಪ್ರಧಾನರಾಗಿ ಉಳ್ಳ ದೇವತೆಗಳು ವಿಷೇದುಃ= ದುಃಖವನ್ನು ಹೊಂದಿದರು. ವಜ್ರೀ = ವಜ್ರಾಯುಧವುಳ್ಳ ಇಂದ್ರನು ತಾನ್ = ಆ ದೇವತೆಗಳನ್ನು ವೀಕ್ಷ್ಯ = ನೋಡಿ ವೈಷ್ಣವೀಂ= ವಿಷ್ಣುದೇವತಾಕವಾದ ಸ್ವಯಂಭುತ್ತಾಂ= ಬ್ರಹ್ಮನಿಂದ ಕೊಡಲ್ಪಟ್ಟ ಪರಮಾಖ್ಯಾವಿದ್ಯಾಂ ಪರಮವಿದ್ಯೆಯಾದ ವೈಷ್ಣವೀ ಮಾಯೆಯನ್ನು ಪ್ರಯಯೋಜ = ಪ್ರಯೋಗಿಸಿದನು ॥ ೧೪೫ ॥ ೧೪೬ ॥

ಸಮಸ್ತಮಾಯಾಪಹಯಾ ತಯೈವ ವರಾದ್ರಮೇಶಸ್ಯ ಸದಾಪ್ಯಸಹ್ಯಯಾ ।
ಮಾಯಾ ವಿನೇಶುರ್ದಿತಿಜೇಂದ್ರ ಸೃಷ್ಟಾವಾರೀಶವಹ್ನೀಂದು ಮುಖಾಶ್ಚ ಮೋಚಿತಾಃ ॥ ೧೪೭ ॥

ಸಮಸ್ತಮಾಯಾಪಹಯಾ = ಎಲ್ಲಾ ಮಾಯೆಗಳನ್ನು ನಾಶಮಾಡತಕ್ಕ (ತಯಾ=ಆ ವೈಷ್ಣವೀಮಾಯೆಯಿಂದ ಉಮೇಶಸ್ಯ = ರುದ್ರನ ವರಾತ್ ಅಪಿ = ವರದಿಂದಲೂ ಕೂಡ ಸದಾ = ಯಾವಾಗಲೂ ಅಸಹ್ಯಯಾ = ಸಹಿಸಲಾಗದ ತಯೈವ=ಆ ವೈಷ್ಣವೀಮಾಯೆಯಿಂದಲೇ ದಿತಿಜೇಂದ್ರಸೃಷ್ಟಾಃ=ದೈತ್ಯಶ್ರೇಷ್ಠನಾದ ಶಬರಾಸುರನಿಂದ ಸೃಷ್ಟಗಳಾದ ಮಾಯಾಃ=ಮಾಯೆಗಳು ವಿನೇಶುಃ=ನಾಶ ಹೊಂದಿದವು. ವಾರೀಶವಹ್ನೀಂದುಮುಖಾಶ್ಚ =ನೀರಿಗೆ ಅಧಿಪತಿಯಾದ ವರುಣನು, ಅಗ್ನಿಯು ಚಂದ್ರನು ಇವರೇ ಪ್ರಧಾನರಾಗಿ ಉಳ್ಳ ದೇವತೆಗಳು ಮೋಚಿತಾಃ = ಶಂಬರನ ಮಾಯೆಯಿಂದ ಬಿಡಗಡೆ ಹೊಂದಿದರು ॥ ೧೪೭ ॥

ಯಮೇಂದುಸೂರ್ಯಾದಿಸುರಾಸ್ತತೋಽಸುರಾನ್ನಿಜಘ್ನುರಾಪ್ಯಾಯಿತವಿಕ್ರಮಾಸ್ತದಾ ।
ಸುರೇಶ್ವರೇಣೋರ್ಜಿತಪೌರುಷಾಬಹೂನ್ವಜ್ರೇಣ ವಜ್ರೀ ನಿಜಘಾನ ಶಂಬರಮ್ ॥ ೧೪೮ ॥

ತತಃ=ಮಾಯಾಬಂಧನದಿಂದ ಬಿಡುಗಡೆಯನ್ನು ಹೊಂದಿದ ನಂತರ ಸುರೇಶ್ವರೇಣ=ದೇವೇಂದ್ರನಿಂದ ಆಪ್ಯಾಯಿತ ವಿಕ್ರಮಾಃ=ಅಭಿವೃದ್ಧವಾದ ಪರಾಕ್ರಮವುಳ್ಳ ಊರ್ಜಿತ ಪೌರುಷಾಃ=ಉತ್ಕೃಷ್ಟ ಸಾಮರ್ಥ್ಯವುಳ್ಳ ಯಮೇಂದ್ರ ಸೂರ್ಯಾದಿ ಸುರಾಃ=ಯಮ ಚಂದ್ರ ಸೂರ್ಯರೇ ಮೊದಲಾಗಿ ಉಳ್ಳ ದೇವತೆಗಳೂ ಬಹೂನ್ = ಬಹು ಸಂಖ್ಯಾತರಾದ ಅಸುರಾನ್=ದೈತ್ಯರನ್ನು ನಿಜಘ್ನುಃ=ಕೊಂದರು ತದಾ=ಆಗ ವಜ್ರೀ=ಇಂದ್ರನು ವಜ್ರೇಣ=ವ್ರಜಾಯುಧದಿಂದ ಶಂಬರಂ= ಶಂಬರಾಸುರನನ್ನು ನಿಜಘಾನ=ಕೊಂದನು. (ಇಂದ್ರನಿಂದ ಹತನಾದ ಶಂಬರನು ಆದಿ ಶಂಬರನು ಶ್ರೀ ಕೃಷ್ಣನ ಮಗನಾದ ಪ್ರದ್ಯುಮ್ನನು ಕೊಂದ ಮಗನಂ ಬೇರೊಬ್ಬನು.) ॥ ೧೪೮ ॥

ತಸ್ಮಿನ್ಹತೇ ದಾನವಲೋಕಪಾಲೇದಿತೇಃ ಸುತಾದುದ್ರುವುರಿಂದ್ರ ಭೀಷಿತಾಃ ।
ತಾನ್ವಿಪ್ರ ಚಿತ್ತಿರ್ವಿನಿವಾರ್ಯ ಧನ್ವೀ ಸಸಾರಶಕ್ರ ಪ್ರಮುಖಾನ್ಸುರೋತ್ತಮಾನ್ ॥ ೧೪೯ ॥

ದಾನವ ಲೋಕಪಾಲೇ=ದೈತ್ಯ ಜನರನ್ನೆ ರಕ್ಷಿಸುವ ತಸ್ಮಿನ್=ಆ ಶಂಬರಾಸುರನು ಹತೇ ಸತೀ=ಸಾಯುತ್ತಿರಲು ದಿತೇಃ=ದಿತಿಯ ಸುತಾಃ=ಮಕ್ಕಳಾದ ದೈತ್ಯರು ಇಂದ್ರ ಭೀಷಿತಾಃಸಂತಃ=ಇಂದ್ರನಿಂದ ಹೆದರಿದವರಾಗಿ ದುದ್ರುವುಃ=ಓಡಿದರು

ಧನ್ವೀ = ಧನುರ್ಧಾರಿಯಾದ ವಿಪ್ರಚಿತ್ತಿಃ=ವಿಪ್ರಚಿತ್ತಿ ಎಂಬ ಅಸುರನು ತಾನ್=ಆ ಓಡತಕ್ಕ ದೈತ್ಯರನ್ನು ವಿನಿವಾರ್ಯ್ಯ= ತಡೆದು ಶಕ್ರ ಪ್ರಮುಖಾನ್ = ಇಂದ್ರನೇ ಮೊದಲಾಗಿ ಉಳ್ಳ ಸುರೋತ್ತಮಾನ್=ದೇವಶ್ರೇಷ್ಠರನ್ನು ಸಸಾರ=ಯುದ್ಧಕ್ಕಾಗಿ ಹೊಂದಿದನು.

ವರಾದಜೀಯೇನ ವಿಧಾತುರೇವ ಸುರೋತ್ತಮಾಂಸ್ತೇನ ಶರೈರ್ನಿಪಾತಿತಾನ್ ।
ನಿರೀಕ್ಷ್ಯಶಕ್ರಂ ಚ ವಿಮೋಹಿತಂ ದ್ರುತಂ ನ್ಯವಾರಯುಚ್ಚಂ ಪವನಃ ಶರೌಘೈಃ ॥ ೧೯೦ ॥

ವಿಧಾತುಃ=ಬ್ರಹ್ಮನ ವರಾತ್=ವರದಿಂದ ಅಜೇಯೇನ=ಪರಾಜಯವಿಲ್ಲದ ತೇನ=ಆವಿಪ್ರಚಿತ್ತಿಯಿಂದ ಶರೈಃ= ಬಾಣಗಳಿಂದ ನಿಪಾತಿತಾನ್=ಕೆಡಹಾಕಲ್ಪಟ್ಟ ಸುರೋತ್ತಮಾನ್=ದೇವಶ್ರೇಷ್ಠರನ್ನು ವಿಮೋಹಿತಂ = ಮೂರ್ಛೆಯನ್ನು ಹೊಂದಿದ ಶಕ್ರಂ ಚ=ಇಂದ್ರನನ್ನು ಕೂಡ ನಿರೀಕ್ಷ್ಯ=ನೋಡಿ ದ್ರುತಂ=ಓಡುತ್ತಿರುವ ತಂ=ಆ ವಿಪ್ರ ಚಿತ್ತಿಯನ್ನು ಪವನಃ= ವಾಯುದೇವರು ಶರೌಘೈಃ=ಬಾಣಗಳ ಸಮುದಾಯಗಳಿಂದ ನ್ಯವಾರಯತ್ = ತಡೆದರು. ॥ ೧೯೦ ॥

ಅಸ್ತ್ರಾಣಿ ತಸ್ಯಾಸ್ತ್ರವರೈರ್ನಿವಾರ್ಯ್ಯ ಚಿಕ್ಷೇಪ ತಸ್ಯೋರಸಿ ಕಾಂಚನೀಂ ಗದಾಮ್ ।
ವಿಚೂರ್ಣಿತೋಽಸಾನಿ ಪಪಾತ ಮೇರೌ ಮಹಾಬಲೋ ವಾಯುಬಲಾಭಿನುನ್ನಃ ॥ ೧೯೧ ॥

ತಸ್ಯ=ಆ ವಿಪ್ರಚಿತ್ತಿಯು ಅಸ್ತ್ರಾಣಿ=ಅಸ್ತ್ರಗಳನ್ನು ಅಸ್ತ್ರವರೈಃ=ಶ್ರೇಷ್ಠ ಅಸ್ತ್ರಗಳಿಂದ ನಿವಾರ್ಯ್ಯ=ತಡೆದು ತಸ್ಯ= ಆ ವಿಪ್ರಚಿತ್ತಿಯು ಉರಸಿ=ಎದೆಯಲ್ಲಿ ಕಾಂಚನೀಂ=ಭಂಗಾರ ಮಯವಾದ ಗದಾಂ=ಗದೆಯನ್ನು ಚಿಕ್ಷೇಪ=(ವಾಯುದೇವರು) ಬಿಟ್ಟರು. ಮಹಾಬಲಃ=ಶ್ರೇಷ್ಠ ಸಾಮರ್ಥ್ಯವುಳ್ಳ ಅಸೌ=ಈ ವಿಪ್ರಚಿತ್ತಿಯು ವಾಯುಬಲಾಭಿನುನ್ನಃ=ವಾಯುದೇವರ ಶಕ್ತಿ ಯಿಂದ ಪ್ರೇರಿಸಿಕೊಳ್ಳಲ್ಪಟ್ಟವನಾಗಿ ವಿಚೂರ್ಣಿತಃ=ಪುಡಿಯಾದವನಾಗಿ ಮೇರೌ=ಮೇರು ಪರ್ವತದಲ್ಲಿ ನಿಪಪಾತ= ಬಿದ್ದನು. ॥ ೧೯೧ ॥

~~ಅಥಾಸಸಾದಾಶು ಸ ಕಾಲನೇಮಿಸ್ತ್ವದಾಜ್ಞಯಾ ಯಸ್ಯ ವರಂ ದದೌಪುರಾ ।~~
ಸರ್ವೈರಜೇಯತ್ವಮಜೋಽಸುರಃ ಸ ಸಹಸ್ರಶೀರ್ಷೋದ್ವಿಸಹಸ್ರಬಾಹುಯುಕ್ ॥ ೧೯೨ ॥

ಅಥ=ವಿಪ್ರಚಿತ್ತಿಯು ಬಿದ್ದನಂತರ ಪುರಾ=ಹಿಂದೆ ಅಜಃ=ಬ್ರಹ್ಮನು ತ್ವದಾಜ್ಞಯಾ=ನಿನ್ನ ಆಜ್ಞೆಯಿಂದ ಯಸ್ಯ= ಯಾವ ಕಾಲ ನೇಮಿಗೆ ಸರ್ವೈಃ=ಎಲ್ಲರಿಂದಲೂ ಅಜೇಯತ್ವಂ=ಪರಾಜಯ ರಾಹಿತ್ಯರೂಪವಾದ ವರಂ=ವರವನ್ನು ದದೌ= ಕೊಟ್ಟನೋ ಸಃ=ಆದಾವ ಸಹಸ್ರಶೀರ್ಷಃ=ಸಾವಿರ ತಲೆಗಳುಳ್ಳ ದ್ವಿಸಹಸ್ರಬಾಹುಯುಕ್=ಎರಡು ಸಾವಿರ ಭುಜಗಳಿಂದ ಕೂಡಿದ ಕಾಲನೇಮಿಃ=ಕಾಲನೇಮಿ ಎಂಬ ಅಸುರನು ಆಶು=ಕೂಡಲೇ ಅಸಸಾದ=ವಾಯುದೇವರನ್ನು ಹೊಂದಿದನು॥೧೯೨॥

ತಮಾಪತಂತಂ ಪ್ರಸವಿಮೋಕ್ಷ್ಯಮಾರುತಸ್ತ್ವದಾಜ್ಞಯಾ ದತ್ತವರಸ್ತ್ವಯೈವ ।
ಹಂತವ್ಯ ಇತ್ಯಸರ ದಾಶು ಹಿ ತ್ವಾಂ ತದಾವಿರಾಸೀತ್ತ್ವಮನಂತ ಪೌರುಷಃ ॥ ೧೯೩ ॥

ಮಾರುತಃ=ವಾಯುದೇವರು ಆಪತಂತಂ=ಬರತಕ್ಕ ತಂ=ಆ ಕಾಲನೇಮಿಯನ್ನು ಪ್ರಸವಿಮೋಕ್ಷ್ಯಃ=ನೋಡಿ ತ್ವದಾಜ್ಞಯಾ=ಕಾಲ ನೇಮಿಗೆ ಅವಧ್ಯತ್ವ ವರವನ್ನು ಕೊಡು ಎಂಬುದಾಗಿ ನಿನ್ನ ಆಜ್ಞೆಯಿಂದ ದತ್ತವರಃ = ಬ್ರಹ್ಮನಿಂದ ಕೊಡ ಲ್ಪಟ್ಟ ವರವುಳ್ಳ ಕಾಲನೇಮಿಯು ತ್ವಯೈವ=ನಿನ್ನಿಂದಲೇ ಹಂತವ್ಯಃ=ಕೊಲ್ಲಲು ಯೋಗ್ಯನು ಇತಿ=ಈ ಅಭಿಪ್ರಾಯದಿಂದ ಆಶು=ಕೂಡಲೇ ತ್ವಾಂ=ನಿನ್ನನ್ನು ಯದಾ=ಯಾವಾಗ ಅಸ್ಮರತ್=ಸ್ಮರಿಸಿದನೋ ತದಾ=ಆಗ ಅನಂತ ಪೌರುಷಃ=ಅಪರಿಮಿತ ಪರಾಕ್ರಮವುಳ್ಳ ತ್ವಂ=ನೀನು ಆವಿರಾಸೀಃ=ಆವಿರ್ಭವಿಸಿದಿ. ಹಿ=ನಿಶ್ಚಯವು.

ತಮುಸ್ರ ಶಸ್ತ್ರಾಣಿ ಬಹೂನಿಬಾಹುಭಿಃ ಪ್ರವರ್ಷಮಾಣಂಭುವನಾಪ್ತ ದೇಹವಮ್ ।
ಚಕ್ರೇಣ ಬಾಹೂನ್ವಿನಿಕೃತ್ಯ ಕಾನಿಚನ್ಯವೇದಯಶ್ಚಾಶು ಯವೀಯ ಪಾಪಮ್ ॥ ೧೯೪ ॥

ತ್ವಂ=ನೀನು ಬಹೂನಿ=ಬಹಳ ಅಸ್ತ್ರ ಶಸ್ತ್ರಾಣಿ=ಅಸ್ತ್ರಶಸ್ತ್ರಗಳನ್ನು ಬಾಹುಭಿಃ=ಭುಜಗಳಿಂದ ಪ್ರವರ್ಷಮಾಣಂ=ಮಳೆಗಳಿಸುತ್ತಿರುವ ಭುವನಾಪ್ತದೇಹಂ=ಲೋಕಗಳಲ್ಲಿ ವ್ಯಾಪ್ತನಾದ ಶರೀರವುಳ್ಳ ಪಾಪಂ=ಪಾಪಿಷ್ಠನಾದ ತಂ=ಆಕಾಲನೇಮಿಯನ್ನು ಚಕ್ರೇಣ=ಸುದರ್ಶನದಿಂದ ಬಾಹೂನ್=ಭುಜಗಳನ್ನು ಕಾನಿಚ=ಶಿರಸ್ಸುಗಳನ್ನು ಕೂಡ ವಿನಿಕೃತ್ಯ=ಛೇದಿಸಿ ಆಶು=ಕೂಡಲೇ ಯಮಾಯ=ಯಮನಿಗೋಸ್ಕರ ನ್ಯವೇದಯಃ=ಕಳುಹಿಸಿದಿ. ॥ ೧೯ಳಿ ॥

ತತೋऽಸುರಾಸ್ತ್ವಯಾ ನಿಹತಾ ಅಶೇಷಾಸ್ತ್ರಯಾ ಶ್ರಿಭಾಗಾನಿಹತಾಶ್ಚತುರ್ಥಮ್ ।
ಜಘಾನ ವಾಯುಃ ಪುನರೇವ ಜಾತಾಸ್ತೇಭೂತಕರೇಧರ್ಮಬಲೋಪಪನ್ನಾಃ ॥ ೧೯೫ ॥

ತತಃ=ಕಾಲನೇಮಿ ಸಂಹಾರಾನಂತರ ಅಶೇಷಾಃ=ಎಲ್ಲಾ ತೇ=ಆ ಅಸುರಾಃ=ದೈತ್ಯರು ತ್ವಯಾ=ನಿನ್ನಿಂದ ತ್ರಿಭಾಗಾಃ = ನಾಲ್ಕು ಭಾಗಗಳ ಮಧ್ಯದಲ್ಲಿ ಮೂರು ಭಾಗಗಳು ನಿಹತಾಃ=ಕೊಲ್ಲಲ್ಪಟ ರಂ. ಚತುರ್ಥಂ=ಉಳಿದ ನಾಲ್ಕನೇ ಭಾಗವನ್ನು ವಾಯವಃ=ಪ್ರಾಣ ದೇವರು ಜಘಾನ=ಕೊಂದರು. ತ ಏವ=ಆ ಅಸುರರೇ ಧರ್ಮಬಲೋಪಪನ್ನಾಃ ಸಂತಃ=ಧರ್ಮ ಮತ್ತು ಬಲಗಳಿಂದ ಯುಕ್ತರಾದವರಾಗಿ ಭೂತಲೇ=ಭೂಮಿಯಲ್ಲಿ ಪುನಃ=ಮತ್ತೆ ಜಾತಾಃ=ಹುಟ್ಟಿದರು. ॥ ೧೯೫ ॥

ರಾಜ್ಞಾಂ ಮಹಾವಂಶ ಸುಜನ್ಮನಾಂತು ತೇಷಾಮಭೂದ್ಧರ್ಮಮತಿರ್ವಿಪಾಪಾ ।
ಶಿಕ್ಷಾಮವಾಪ್ಯದ್ವಿಜಪುಂಗವಾನಾಂ ತ್ವದ್ಭಕ್ತಿರಪ್ಯೇಷು ಹಿ ಕಾಚನ ಸ್ಯಾತ್ ॥ ೧೯೬ ॥

ತು=ತಪ್ಪೋ ವಿಶೇಷದಿಂದ ಮಹಾವಂಶಸುಜನ್ಮನಾಂ=ಪ್ರಸಿದ್ಧ ಕುಲದಲ್ಲಿ ಉತ್ತಮ ಮಾತಾ ಪಿತೃಗಳಿಂದ ಉತ್ಪತ್ತಿ ಉಳ್ಳ ತೇಷಾಂ=ಆ ರಾಜರಾದ ಅಸುರರಿಗೆ ವಿಪಾಪಾ=ದೋಷರಹಿತವಾದ ಧರ್ಮಮತಿಃ=ಧರ್ಮಬುದ್ಧಿಯು ಅಭೂತ್=ಉಂಟಾಗಿದೆ. ದ್ವಿಜಪುಂಗವಾನಾಂ=ಬ್ರಾಹ್ಮಣ ಶ್ರೇಷ್ಠರ ಶಿಕ್ಷಾಂ=ದೀಕ್ಷೆಯನ್ನು ಅವಾಪ್ಯ=ಹೊಂದಿ ವಿಪ್ಲವಿ=ಅಯೋಗ್ಯರಾದ ಈ ದೈತ್ಯರಲ್ಲಿಯೂ ಕೂಡ ಕಾಚನ=ಸ್ವಲ್ಪ-ತ್ವದ್ಭಕ್ತಿಃ=ನಿನ್ನಲ್ಲಿ ಭಕ್ತಿಯಿರುತ್ತಾ=ಉಂಟಾಗ ಬಹುದೆಂದು ಊಹಿಸುತ್ತೇವೆ. ಹಿ=ಸ್ಪಟಿಕ ಮಣಿಯಲ್ಲಿ ಕೆಂಪು ದಾಸವಾಳ ಹೂವಿನ ಸಂಬಂಧದಿಂದ ಕೆಂಪು ಬಣ್ಣ ತೋರುವಂತೆ ಸಜ್ಜನರ ಸಂಸರ್ಗರೂಪ ಉಪಾಧಿಗೂ ಸಾಮರ್ಥ್ಯವಿದೆ ಎನ್ನುವುದು ಪ್ರಸಿದ್ಧವು. ॥ ೧೯೬ ॥

ತ್ವದ್ಭಕ್ತಿಲೇಶಾಭಿಯುತಃ ಸುಕರ್ಮಾ ವ್ರಜೇನ್ನಪಾಪಾಂ ತು ಗತಿಂ ಕಥಂಚಿತ್ ।
ದೈತ್ಯೇಶ್ವರಾಣಾಂಚ ತಮೋಂಧಮೇವ ತ್ವಯೈವ ಕ್ಲೃಪ್ತಂ ನನು ಸತ್ಯಕಾಮ ॥ ೧೯೭ ॥

ತ್ವದ್ಭಕ್ತಿಲೇಶಾಭಿಯುತಃ=ನಿನ್ನಲ್ಲಿ ಭಕ್ತಿಯ ಕಣದಿಂದ ಕೂಡಿದ ಸುಕರ್ಮಾ=ಸದಾಚಾರವುಳ್ಳ ಪುರುಷನು ಪಾಪಾಂ ಗತಿಂತು=ನರಕರೂಪಪಾದ ಗತಿಯನ್ನಾದರೂ ಕಥಂಚಿತ್ = ಯಾವ ರೀತಿಯಿಂದಲೂ ನವ್ರಜೇತ್=ಹೊಂದಲಾರನು. ಹೇ ಸತ್ಯಕಾಮಾ=ಎಲೋ ವ್ಯರ್ಥವಲ್ಲದ ಇಚ್ಛೆಯುಳ್ಳವನೇ ದೈತ್ಯೇಶ್ವರಾಣಾಂಚ=ದೈತ್ಯಶ್ರೇಷ್ಠರಿಗೆ ಅಂಧಂತಮ ಏವ = ಅಂಧಂತಮಸ್ಸೇ ತ್ವಯೈವ=ನಿನ್ನಿಂದಲೇ ಕ್ಲೃಪ್ತಂನನು=ನಿಶ್ಚಿತವಾಗಿದೆಯಷ್ಟೇ ॥ ೧೯೭ ॥

ಧರ್ಮಸ್ಯ ಮಿಥ್ಯಾತ್ವಭಯಾದ್ವಯಂ ತ್ವಾಮ ಥಾಪಿವಾ ದೈತ್ಯಶುಭಾಪ್ತಿಭೀಷಾ ।
ಸಂಪ್ರಾರ್ಥಯಾಮೋ ದಿತಿಜಾನ್ಸು ಕರ್ಮಣಸ್ತ್ವದ್ಭಕ್ತಿತಶ್ಚಾಲಯಿತುಂ ಚ ಶೀಘ್ರಮ್॥ ೧೯೮ ॥

ಧರ್ಮಸ್ಯ = ನಿನ್ನಲ್ಲಿ ಮಾಡುವ ಭಕ್ತಿ ರೂಪ ಧರ್ಮಕ್ಕೆ ಮಿಥ್ಯಾತ್ವಭಯಾತ್=ವೈಯರ್ಥ್ಯ ಬರುತ್ತದೆ ಎಂಬ ಹೆದರಿಕೆಯಿಂದ ಅಂದರೆ ನಿನ್ನಲ್ಲಿ ಭಕ್ತಿ ಮಾಡಿದವರಿಗೆ ಸದ್ಗತಿಯಾಗದಿದ್ದರೆ ಭಕ್ತಿಯು ವ್ಯರ್ಥವಾಗುವುದು. ಎಂಬ ಭೀತಿಯಿಂದ ಅಥಾಪಿವಾ=ಧರ್ಮಕ್ಕೆ ವೈಯರ್ಥ್ಯವನ್ನು ಪರಿಹರಿಸುವುದಕ್ಕಾಗಿ ದೈತ್ಯರಿಗೆ ಸದ್ಗತಿಯನ್ನು ಕೊಡುವ ಪಕ್ಷದಲ್ಲಿ ದೈತ್ಯಶುಭಾಪ್ತಿ ಭೀಷಾ=ದೈತ್ಯರಿಗೆ ಸದ್ಗತಿಯಾಗುವುದು ಎಂಬ ಭಯದಿಂದ ದಿತಿಜಾನ್=ದೈತ್ಯರನ್ನು ಸುಕರ್ಮಣಃ=ನಿನ್ನಲ್ಲಿ ಭಕ್ತಿಯಿನ್ನುಂಟು ಮಾಡುವ ಸತ್ಕರ್ಮ ದೆಸೆಯಿಂದಲೂ ತ್ವದ್ಭಕ್ತಿತಶ್ಚ=ನಿನ್ನ ಭಕ್ತಿಯ ದೆಸೆಯಿಂದಲೂ ಕೂಡ ಶೀಘ್ರಂ=ಬೇಗನೇ ಚಾಲಯಿತುಂ=ಬಡಿಸುದಕ್ಕಾಗಿ ವಯಂ=ನಾವು ತ್ವಾಂ=ನಿನ್ನನ್ನು ಸಂಪ್ರಾರ್ಥಯಾಮಃ=ಪ್ರಾರ್ಥಿಸುತ್ತೇವೆ.॥ ೧೯೮ ॥

ಯ ಉಗ್ರಸೇನಃ ಸುರಗಾಯಕಃ ಸಃ ಜಾತೋಯದುಷ್ವೇವ ತಥಾಭಿಧೇಯಃ ।
ತವೈವ ಸೇವಾರ್ಥಮುಮುಷ್ಯ ಪುತ್ರೋ ಜಾತೋ೬ಸುರಃ ಕಾಲನೇಮಿಃ ಸ ಈಶಃ ॥ ೧೯೯ ॥

ಯಃ=ಯಾವನು ಪೂರ್ವಂ=ಮೊದಲು ಸುರಗಾಯಕಃ=ದೇವತೆಗಳನ್ನು ಗಾನಮಾಡತಕ್ಕ ಉಗ್ರಸೇನಃ=ಉಗ್ರಸೇನನೆಂಬ ಗಂಧರ್ವನೋ ಸಃ=ಅವನು ಯದುಷು=ಯಾದವರಲ್ಲಿ ತಥಾಭಿಧೇಯಃಸನ್=ಹೀದೆ ಯಾವನಾಮವಿತ್ತೋ ಹಾಗೆಯೇ ಉಗ್ರಸೇನನೆಂಬ ಹೆಸರುಳ್ಳವನಾಗಿ ತವ=ನಿನ್ನ ಸೇವಾರ್ಥಮೇವ = ಸೇವೆಗೋಸ್ಕರವೇ ಜಾತಃ = ಹುಟ್ಟಿದನು ಹೇ ಈಶ = ಎಲ್ಲೋ ಸ್ವಾಮಿಯಾದ ಹರಿಯೇ ಸಃ ಆ ವಾಯುವಿನಿಂದ ಕೊಲ್ಲಲ್ಪಡಲಿಲ್ಲವೆಂದು ಪ್ರಸಿದ್ಧನಾದ ಅಸುರಃ= ಅಸುರನಾದ ಕಾಲನೇಮಿಃ= ಕಾಲನೇಮಿಯು ಅಮುಷ್ಯ=ಈ ಉಗ್ರಸೇನನ ಪುತ್ರಃಸನ್=ಮಗನಾಗಿ ಜಾತಃ= ಹುಟ್ಟಿದನು ॥ ೧೯೯ ॥

ಯಸ್ತ್ವತ್ಪ್ರಿಯಾರ್ಥಂ ನ ಹತೋಹಿ ವಾಯುನಾಭವತ್ಪ್ರಸಾದಾತ್ವರವಿೂಶತಾಪಿ।
ಸ ಏಷ ಭೋಜೇಷು ಪುನಶ್ಚ ಜಾತೋ ವರಾದುಮೇಶಸ್ಯ ಪರೈರಸ್ಯಜೇಯಃ ॥ ೨೦೦ ॥

ಭವತ್ಪ್ರಸಾದ್=ನಿನ್ನ ಅನುಗ್ರಹದಿಂದ ವರಂ=ಚೆನ್ನಾಗಿ ಈಶತಾ = ಸಮರ್ಥನಾದ ವಾಯುನಾ = ವಾಯು ದೇವರಿಂದ ತ್ವತ್ಪ್ರಿಯಾರ್ಥಂ ಹಿ = ನಿನ್ನ ಸಂತೋಷಕ್ಕೋಸ್ಕರವೇ ಯಃ = ಯಾವ ಕಾಲನೇಮಿಯು ಪುರಾ = ಹಿಂದೆ ನಹತಃ = ಕೊಲ್ಲಲ್ಪಡಲಿಲ್ಲವೋ ಸಃ = ಆದಾವ ಏಷಃ = ಈ ಕಾಲನೇಮಿಯೇ ಉಮೇಶಸ್ಯ = ಪಾರ್ವತೀಪತಿಯಾದ ರುದ್ರ ದೇವರ ವರಾತ್ = ವರದಿಂದ ಪರೈಃ = ಇತರರಿಂದ ಅಜೇಯಃ ಸನ್ = ಪರಾಜಯರಹಿತನಾಗಿ ಭೋಜೇಷು = ಭೋಜರೆಂದು ಪ್ರಸಿದ್ಧರಾದ ಯಾದವರಲ್ಲಿ ಪುನಃ = ಮತ್ತೊಮ್ಮೆ ಜಾತಃ = ಹುಟ್ಟಿದನು. ॥ ೨೦೦ ॥

ಅವಃ- ಉಗ್ರಸೇನನಿಂದ ಹುಟ್ಟಲಿಲ್ಲವಾದ್ದರಿಂದ ಶ್ರೀಕೃಷ್ಣನಲ್ಲಿ ದ್ವೇಷವುಂಟಾಗಿದೆ ಕಂಸನಿಗೆ ಎಂದು ಕಾರಣವನ್ನು ಹೇಳುತ್ತಾರೆ.

~~ಸ ಚೌಗ್ರಸೇನೇ ಜನಿತೋ೬ಸುರೇಣ ಕ್ಷೇತ್ರೇಹಿ ತದ್ರೂಪಧರೇಣ ಮಾಯಯಾ ।~~
ಗಂಧರ್ವಜೇನ ದ್ರುಮಿಳೇನ ನಾಮ್ನಾ ಕಂಸೋಜಿತೋ ಯೇನ ವರಾಚ್ಚಚೀಪತಿಃ ॥ ೨೦೧ ॥

ಮಾಯಯಾ = ಗಂಧರ್ವರ ಮಾಯಾ ವಿದ್ಯೆಯಿಂದ ತದ್ರೂಪಧರೇಣ = ಆ ಉಗ್ರಸೇನನರೂಪದಂತೆ ರೂಪವನ್ನು ಧರಿಸಿರುವ ಗಂಧರ್ವಜೇನ= ಗಂಧರ್ವ ಕುಲದಲ್ಲಿ ಹುಟ್ಟಿದ ನಾಮ್ನಾ = ಹೆಸರಿನಿಂದ ದ್ರುಮಿಗಳೇನ = ದ್ರುಮಿಳನೆಂಬ ಅಸುರನಿಂದ ಔಗ್ರಸೇನೇ=ಉಗ್ರಸೇನನ ಸಂಬಂಧಿಯಾದ ಕ್ಷೇತ್ರೇ = ಧರ್ಮಪತ್ನಿಯಲ್ಲಿ ಯೇನ = ಯಾವ ಕಂಸನಿಂದ ವರಾತ್ = ರುದ್ರದೇವರ ವರಬಲದಿಂದ ಶಚೀಪತಿಃ = ಶಚಿಗೆ ಗಂಡನಾದ ಪುರಂದರನು ಜಿತಃ = ಪರಾಜಿತನಾದನೋ ಸ ಕಂಸಃ = ಅಂತಹ ಕಂಸನು ಜನಿತಃ = ಹುಟ್ಟಿದನು. ॥ ೨೦೧ ॥

ಜಿತ್ವಾ ಜಲೇಶಂ ಚ ಹೃತಾನಿ ಯೇನ ರತ್ನಾನಿ ಯಕ್ಷಾಶ್ಚ ಜಿತಾಃ ಶಿವಸ್ಯ।
ಕನ್ಯಾವನಾರ್ಥಂ ಮಗಧಾಧಿಪೇನ ಪ್ರಯೋಜಿತಾಸ್ತೇಚ ಹೃತೇ ಬಲೇನ ॥ ೨೦೨ ॥

ಯೇನ=ಯಾವ ಕಂಸನಿಂದ ಜಲೇಶಂ = ವರುಣನನ್ನು ಜಿತ್ವಾ = ಗೆದ್ದು ರತ್ನಾನಿ = ಸಮುದ್ರದಲ್ಲಿರುವ ರತ್ನಗಳು ಹೃತಾನಿ = ಅಪಹರಿಸಲ್ಪಟ್ಟಿವೆಯೋ ಯೇನ = ಯಾವ ಕಂಸನಿಂದ ಮಗಧಾಧಿಪೇನ = ಮಗಧ ದೇಶಕ್ಕೆ ಒಡೆಯನಾದ ಜರಾಸಂಧನಿಂದ ಕನ್ಯಾವನಾರ್ಥಂ= ತನ್ನ ಕನ್ಯೆಯರ ರಕ್ಷಣೆಗೋಸ್ಕರ ಪ್ರಯೋಜಿತಾಃ=ಪಯೋಜಿತರಾಗಿರುವರೋ ಯೇನ= ಯಾವ ಕಂಸನಿಂದ ತೇಚ = ಅಸ್ತಿ, ಪ್ರಾಸ್ತಿ ಎಂದು ಹೆಸರುಳ್ಳ ಜರಾಸಂಧನ ಕನ್ಯೆಯರೂ ಕೂಡ ಬಲೇನ = ಸಾಮರ್ಥ್ಯದಿಂದ ಹೃತೇ = ಅಪಹರಿಸಲ್ಪಟ್ಟಿರುವರೋ ಸ ಕಂಸಃ= ಅಂತಹ ಕಂಸನು ಜನಿತಃ=ಹುಟ್ಟಿದನು. ॥ ೨೦೨ ॥

ಸ ವಿಪ್ರಚಿತ್ತಿಶ್ಚ ಜರಾಸುತೋ೬ಭೂದ್ವರಾದ್ವಿಧಾತುರ್ಗಿರಿಶಸ್ಯ ಚೈವ ।
ಸರ್ವೈರಜೇಯೋ ಬಲಮುತ್ತಮಂ ತತ್ ಜ್ಞಾತ್ವೈವ ಕಂಸಸ್ಯ ಮುದಾಸುತೇ ದದೌ ॥ ೨೦೩ ॥

ಸಃ=ಆ ಜರಾಸಂಧನು ಪೂರ್ವಂ=ಮೊದಲು ವಿಪ್ರಚಿತ್ತ್ಯಃ=ವಿಪ್ರಚಿತ್ತಿ ಎಂಬ ಅಸುರನು ವಿಧಾತುಃ=ಬ್ರಹ್ಮದೇವರ ಗಿರಿಶಸ್ಯ ಚ=ರುದ್ರದೇವರ ವರಾದೇವ=ವರದಿಂದಲೇ ಜರಾಸುತಃ=ಜರೆ ಎಂಬ ರಾಕ್ಷಸಿಯ ಮಗನಾದ ಜರಾಸಂಧನು ಸರ್ವೈಃ=ಎಲ್ಲರಿಂದಲೂ ಅಜೇಯಃ=ಪರಾಜಯ ರಹಿತನು ಅಭೂತ್ = ಆದನು. ಸಃ=ಆ ಜರಾಸಂಧನು ಕಂಸಸ್ಯ=ಕಂಸನ ತತ್=ಆ ಇಂದ್ರಾದಿಗಳ ಜಯದಿಂದ ಪ್ರಸಿದ್ಧವಾದ ಉತ್ತಮಂ ಬಲಂ=ಶ್ರೇಷ್ಠ ಸ್ವಾಮರ್ಥ್ಯವನ್ನು ಜ್ಞಾತ್ವಾ=ತಿಳಿದ ಮುದೈವ=ಸಂತೋಷದಿಂದಲೇ ಸುತೇ=ಕಂಸನಿಂದ ಅಪಹರಿಸಲ್ಪಟ್ಟ ಅಸ್ತಿ ಪ್ರಾಪ್ತಿ ನಾಮಕರಾದ ಕನ್ಯೆಯರನ್ನು ದದೌ= ಕಂಸನಿಗೆ ಕೊಟ್ಟನು. ॥ ೨೦೩ ॥

ನಿವಾರಯಾಮಾಸ ನ ಕಂಸಮುದ್ಧತಂ ಶಕ್ತೋಽಪಿ ಯೋ ಯಸ್ಯ ಬಲೇನ ಕಶ್ಚಿತ್ ।
ತುಲ್ಯಃ ಪೃಥಿವ್ಯಾಂ ವಿವರೇಷು ವಾ ಕ್ವಚಿದ್ವಶೇ ಬಲಾಢ್ಯೋ ನೃಪತೀಂಶ್ಚ ಚಕ್ರೇ ॥ ೨೦೪ ॥

ಯಸ್ಯ=ಯಾವ ಜರಾಸಂಧನಿಗೆ ಬಲೇ = ಸಾಮರ್ಥ್ಯ ವಿಷಯದಲ್ಲಿ ಪೃಥಿವ್ಯಾಂ=ಭೂಮಿಯಲ್ಲಿ ವಿವರೇಷುವಾ= ಪಾತಾಲಾದಿ ಏಳು ಲೋಕಗಳಲ್ಲಾಗಲೀ ಕ್ವಚಿತ್=ಯಾವ ಕಾಲದಲ್ಲಿಯೂ ಕಶ್ಚಿತ್ = ಯಾವ ಪುರುಷನೂ ಕೂಡ ತುಲ್ಯಃ= ಸದೃಶನು ನ=ಇರಲಿಲ್ಲವೋ ಅತಏವ=ಆದ್ದರಿಂದಲೇ ಬಲಾಢ್ಯಃ = ಬಲದಿಂದ ಕೂಡಿದ ಜರಾಸಂಧನು ನೃಪತೀನ್=ಶಲ್ ಬಾಹ್ಲೀಕಾದಿ ರಾಜರುಗಳನ್ನು ವಶೇ=ತನ್ನ ಅಧೀನದಲ್ಲಿ ಸ್ಥಿತಾನ್=ಇರುವವರನ್ನಾಗಿ ಚಕ್ರೇ=ಮಾಡಿದನು. ಯಃ=ಯಾ ಜರಾಸಂಧನು ಶಕ್ತೋಽಪಿ=ಕಂಸನಿಂದ ಕನ್ಯೆಯರನ್ನು ಬಿಡಿಸಿ ತರಲು ಸಮರ್ಥನಾದರೂ ಕೂಡ ಉದ್ಧತಂ=ತನ್ನಿಂದಲೇ ಬಲಿಷ್ಠನಾದವನ ಕನ್ಯೆಯರ ಅಪಹಾರದಿಂದ ಮತ್ತನಾದ ಕಂಸನನ್ನು ನನಿವಾರಯಾಮಾಸ=ತಡಿಯಲಿಲ್ಲ. (ಆದರೆ ಕಂಸ ಸಾಮರ್ಥ್ಯವನ್ನು ತಿಳಿದು ಅವನಿಗೇ ಮುದಂವೆ ಮಾಡಿಕೊಟ್ಟನು.) ॥ ೨೦೫ ॥

ಹತೌ ಪುರಾ ಯೌ ಮಧುಕೈಟಭಾಖ್ಯೌ ತ್ವಯೈವ ಹಂಸೋ ದಿಭಿಕಶ್ಚ ಜಾತೌ ॥
ವರಾದಜೇಯೌ ಗಿರಿಶಸ್ಯ ವೀರೌ ಭಕ್ತೌ ಜರಾಸಂಧಮನುಸ್ಮತೌ ಶಿವೇ ॥ ೨೦೫ ॥

ಪುರಾ=ಹಿಂದೆ ತ್ವಯೈವ=ಹಯಗ್ರೀವರೂಪಿಯಾದ ನಿನ್ನಿಂದಲೇ ಮಧುಕೈಟಭೌ= ಮಧು ಕೈಟಭರೆಂದು ಹೆ ರುವ ಯೌ=ಯಾವ ದೈತ್ಯರು ಹತೌ = ಕೊಲ್ಲಲ್ಪಟ್ಟಿರುವರೋ ತೌ=ಆ ಮಧುಕೈಟಭರು ಹಂಸೋ ದಿಭೀಶಶ್ಚ=ಹಂ ಮತ್ತು ದಿಭಿಕರೆಂಬುದಾಗಿ ಜಾತೌ=ಬ್ರಹ್ಮದತ್ತನಿಂದ ಹುಟ್ಟಿರುವರು. ತೌ=ಆ ಹಂಸ ದಿಭಿಕರು ಗಿರಿಶಸ್ಯ=ರುದ್ರನ ವರಾತ್ ವರದಿಂದ ಅಜೇಯೌ=ಇನ್ನೊಬ್ಬರಿಂದ ಜಯಿಸಲಶಕ್ಯರು ವೀರೌ=ಪರಾಕ್ರಮಿಗಳು. ಜರಾಸಂಧಮನು=ಜರಾಸಂಧನ ಅನಂತ ಶಿವೇ=ರುದ್ರನಲ್ಲಿ ಭಕ್ತೌ=ಭಕ್ತರು ಸ್ಮ=ಪ್ರಸಿದ್ಧ. ॥ ೨೦೫ ॥

ಅನ್ಯೇಽಪಿ ಭೂಮಾವಸುರಾಃ ಪ್ರಜಾತಾಸ್ತ್ವಯಾಹತಾ ಯೇ ಸುರದೈತ್ಯ ಸಂಗರೇ ।
ಅನ್ಯೇ ತಥೈವಾಂಧತಮಃ ಪ್ರಪೇದಿರೇ ಕಾರ್ಯಾ ತಥೈಷಾಂ ಚ ತಮೋಗತಿಸ್ತ್ವಯಾ ॥ ೨೦೬ ॥

ಸುರದೈತ್ಯಸಂಗರೇ=ದೇವತೆಗಳು ಮತ್ತು ದೈತ್ಯರು ಇವರ ಯುದ್ಧದಲ್ಲಿ ಅನ್ಯೇ=ಹಿಂದೆ ಹೇಳಿದ ಅಸುರರಿ ಇತರರಾದ ಯೇ=ಯಾವ ಅಸುರರು ತ್ವಯಾ=ನಿನ್ನಿಂದ ಹತಾಃ=ಕೊಲ್ಲಲ್ಪಟ್ಟಿರುವರೋ ತೇ=ಅವರಲ್ಲ ಕೆಲವರು ತಥೈವ ಹಿಂದಿನ ವರದಂತೆಯೇ ಅಂಧತಮಃ=ಅಂಧಂತಮಾನಸ ವನ್ನು ಪ್ರಪೇದಿರೇ=ಹೊಂದಿರುವರು. ಅನ್ಯೇ=ನಿನ್ನಿಂದ ಸಂಹ ರಾಗಿರುವ ತಮಸ್ಸನ್ನು ಹೊಂದಿರುವ ಕೆಲವು ಅಸುರಾಃ=ದೈತ್ಯರು ಭೂಮೌ=ಭೂತಲದಲ್ಲಿ ಪ್ರಜಾತಾಃ=ಹುಟ್ಟಿರುವ ಏಷಾಂಚ=ಈ ಭೂಮಿಯಲ್ಲಿ ಹುಟ್ಟಿರುವ ಅಸುರರಿಗೂ ಕೂಡ ತಥಾ = ಹಾಗೆಯೇ ಅಂದರೆ ಇತರರು ಹೇಗೆ ತಮಸ್ಸ ಹೊಂದಿರುವರೋ ಹಾಗೆಯೇ ತ್ವಯಾ=ನಿನ್ನಿಂದ ತಮೋಗತಿಃ=ಅಂಧತಮಃ ಪ್ರಾಪ್ತಿಯು ಕಾರ್ಯಾ=ಮಾಡ ಯೋಗ್ಯವು. ॥ ೨೦೬ ॥

ವ್ಯಾಸಾವತಾರೇ ನಿಹತಸ್ತ್ವಯಾ ಯಃ ಕಲಿಃ ಸುಶಾಸ್ತ್ರೋಕ್ತಿಭಿರೇವಚಾದ್ಯ ।
ಶ್ರುತ್ವಾ ತ್ವದುಕ್ತೀಃ ಪುರುಷೇಷು ತಿಷ್ಠನ್ನೀಷಚ್ಚಕಾರೇವ ಮನಸ್ತ್ವಯೀಶ ॥ ೨೦೭ ॥

ಹೇ ಈಶ = ಸ್ವಾಮಿಯಾದ ಪರಮಾತ್ಮನೇ ವ್ಯಾಸಾವತಾರೇ=ವೇದವ್ಯಾಸಾವತಾರದಲ್ಲಿ ತ್ವಯಾ=ನಿನ್ನಿಂದ ಯಃ ಕಲಿಃ = ಯಾವ ಮಿಥ್ಯಾಜ್ಞಾನರೂಪಿಯಾದ ಕಲಿಯು ಸುಶಾಸ್ತ್ರೋಕ್ತಿಭಿರೇವ=ಶೋಭನಗಳಾದ ಶಾಸ್ತ್ರಗಳ ವಚನಗಳಿಂದಲೇ ಹತಃ=ಕೊಲ್ಲಲ್ಪಟ್ಟನೋ (ಏವಕಾರದಿಂದ ನಿನ್ನ ಚಕ್ರಾದ್ಯಾಯುಧಗಳಿಂದ ಕಾಲನೇಮಿಯಂತೆ ಕೊಲ್ಲಲ್ಪಡಲಿಲ್ಲವೆಂದು ತಿಳಿಸುತ್ತಾರೆ.) ಸ ಏವ = ಆ ಕಲಿಯೇ ಅದ್ಯ=ಈಗ ಸತ್ಪುರುಷೇಷು=ಸಜ್ಜನರಲ್ಲಿ ತಿಷ್ಠನ್‌ಸನ್=ಇರುವವನಾಗಿ ತ್ವದುಕ್ತೇಃ = ಅವರಿಂದ ಓದಲ್ಪಡುವ ನಿಮ್ಮ ಬ್ರಹ್ಮ ಮೀಮಾಂಸಾದಿ ನಿರ್ಣಾಯಕ ವಚನಗಳನ್ನು ಶ್ರುತ್ವಾ=ಕೇಳಿ ತ್ವಯಿ=ನಿನ್ನಲ್ಲಿ ಈಷತ್=ಸ್ವಲ್ಪ ಮನಃ=ಮನಸ್ಸನ್ನು ಚಕಾರೇವ=ಮಾಡುವವನಂತೆ ಇದ್ದಾನೆ. ॥ ೨೦೭ ॥

ರಾಮಾತ್ಮನಾಯೇ ನಿಹತಾಶ್ಚ ರಾಕ್ಷಸಾ ದೃಷ್ಟ್ವಾಬಲಂ ತೇऽಪಿ ತದಾ ತವಾದ್ಯ ।
ಸಮಂ ತವಾನ್ಯಂ ನ ಹಿ ಚಿಂತಯಂತಿ ಸುಪಾಪಿನೋऽಪೀಶ ತಥಾ ಹನೂಮತಃ ॥ ೨೦೮ ॥

ಹೇ ಈಶ = ಎಲೋ ಸ್ವಾಮಿಯೇ ರಾಮಾತ್ಮನಾ=ರಾಮನ ಸ್ವರೂಪದಿಂದ ಯೇ=ಯಾವ ರಾಕ್ಷಸಾಃ=ರಾಕ್ಷಸರು ನಿಹತಾಃ=ಕೊಲ್ಲಲ್ಪಟ್ಟಿರುವರೋ ತೇಪಿ=ಆ ರಾಕ್ಷಸರೂ ಕೂಡ ತದಾ=ಆ ರಾಮಾವತಾರಕಾಲದಲ್ಲಿ ತವ=ನಿನ್ನ ಬಲಂ= ಸಾಮರ್ಥ್ಯವನ್ನು ದೃಷ್ಟ್ವಾ=ನೋಡಿ ಅದ್ಯ=ಈಗ ಸುಪಾಪಿನೋಪಿ=ಅತಿಪಾಪಿಗಳಾದರೂ ಕೂಡ ತವ=ನಿನಗೆ ಸಮಂ= ಸದೃಶನಾದ ಅನ್ಯಂ=ಇನ್ನೊಬ್ಬ ಪುರುಷನನ್ನು ನಹಿಚಿಂತಯಂತಿ=ತಿಳಿಯುವುದಿಲ್ಲ ತಥಾ=ಹಾಗೆಯೇ ಹನೂಮತಃ=ಹನುಮಂತನಿಗೂ ಸಮಂ=ಸದೃಶನನ್ನು ಅನ್ಯಂ = ನಿನ್ನಿಂದ ಬೇರೆಯವನನ್ನು ನಹಿಚಿಂತಯಂತಿ=ತಿಳಿಯುವುದಿಲ್ಲ. ॥ ೨೦೮ ॥

ಯೇ ಕೇಶವ ತ್ವದ್ಬಹುಮಾನಯುಕ್ತಾಸ್ತಥೈವ ವಾಯೌ ನಹಿ ತೇತಮೋऽಂಧಮ್ ।
ಯೋಗ್ಯಾಃ ಪ್ರವೇಷ್ಟುಂ ತದತೋಹಿ ಮಾರ್ಗಾಚ್ಚಾಲ್ಯಾಸ್ತ್ವಯಾ ಜನಯಿತ್ವೈವ ಭೂಮೌ ॥೨೦೯॥

(ಹೇ) ಕೇಶವ=ಬ್ರಹ್ಮರುದ್ರ ಪ್ರೇರಕನಾದ ನಾರಾಯಣನೇ ಯೇ=ಯಾವ ಪುರುಷರು ತ್ವದ್ಬಹುಮಾನಯುಕ್ತಾಃ= ನಿನ್ನಲ್ಲಿ ಮಹತ್ವಬುದ್ಧಿಯಿಂದ ಕೂಡಿದವರೋ ತಥೈವ=ಹಾಗೆಯೇ ವಾಯೌ=ವಾಯುವಿನಲ್ಲಿಯೂ ಮಹತ್ವಬುದ್ಧಿ ಉಳ್ಳವರೋ ತೇ=ಆ ಪುರುಷರು ತಮಂಧಂತಮಃ=ಅಂಧಂತಮಸ್ಸನ್ನು ಪ್ರವೇಷ್ಟುಂ=ಪ್ರವೇಶಿಸಲು ಹಿ=ಯಾವ ಕಾರಣದಿಂದ ತ್ವಯಾ= ನಿನ್ನಿಂದ ಭೂಮೌ=ಭೂತಲದಲ್ಲಿ ಜನಯಿತ್ವಾ=ತನ್ನ ಸ್ವರೂಪವನ್ನು ಪ್ರಾದುರ್ಭವಿಸಿಕೊಂಡು ಅತಃ=ಹಿಂದೆ ಹೇಳಿದ ಸನ್ಮಾರ್ಗಾತ್= ಸನ್ಮಾರ್ಗದಿಂದ ಚಾಲ್ಯಾಃ= ಚಲಿಸಲು ಯೋಗ್ಯರು ಅಂದರೆ ಆ ಅಸುರರನ್ನು ಸನ್ಮಾರ್ಗಚ್ಯುತರನ್ನಾಗಿ ಮಾಡಬೇಕು. ॥ ೨೦೯ ॥

ಅವಃ– ಸನ್ಮಾರ್ಗದಿಂದ ತಪ್ಪಿಸುವ ಉಪಾಯವನ್ನು ತೋರಿಸುತ್ತಾರೆ.

ನಿತಾಂತಮುತ್ಪಾದ್ಯ ಭವದ್ವಿರೋಧಂ ತಥೈವ ವಾಯೌ ಬಹುಭಿಃ ಪ್ರಕಾರೈಃ ।
ಸರ್ವೇಷು ದೇವೇಷು ಚ ಪಾತನೀಯಾಸ್ತಮಸ್ಯಥಾಂಧೇಕಲಿಪೂರ್ವಕಾಸುರಾಃ ॥ ೨೧೦ ॥

ಹೇ ಈಶ=ಎಲೋ ಸ್ವಾಮಿಯೇ ನಿತಾಂತಂ=ಚೆನ್ನಾಗಿ ಭವದ್ವಿರೋಧಂ=ನಿನ್ನಲ್ಲಿ ವೈರವನ್ನು ತಥೈವ=ಹಾಗೆಯೇ ವಾಯೌ=ಪ್ರಾಣದೇವರಲ್ಲಿಯೂ ಸರ್ವೇಷುದೇವೇಷು ಚ=ಎಲ್ಲಾ ದೇವತೆಗಳಲ್ಲಿಯೂ ಕೂಡ ವಿರೋಧಂ=ವೈರವನ್ನು ಬಹುಭಿಃ ಪ್ರಕಾರೈಃ=ಅನೇಕ ರೀತಿಯ ಉಪಾಯಗಳಿಂದ ಉತ್ಪಾದ್ಯ=ಹುಟ್ಟಿಸಿ ಅಥ=ಅನಂತರ ಕಲಿಪೂರ್ವಕಾಸುರಾಃ= ಕಲಿಯೇ ಮೊದಲಾಗಿ ಉಳ್ಳ ಅಸುರರು ಅಂಧೇತಮಸಿ=ಅಂಧತಮಸ್ಸಿನಲ್ಲಿ ಪಾತನೀಯಾಃ = ಬೀಳಿಸಲು ಯೋಗ್ಯರು. ॥೨೧೦॥

ಹತೌ ಚ ಯೌ ರಾವಣಕುಂಭಕರ್ಣೌತ್ವಯಾ ತ್ವದೀಯೌ ಪ್ರತಿಹಾರಪಾಲೌ ।
ಮಹಾಸುರಾವೇಶಯುತೌ ಹಿ ಶಾಪಾತ್ತ್ವಯೈವತಾವದ್ಯ ವಿಮೋಚನೀಯೌ ॥ ೨೧೧ ॥

ತ್ವದೀಯೌ=ನಿನ್ನ ಭಕ್ತರಾದ ಪ್ರತಿಹಾರಪಾಲೌ=ದ್ವಾರಪಾಲಕರಾದ ಶಾಪಾತ್=ಸನಕಾದಿಗಳ ಶಾಪದಿಂದ ಮಹಾಸುರಾವೇಶಯುತಾ=ಶ್ರೇಷ್ಠರಾದ ಅಸುರರ ಆವೇಶದಿಂದ ಕೂಡಿರುವ ಯೌ=ಯಾವ ರಾವಣ ಕುಂಭಕರ್ಣೌ=ರಾವಣ ಕುಂಭ

ಕರ್ಣರು ತ್ವಯಾ=ನಿನ್ನಿಂದ ಹತೌ=ರಾವಣಾವತಾರದಲ್ಲಿ ಕೊಲ್ಲಲ್ಪಟ್ಟಿರುವರೋ ತೌ=ಆ ದ್ವಾರಪಾಲಕರಾದ ಜಯವಿಜಯರು ಅದ್ಯ=ಈಗ ಶಿಶುಪಾಲ ದಂತವಕ್ತ್ರ ಜನ್ಮದಲ್ಲಿ ತ್ವಯೈವ=ನಿನ್ನಿಂದಲೇ ಶಾಪಾತ್ = ಶಾಪದಿಂದ ವಿಮೋಚನೀಯೌ=ಬಿಡುಗಡೆ ಹೊಂದಲು ಯೋಗ್ಯರು. ॥ ೨೧೧ ॥

ಯೌ ತೌ ತವಾರೀ ಹ ತಯೋಃ ಪ್ರವಿಷ್ಟೌ ದೈತ್ಯೌತು ತಾವಂಧ ತಮಃಪ್ರವೇಶ್ಯೌ ।
ಯೌ ತೌ ತ್ವದೀಯೌ ಭವದೀಯವೇಶ್ಮ ತ್ವಯಾ ಪುನಃ ಪ್ರಾಪಣೀಯೌ ಪರೇಶ ॥ ೨೧೨ ॥

ಹೇ ಪರೇಶ=ಬ್ರಹ್ಮಾದಿಗಳಿಗೆ ಸ್ವಾಮಿಯಾದವನೇ ತವ=ನಿನಗೆ ಅರೀ ಇತಿ=ಶತ್ರುಗಳೆಂದು ತೌ=ಯಾವ ಶಿಶುಪಾಲ ದಂತವಕ್ತ್ರನಾಮಕರಾದ ದೈತ್ಯೌ=ದೈತ್ಯರು ತಯೋಃ=ಆ ದ್ವಾರಪಾಲಕರಾದ ಜಯ ವಿಜಯರಲ್ಲಿ ಪ್ರವಿಷ್ಟೌ=ಪ್ರವೇಶ ಮಾಡಿರುವರೋ ತೌ=ಆ ದೈತ್ಯರು ಇಹ=ಈ ಶಿಶುಪಾಲದಂತವಕ್ತ್ರ ಜನ್ಮದಲ್ಲಿ ಅಂಧತಮಃ=ಅಂದತಮಸ್ಸನ್ನು ಪ್ರವೇಶ್ಯೌ=ಹೊಂದಲಿಕ್ಕೆ ಯೋಗ್ಯರು. ತ್ವದೀಯೌ =ನಿನ್ನ ಭಕ್ತರಾದ ಯೌ=ಯಾವ ಜಯ ವಿಜಯರೋ ತೌ=ಅವರನ್ನು ತ್ವಯಾ=ನಿನ್ನಿಂದ ಪುನಃ=ಮತ್ತು ಭವದೀಯವೇಶ್ಮ=ನಿನ್ನದಾದ ವೈಕುಂಠ ಲೋಕವನ್ನು ಪ್ರಾಪಣೀಯೌ=ಹೊಂದಿಸಿ ಕೊಳ್ಳಲ್ಪಡಲು ಯೋಗ್ಯರು. ॥ ೨೧೨ ॥

ಆವಿಶ್ಯ ಯೋಬಲಿಮಂಜಶ್ಚಕಾರ ಪ್ರತೀಪಮಸ್ಮಾಸು ತಥಾತ್ವಯೀಶ ।
ಸ ಚಾಸುರೋ ಬಲಿನಾಮೈವ ಭೂಮೌ ಸಾಲ್ವೋನಾಮ್ನಾ ಬ್ರಹ್ಮದತ್ತಸ್ಯ ಜಾತಃ ॥ ೨೧೩ ॥

ಹೇ ಈಶ=ಎಲೋ ಸ್ವಾಮಿಯೇ ಯಃ=ಯಾವ ಬಲಿನಾಮಕ ಅಸುರನು ಬಲಿಂ=ಕರ್ಮಜ ದೇವತೆಯಾದ ಪ್ರಹ್ಲಾದನ ಮೊಮ್ಮಗನಾದ ಬಲಿ ಚಕ್ರವರ್ತಿಯನ್ನು ಆವಿಶ್ಯ=ಪ್ರವೇಶಿಸಿ ಅಸ್ಮಾಸು=ನಮ್ಮಲ್ಲಿ ತಥಾ = ಹಾಗೆಯೇ ತ್ವಯಿ = ನಿನ್ನಲ್ಲಿಯೂ ಪ್ರತೀಪಂ = ವಿರೋಧವನ್ನು ಆಂಜಃ = ಚೆನ್ನಾಗಿ ಚಕಾರ = ಮಾಡಿದನೋ ಸಃ = ಅಂತಹ ಬಲಿ ನಾಮಾ= ಬಲಿ ಎಂದು ಹೆಸರುಳ್ಳ ಅಸುರನೇ ಭೂಮೌ = ಭೂತಲದಲ್ಲಿ ನಾಮ್ನಾ=ಹೆಸರಿನಿಂದ ಸಾಲ್ವ ಇತಿ = ಸಾಲ್ವನೆಂದು ಪ್ರಸಿದ್ಧನಾಗಿ ಬ್ರಹ್ಮದತ್ತಸ್ಯ ಸಕಾಶಾತ್ = ಬ್ರಹ್ಮದತ್ತನ ದೆಸೆಯಿಂದ ಜಾತಃ = ಹುಟ್ಟಿರುವನು. ॥ ೨೧೩ ॥

ಮಾಯಾಮಯಂ ತೇನ ವಿಮಾನಮಗ್ರ್ಯಮಭೇದ್ಯಮಾಪ್ತಂ ಸಕಲೈರ್ಗಿರೀಶಾತ್ ।
ವಿದ್ರಾವಿತೋ ಯೋ ಬಹುಶಸ್ತ್ವಯೈವ ರಾಮ ಸ್ವರೂಪೇಣ ಭೃಗೂದ್ವಹೇನ ॥ ೨೧೪ ॥

ಯಃ=ಯಾವ ಸಾಲ್ವನು ಭೃಗೂದ್ವಹೇನ = ಭೃಗು ಕುಲದಲ್ಲಿ ಅವತಾರ ಮಾಡಿದ ರಾಮಸ್ವರೂಪೇಣ = ಪರಶು ರಾಮ ಸ್ವರೂಪನಾದ ತ್ವಯೈವ = ನಿನ್ನಿಂದಲೆಂ ಬಹುಶಃ = ಅನೇಕ ಸಲ ಯುದ್ಧ ಮಾಡುವವನಾಗಿ ವಿದ್ರಾವಿತಃ = ಓಡಿ ಸಲ್ಪಟ್ಟಿರುವನೋ ತೇನ = ಆ ಸಾಲ್ವನಿಂದ ಮಾಯಾಮಯಂ = ಇಂದ್ರಜಾಲ ಮಾಯಾ ಪ್ರಚುರವಾದ ಸಕಲೈಃ = ಎಲ್ಲರಿಂದಲೂ ಅಭೇದ್ಯಂ = ಭೇದಿಸಲಶಕ್ಯವಾದ ಅಗ್ರ್ಯಂ = ಶ್ರೇಷ್ಠವಾದ ವಿಮಾನಂ = ಆಕಾಶಯಾನವು ಗಿರೀಶಾತ್ = ರುದ್ರ ದೇವರ ದೆಸೆಯಿಂದ ಆಪ್ತಂ = (ತಪಸ್ಸು ಮಾಡಿ ಅವರ ಅನುಗ್ರಹದಿಂದ) ಹೊಂದಲ್ಪಟ್ಟಿದೆ. ॥ ೨೧೪ ॥

ನಾಸೌ ಹತಃ ಶಕ್ತಿಮತಾಪಿ ತತ್ರ ಕೃಷ್ಣಾವತಾರೇ ಸ ಮಯೈವ ವಧ್ಯಃ ।
ಇತ್ಯಾತ್ಮ ಸಂಕಲ್ಪಮೃತಂ ವಿಧಾತುಂ ಸಚಾತ್ರವಧ್ಯೋ ಭವತಾತಿಪಾಪೀ ॥ ೨೧೫ ॥

ಮಯೈವ = ಕೃಷ್ಣ ಸ್ವರೂಪನಾದ ನನ್ನಿಂದಲೇ ಸಃ = ಆ ಸಾಲ್ವನು ಕೃಷ್ಣಾವತಾರೇ = ಕೃಷ್ಣಾವತಾರದಲ್ಲಿ ವಧ್ಯಃ = ಕೊಲ್ಲಲು ಯೋಗ್ಯನು ಇತಿ = ಈ ರೀತಿಯಾದ ಆತ್ಮಸಂಕಲ್ಪಂ = ತನ್ನ ಸಂಕಲ್ಪವನ್ನು ಋತಂ = ಸತ್ಯವನ್ನಾಗಿ ವಿಧಾತುಂ = ಮಾಡುವುದಕ್ಕೋಸ್ಕರವೇ ಶಕ್ತಿಮತಾಪಿ = ಕೊಲ್ಲಲು ಸಾಮರ್ಥ್ಯವಿದ್ದವನಾದಾಗ್ಯೂ (ಪರಶುರಾಮನಿಂದ) ತತ್ರ = ಆ ಪರಶುರಾಮಾವತಾರದಲ್ಲಿ ಅಸೌ = ಈ ಸಾಲ್ವನು ಯತಃ= ಯಾವ ಕಾರಣದಿಂದ ನಹತಃ= ಕೊಲ್ಲಲ್ಪಡಲಿಲ್ಲವೋ ಅತಃ = ಆದ್ದರಿಂದ ಅತಿಪಾಪೀ = ಅತ್ಯಂತ ಪಾಪಿಷ್ಠನಾದ ಸಚ = ಆ ಸಾಲ್ವನಾದರೂ ಅತ್ರ = ಈ ಕೃಷ್ಣಾವತಾರದಲ್ಲಿ ಭವತಾ = ನಿನ್ನಿಂದ ವಧ್ಯಃ = ಕೊಲ್ಲಲು ಯೋಗ್ಯನು ॥ ೨೧೫ ॥

ಆವಃ- ಸಾಲ್ವನು ಸೌಭ ವಿಮಾನವನ್ನು ಹೊಂದಿರುವುದಾದರೆ ಅವನ ತಂದೆಯಾದ ಬ್ರಹ್ಮದತ್ತನನ್ನು ಸೌಭಪತಿಯೆಂದು ಹೇಗೆ ಕರೆಯುತ್ತಾರೆ ಎಂಬ ಶಂಕೆಗೆ ಸದೂಧಾನವನ್ನು ಹೇಳುತ್ತಾರೆ.

ಯದೀಯಮಾರುಹ್ಯ ವಿಮಾನಮಸ್ಯ ಪಿತಾಭವತ್ಸೌಭಪತಿಶ್ಚನಾಮ್ನಾ ।
ಯದಾ ಸ ಭೀಷ್ಮೇಣ ಜಿತಃ ಪಿತಾಸ್ಯ ತದಾ ಸ ಸಾಲ್ವಸ್ತಪಸಿ ಸ್ಥಿತೋಽಭೂತ್ ॥ ೨೧೬ ॥

ಅಸ್ಯ = ಈ ಸಾಲ್ವನ ಪಿತಾ = ತಂದೆಯಾದ ಬ್ರಹ್ಮದತ್ತನು ಯದೀಯಂ = ಯಾವ ಸಾಲ್ವನದ್ದಾದ ವಿಮಾನಂ = ವ್ಯೋಮಯಾನವನ್ನು ಆರುಹ್ಯ = ಏರಿ ನಾಮ್ನಾ = ಹೆಸರಿನಿಂದ ಸೌಭಪತಿಃ = ಸೌಭಪತಿಯುಂ ಅಭವತ್ = ಆದನು. (ಅತಿ ಪರಾಕ್ರಮಿಯಾದ ಸಾಲ್ವನಿರುವಾಗ ಭೀಷ್ಮಾಚಾರ್ಯರು ಸಾಲ್ವನ ತಂದೆಯನ್ನು ಹೇಗೆ ಸೋಲಿಸಿದರು ಎಂಬ ಶಂಕೆಗೆ ಸಮಾಧಾನವನ್ನು ಹೇಳುತ್ತಾರೆ.) ಯದಾ= ಯಾವಾಗ ಅಸ್ಯ = ಈ ಸಾಲ್ವನ ಪಿತಾ= ತಂದೆಯಾದ ಬ್ರಹ್ಮದತ್ತನು ಭೀಷ್ಮೇಣ = ಭೀಷ್ಮಾಚಾರ್ಯರಿಂದ ಜಿತಃ=ಪರಾಜಿತನಾದನೋ ತದಾ = ಆಗ ಸಸಾಲ್ವಃ = ಆ (ಸಾಲ್ವನು ತಪಸಿ = ಸೌಭ ವಿಮಾನವನ್ನು ಹೊಂದುವುದಕ್ಕಾಗಿ ತಪಸ್ಸಿನಲ್ಲಿ ಸ್ಥಿತಃ= ನಿರತಕ್ಕವನು ಅಭೂತ್= ಆಗಿದ್ದನು. (ಸಾಲ್ವನು ಬ್ರಹ್ಮದತ್ತನ ಸಮೀಪದಲ್ಲಿ ಇಲ್ಲದಿರುವುದರಿಂದ ಬ್ರಹ್ಮದತ್ತನನ್ನು ಭೀಷ್ಮಾಚಾರ್ಯರು ಗೆದ್ದರು.) ॥ ೨೧೬ ॥

ಸ ಚಾದ್ಯ ತಸ್ಮಾತ್ತಪಸೋ ನಿವೃತ್ತೋ ಜರಾಸುತಸ್ಯಾನುಮತೇ ಸ್ಥಿತೋ ಹಿ ।
ಅನನ್ಯವಧ್ಯೋಭವತಾದ್ಯವಧ್ಯಃ ಸ ಪ್ರಾಪಣೀಯಶ್ಚ ತಮುಸ್ಯಥೋಗ್ರೇ ॥ ೨೧೭ ॥

ಸಚ= ಆ ಸಾಲ್ವನಾದರೂ ಅದ್ಯ= ಈಗ ತಸ್ಮಾತ್ ತಪಸಃ= ಆ ಸೌಭ ವಿಮಾನಪ್ರಾಪ್ತಿಗಾಗಿ ಮಾಡಿರುವ ತಪಸ್ಸಿನದೆಸೆಯಿಂದ ನಿವೃತ್ತಸ್ಸನ್= ಹಿಂತಿರುಗಿದವನಾಗಿ ಅಂದರೆ ತಪಸ್ಸಿನಿಂದ ಸಂತುಷ್ಟನಾದ ರುದ್ರನಿಂದ ವಿಮಾನವನ್ನು ಹೊಂದಿ ಹಿಂತಿರುಗಿ ಬಂದವನಾಗಿ ಜರಾಸುತಸ್ಯ= ಜರಾಸಂಧನಿಗೆ ಅನುಮತೇಸ್ಥಿತಃ= ಅನುಕೂಲನಾಗಿರುವವನು. ಸಃ= ಆ ಸಾಲ್ವನು ಹಿ= ಯಾವ ಕಾರಣದಿಂದ ಅನನ್ಯವಧ್ಯಃ= ನಿನ್ನಿಂದ ಹೊರತು ಬೇರೆಯವರಿಂದ ಕೊಲ್ಲಲಶಕ್ಯನೋ ತತಃ= ಆ ಕಾರಣದಿಂದ ಭವತಾ= ನಿನ್ನಿಂದ ಅದ್ಯ= ಈ ಕೃಷ್ಣಾವತಾರದಲ್ಲಿ ವಧ್ಯಃ= ಕೊಲ್ಲಲು ಯೋಗ್ಯನು. ಅಥೋ= ಅನಂತರ ಸಃ= ಆ ಸಾಲ್ವನು ಉಗ್ರೇತಮಸಿ= ಕ್ರೂರನಾದ ಅಂಧಂತಮಸ್ಸಿನಲ್ಲಿ ಪಾತನೀಯಃ= ಹಾಕಲು ಯೋಗ್ಯನು ॥ ೨೧೭ ॥

ಯೋ ಬಾಣಮಾವಿಶ್ಯ ಮಹಾಸುರೋಽಭೂತ್ ಸ್ಥಿತಃ ಸ ನಾಮ್ನಾ ಪ್ರಥಿತೋಽಪಿ ಬಾಣಃ ।
ಸಕೀಚಕೋ ನಾಮ ಬಭೂವ ರುದ್ರವರಾದವಧ್ಯಃ ಸ ತಮಃ ಪ್ರವೇಶ್ಯಃ ॥ ೨೧೮ ॥

ಯಃ = ಯಾವಾತನು ಬಾಣಂ= ಕರ್ಮದೇವತೆಯಾದ ಬಲಿಚಕ್ರವರ್ತಿಯ ಮಗನಾದ ಬಾಣನೆಂಬ ದೇವತೆಯನ್ನು ಆವಿಶ್ಯ = ಪ್ರವೇಶಿಸಿ ಸ ನಾಮ್ನಾ = ಸಮಾನವಾದ ನಾಮದಿಂದ ಅಂದರೆ ಬಾಣನೆಂಬ ಹೆಸರಿನಿಂದ ಪ್ರಥಿತಃ = ಪ್ರಸಿದ್ಧನಾದ ಮಹಾಸುರಃ = ಶ್ರೇಷ್ಠ ಅಸುರನು ಅಭೂತ್ = ಇದ್ದನೋ ಸೋಽಪಿ ಬಾಣಃ = ಆ ಅಸುರನಾದ ಬಾಣನು ಕೀಚಕಃ = ಕೀಚಕನೆಂದು ನಾಮ್ನಾ= ಹೆಸರಿನಿಂದ ಪ್ರಸಿದ್ಧನು ಬಭೂವ= ಆದನು. ಸಃ= ಆ ಕೀಚಕನು ರುದ್ರವರಾತ್ = ರುದ್ರದೇವರಿಂದ ಅವಧ್ಯಃ = ಯಾರಿಂದಲೂ ಕೊಲ್ಲಲಶಕ್ಯನು. ಸಃ = ಅವನು ತಮಃ = ತಮಸ್ಸನ್ನು ಪ್ರವೇಶ್ಯ = ಹೊಂದಲು ಯೋಗ್ಯನು. ॥ ೨೧೮ ॥

ಅತಸ್ತ್ವಯಾ ಭುನ್ಯತೀರ್ಯ ದೇವಕಾರ್ಯಾಣಿ ಕಾರ್ಯಾಖಿಲಾನೀವ ।
ತ್ವಮೇವ ದೇವೇಶ ಗತಿಃ ಸುರಾಣಾಂ ಬ್ರಹ್ಮೇಶಶಕ್ರೇಂದು ಯಮಾದಿಕಾನಾಮ್ ॥ ೨೧೯ ॥

ಹೇ ದೇವ = ಎಲೋ ಕ್ರೀಡಾದಿ ಗುಣವಿಶಿಷ್ಟನಾದ ಹರಿಯೇ! ಅತಃ = ಆದ್ದರಿಂದ ಭುವಿ = ಭೂಲೋಕದಲ್ಲಿ ಅವತೀರ್ಯ= ಅವತಾರ ಮಾಡಿ ಅಖಿಲಾನಿ= ಎಲ್ಲಾ ಕಾರ್ಯಾಣಿ= ದೇವತೆಗಳಿಗೆ ಮಾಡಲಿಕ್ಕೆ ಯೋಗ್ಯಗಳಾದ ಕರ್ಮಗಳು ತ್ವಯಾ = ನಿನ್ನಿಂದ ಕಾರ್ಯಾಣಿ= ಮಾಡಲು ಯೋಗ್ಯಗಳು (ನಾನೇ ಏಕೆ ಮಾಡಬೇಕು) ಎಂಬುದಕ್ಕೆ ಕಾರಣವನ್ನು ಹೇಳುತ್ತಾರೆ. ಹೇದೇವೇಶ = ಎಲ್ಲಾ ದೇವತೆಗಳ ಸ್ವಾಮಿಯೇ ತ್ವಮೇವ = ನೀನೇ ಬ್ರಹ್ಮೇಶಶಕ್ರೇಂದುಯಮಾದಿಕಾನಾಂ = ಬ್ರಹ್ಮ _ ಚತುರ್ಮುಖನು ಈಶ = ರುದ್ರನು ಶಕ್ರ=ಇಂದ್ರನು ಇಂದ್ರ= ಚಂದ್ರನು, ಯಮಃ= ಯಮನು ಇವರೇ ಆದಿಕಾನಾಂ ಮೊದಲಾಗಿ ಉಳ್ಳ ಸುರಾಣಾಂ= ದೇವತೆಗಳಿಗೆ ಗತಿಃ= ಪ್ರಾಪ್ಯನು (ಇನ್ನೊಬ್ಬನಲ್ಲ) ॥ ೨೧೯ ॥

ತ್ವಮೇವ ನಿತ್ಯೋದಿತ ಪೂರ್ಣಶಕ್ತಿಸ್ತ್ವಮೇವ ನಿತ್ಯೋದಿತ ಪೂರ್ಣಚಿದ್ಘನಃ ।
ತ್ವಮೇವ ನಿತ್ಯೋದಿತ ಪೂರ್ಣಸತ್ಸುಖ ಸ್ತ್ವಾದೃಙ್ನ ಕುತ ಏವತೇಽಧಿಕಃ ॥ ೨೨೦ ॥

ತ್ವಮೇವ=ನೀನೇ ನಿತ್ಯೋದಿತಪೂರ್ಣಶಕ್ತಿಃ=ಯಾವಾಗಲೂ ಅಭಿವ್ಯಕ್ತಗಳಾದ, ಪರಿಪೂರ್ಣಗಳಾದ ಸಾಮರ್ಥ್ಯ
ಗಳುಳ್ಳವನು. ತ್ವಮೇವ=ನೀನೇ ನಿತ್ಯೋದಿತಪೂರ್ಣಚಿದ್ಘನಃ=ಯಾವಾಗಲೂ ಅಭಿವ್ಯಕ್ತವಾದ, ಪರಿಪೂರ್ಣವಾದ ಜ್ಞಾನ
ದಿಂದನಿಬಿಡನು ತ್ವಮೇವ=ನೀನೇ ನಿತ್ಯೋದಿತ ಪೂರ್ಣಸತ್ಸುಖಃ=ಯಾವಾಗಲೂ ಅಭಿವ್ಯಕ್ತವಾದ, ಪೂರ್ಣವಾದ ದುಃಖ
ಸಂಬಂಧವಿಲ್ಲದ ಆನಂದವುಳ್ಳವನು. ತ್ವಾದೃಕ್=ನಿನಗೆ ಸದೃಶನಾದವನು ಕಶ್ಚಿತ್=ಯಾವೊಬ್ಬನೂ ನ=ಇಲ್ಲ. ತೇಽಧಿಕಃ=
ನಿನ್ನಿಂದ ಉತ್ತಮನು ಕುತಏವ=ಹೇಗೆ ಇದ್ದಾನು. ಇಲ್ಲವೇ ಇಲ್ಲವೆಂದರ್ಥ. ॥ ೨೨೦ ॥

ಇತೀರಿತೋದೇವವರೈರುದಾದರಗುಣಾರ್ಣವೋಽಕ್ಷೋಭ್ಯತಮಾಮೃತಾಕೃತಿಃ ।
ಉತ್ಥಾಯ ತಸ್ಮಾತ್ಪ್ರಯಯಾವನಂತಸೋಮಾರ್ಕಕಾಂತಿದ್ಯುತಿರಿನ್ವಿತೋಽಪುರೈಃ ॥ ೨೨೧ ॥

ಇತಿ=ಈ ರೀತಿಯಾಗಿ ದೇವವರೈಃ=ದೇವಶ್ರೇಷ್ಠರಿಂದ ಈರಿತಃ=ಹೇಳಿಸಿಕೊಳ್ಳಲ್ಪಟ್ಟ ಉದಾರಗುಣಾರ್ಣವಃ=
ಉತ್ಕೃಷ್ಟಗಳಾದ ಜ್ಞಾನಾನಂದಾದಿಗುಣಗಳಿಂದ ಸಮುದ್ರದಂತಿರುವ ಅಕ್ಷೋಭ್ಯತಮಾಮೃತಾಕೃತಿಃ=ಯಾರಿಂದಲೂ ಕಳವ
ಪಡಿಸಲು ಅಶಕ್ಯವಾದ ಮರಣರಹಿತವಾದ ದೇಹವುಳ್ಳ ಅನಂತಸೋಮಾರ್ಕಕಾಂತಿದ್ಯುತಿಃ = ಅಪರಿಮಿತ ಚಂದ್ರ ಮತ್ತು
ಸೂರ್ಯನಂತೆ ಕಾಂತಿ ಮತ್ತು ಪ್ರಕಾಶವೂ ಇವುಗಳುಳ್ಳ ಹರಿಯು ತಸ್ಮಾತ್=ಆ ಶೇಷವಶರೀರದ್ದೆಸೆಯಿಂದ
ಉತ್ಥಾಯ=ಎದ್ದು ಅಮರೈಃ=ದೇವತೆಗಳಿಂದ ಅನ್ವಿತಃಸನ್=ಕೂಡಿದವನಾಗಿ ಪ್ರಯಯೌ=ಮೇರು ಪರ್ವತಕ್ಕೆ
ಹೋದನು ॥ ೨೨೧ ॥

ಸ ಮೇರುಮೂಪ್ಯಾಹ ಚತುರ್ಮುಖಂ ಪ್ರಭುರ್ಯತ್ರ ತ್ವಯೋಕ್ತೋಽಸ್ಮಿಹ ತತ್ರ ಸರ್ವಥಾ ।
ಪ್ರಾದುರ್ಭವಿಷ್ಯೇ ಭವತೋ ಹಿ ಭಕ್ತ್ಯಾ ವಶಸ್ತ್ವಾಹಂ ಸ್ವವಶೋಽಪಿ ಚೇಚ್ಛಯಾ ॥ ೨೨೨ ॥

ಪ್ರಭುಃ=ಸಮರ್ಥನಾದ ಸಃ=ಆ ಪರಮಾತ್ಮನು ಮೇರುಂ= ಮೇರುಪರ್ವತವನ್ನು ಆಪ್ಯ=ಹೊಂದಿ ಚತುರ್ಮುಖಂ=
ಚತುರ್ಮುಖನನ್ನು ಕುರಿತು ಯತ್ರ = ಯಾವ ಕುಲದಲ್ಲಿ ಅವತಾರ ಮಾಡು ಎಂದು ತ್ವಯಾ=ನಿನ್ನಿಂದ ಉಕ್ತೋಸ್ಮಿ=ಹೇಳಿ
ಕೊಳ್ಳಲ್ಪಡುವೆನೋ ತತ್ರ=ಅಲ್ಲಿ ಸರ್ವದಾ=ಅವಶ್ಯಕವಾಗಿ ಪ್ರಾದುರ್ಭವಿಷ್ಯೇ=ಅವತಾರ ಮಾಡುವೆನು. ಹಿ=ಪರಮಾತ್ಮನಿಗೆ
ಹುಟ್ಟು ಇಲ್ಲವೆಂದು ಪ್ರಮಾಣಪ್ರಸಿದ್ಧವು. ಅಹಂ = ನಾನುಸ್ವವಶೋಪಿ=ಸ್ವತಂತ್ರನಾದರೂ ಕೂಡ ಭವತಃ=ನಿನ್ನ ಭಕ್ತ್ಯಾ=ಭಕ್ತಿ
ಯಿಂದಲೂ ಇಚ್ಛಯಾ ಚ=ಸನ್ನ ಇಚ್ಛೆಯಿಂದಲೂ ಕೂಡ ತವ=ನಿನ್ನ ವಶೇ ಇವ=ಅಧೀನನಂತೆ ಇರುವೆನು. ॥ ೨೨೨ ॥

ಬ್ರಹ್ಮಾ ಪ್ರಣಮ್ಯಾಹ ತವಾತ್ಮಕಾರಣಂ ಪ್ರಾದಾಂ ಪುರಾಹಂ ವರುಣಾಯ ಗಾಃ ಶುಭಾಃ ।
ಜಹಾರ ತಾಸ್ತಸ್ಯ ಪಿತಾಮೃತಸ್ರವಾಃ ಸ ಕಶ್ಯಪೋ ದ್ರಾಕ್ಸಹಸಾತಿ ಗರ್ವಿತಃ ॥ ೨೨೩ ॥

ಬ್ರಹ್ಮಾ=ಚತುರ್ಮುಖನು ಆತ್ಮಕಾರಣಂ=ತನಗೆ ಕಾರಣನಾದ ತಂ=ಆ ಹರಿಯನ್ನು ಪ್ರಣಮ್ಯ=ನಮಸ್ಕರಿ
ಪ್ರಾಹ=ಹೇಳಿದನು. ಪುರಾ=ಹಿಂದೆ ಅಹಂ=ನಾನು ವರುಣಾಯ=ವರುಣನಿಗೋಸ್ಕರ ಶುಭಾಃ=ಶೋಭನಗಳಾದ ಗಾಃ=
ದನಗಳನ್ನು ಪ್ರಾದಾಂ=ಕೊಟ್ಟಿರುವೆನು. ತಸ್ಯ=ಆ ವರುಣನ ಪಿತಾ=ತಂದೆಯಾದ ಸಃ=ದೇವತೆಗಳಿಗೆ ತಂದೆಯೆಂದು ಪ್ರಸಿದ್ಧ
ನಾದ ಕಶ್ಯಪಃ=ಕಶ್ಯಪನು ಸಹಸಾ ತಾನು ತಂದೆಯೆಂಬ ಬಲದಿಂದ ಅತಿಗರ್ವಿತಃಸನ್=ಅತ್ಯಂತ ಗರ್ವ ಉಳ್ಳವನಾಗಿ ದ್ರಾಕ್=
ಕೂಡಲೇ ಅಮೃತಸ್ರವಾಃ=ಅಮೃತವನ್ನು ಕರೆಯುತಕ್ಕ ತಾಃ=ಆ ನಾನು ಕೊಟ್ಟ ಗೋವುಗಳನ್ನು ಜಹಾರ=
ಅಪಹರಿಸಿದನು. ॥ ೨೨೩ ॥

ಮೂತ್ಪಾತ್ವನಿತ್ಯಾಚ ತಥಾ ಸುರಭ್ಯಾ ಪ್ರಚೋದಿತೇನೈವ ಹೃತಾಸುತಾಸು ।
ಶ್ರುತ್ವಾ ಜಲೇಶಾತ್ ಸಮುಯಾಭಿಶಪ್ತಃ ಕ್ಷತ್ರೇಷು ಗೋಜೀವನಕೋಭವೇತಿ ॥ ೨೨೪ ॥

ಮಾತ್ರಾ=ವರುಣನ ತಾಯಿಯಾದ ಅದಿತ್ಯಾ ಚ=ಅದಿತಿಯಿಂದಲೂ ತಥಾ=ಹಾಗೆಯೇ ಸುರಭ್ಯಾ ಚ=ತಾಯಿಯಾದ ಸುರಭಿಯಿಂದಲೂ ಪ್ರಚೋದಿತೇನೈವ=ಪ್ರೇರಿಸಿಕೊಳ್ಳಲ್ಪಟ್ಟವನೇ ಆದ ಕಶ್ಯಪನಿಂದ ತಾಸು=ಆ ಗೋವುಗಳು ಹೃತಾಸು ಸತೀಷು=ಅಪಹರಿಸಿಕೊಳ್ಳಲ್ಪಡುತ್ತಿರಲು ಜಲೇಶಾತ್ = ನೀರಿಗೆ ಒಡೆಯನಾದ ವರುಣನಿಂದ ಶ್ರುತ್ವಾ=ಕಶ್ಯಪನು ಮಾಡಿದ ಕರ್ಮವನ್ನು ಕೇಳಿ ಮಯಾ=ನನ್ನಿಂದ ಸಃ=ಆ ಕಶ್ಯಪನು ಕ್ಷತ್ರೇಷು=ಕ್ಷತ್ರಿಯರಲ್ಲಿ ಗೋಜೀವಕಃ=ಗೋವುಗಳಿಂದ ಜೀವನೋಪಾಯ ಉಳ್ಳವನು. ಭವ=ಆಗು ಇತಿ=ಎಂಬುದಾಗಿ ಶಪ್ತಃ=ಶಪಿಸಲ್ಪಟ್ಟನು. ॥ ೨೨೪ ॥

ಶೂರಾ ತ್ವಜಾತೋ ಬಹುಗೋಧನಾಢ್ಯೋ ಭೂಮೌ ಯಮಾಹುರ್ವಸು ದೇವ ಇತ್ಯಪಿ ।
ತಸ್ಯೈವ ಭಾರ್ಯಾ ತ್ವದಿತಿಶ್ಚ ದೇವಕೀ ಬಭೂವಚಾನ್ಯಾ ಸುರಭಿಶ್ಚ ರೋಹಿಣೀ ॥ ೨೨೫ ॥

ಸಃ=ಆ ಕಶ್ಯಪನು ಶೂರಾತ್=ಶೂರನೆಂಬ ಯಾದವನಿಂದ ಬಹುಗೋಧನಾಢ್ಯಃಸನ್=ಬಹಳ ಗೋವುಗಳೆಂಬ ಧನಗಳಿಂದ ಸಂಪನ್ನನಾಗಿ ಜಾತಃ=ಹುಟ್ಟಿರುವನು. ಭೂಮೌ=ಭೂತಲದಲ್ಲಿ ಯಂ=ಯಾವ ಶೂರ ಪುತ್ರನನ್ನು ವಸುದೇವ ಇತಿ=ವಸು. ಗೋರೂಪವಾದ ಧನಗಳಿಗೆ ದೇವಃ = ಸ್ವಾಮಿಯಾದ ರಿಂದ ವಸುದೇವನೆಂದು ಆಹುಃ=ಜನರು ಹೇಳುತ್ತಾರೋ ತಸ್ಯೈವ=ಆ ಕಶ್ಯಪನಿಗೇ ಭಾರ್ಯಾ = ಹೆಂಡತಿಯಾದ್ದ ಅದಿತಿಶ್ಚ=ಅದಿತಿಯೂ ಕೂಡಾ ದೇವಕೀ ಬಭೂವ=ದೇವಕಿ ಎಂಬ ಹೆಸರಿನಿಂದ ಹುಟ್ಟಿದಳು. ಅನ್ಯಾ=ಎರಡನೇ ಹೆಂಡತಿಯಾದ ಸುರಭಿಶ್ಚ=ಸುರಭಿ ಎಂಬವಳೂ ಕೂಡ ರೋಹಿಣೀ ಬಭೂವ=ರೋಹಿಣಿಯೆಂಬ ಹೆಸರಿನಿಂದ ಹುಟ್ಟಿದಳು. ॥ ೨೨೫ ॥

ತತ್ತ್ವಂ ಭವಸ್ವಾಶು ಚ ದೇವಕೀ ಸುತಸ್ತಥೈವ ಯೋ ದ್ರೋಣನಾಮಾ ವಸುಃ ಸಃ ।
ಸ್ವಭಾರ್ಯಯಾಧರಯಾ ತ್ವತ್ಪಿತೃತ್ವಂ ಸ್ಯಾಪ್ತುಂ ತಪಸ್ತೇಪ ಉದಾರ ಮಾನಸಃ ॥ ೨೨೬ ॥

ತತ್=ಆ ಕಾರಣದಿಂದ ತ್ವಂ=ನೀನು ಆಶು=ಬೇಗನೇ ದೇವಕೀಸುತಃ=ದೇವಕಿಯ ಮಗನು ಭವ=ಆಗು. ತಥೈವ=ಹೇಗೆ ದೇವಕೀ ಪುತ್ರತ್ವದಲ್ಲಿ ಕಾರಣವಿದೆಯೋ ಹಾಗೆಯೇ ಬೇರೆ ಕಾರಣವೂ ಇದೆ. ಪೂರ್ವಂ=ಹಿಂದೆ ದ್ರೋಣನಾಮಾ = ದ್ರೋಣನೆಂದು ಹೆಸರುಳ್ಳ ಯಃ=ಯಾವ ವಸುಃ=ವಸು ಎಂಬವನಿರುವನೋ ಸಃ=ಅವನು ಸ್ವಭಾರ್ಯಯಾ=ತನ್ನ ಹೆಂಡತಿಯಾದ ಧರಯಾ=ಧರಾ ಎಂಬವಳಿಂದ ಸಹ=ಕೂಡಿಕೊಂಡು ತ್ವತ್ಪಿತೃತ್ವಂ=ನಿನ್ನ ಜನಕತ್ವವನ್ನು ಪ್ರಾಪ್ತುಂ = ಹೊಂದುವುದಕ್ಕೋಸ್ಕರ ಉದಾರಮಾನಸಃಸನ್=ಉತ್ಕೃಷ್ಟವಾದ ಅಂತಃಕರಣವುಳ್ಳವನಾಗಿ ತಪಃ=ತನ್ನ ಸಂಬಂಧಿಯಾದ ತಪಸ್ಸನ್ನು ತೇಪೇ=ಮಾಡಿದನು. ॥ ೨೨೬ ॥

ತಸ್ಮೈವರಃ ಸಮಯಾ ಸನ್ನಿಸೃಷ್ಟಃ ಸ ಚಾಸ ನಂದಾಖ್ಯ ಉತಾಸ್ಯಭಾರ್ಯಾ ।
ನಾಮ್ನಾ ಯಶೋದಾ ಸಚ ಶೂರತಾತ ಸುತಸ್ಯ ವೈಶ್ಯಾಪ್ರಬವೋಽಥಗೋಪಃ ॥ ೨೨೭ ॥

ತಸ್ಮೈ=ಆ ದ್ರೋಣನೆಂಬ ವಸುವಿಗೋಸ್ಕರ ಮಯಾ=ನನ್ನಿಂದ ಸ ವರಃ=ಆ ನಿನ್ನ ಪಿತೃತ್ವ ಪ್ರಾಪ್ತಿ ರೂಪವಾದ ವರವು ಸನ್ನಿಸೃಷ್ಟಃ=ಕೊಡಲ್ಪಟ್ಟಿದೆ. ಸ ಚ=ಆ ದ್ರೋಣ ನಾಮಕ ವಸುವು ನಂದಾಖ್ಯಃ=ನಂದಗೋಪನೆಂದು ಹೆಸರುಳ್ಳವನು ಆಸ = ಆದನು. ಉತ=ಆ ನಂದನು ಹುಟ್ಟಿದ ಮೇಲೆ ಅಸ್ಯ=ಈ ದ್ರೋಣ ವಸುವಿನ ಭಾರ್ಯಾ=ಹೆಂಡತಿಯಾದ ಧರಾ ದೇವಿಯು ನಾಮ್ನಾ=ಹೆಸರಿನಿಂದ ಯಶೋದಾ ಆಸ=ಯಶೋದೆ ಎಂದಾದಳು.(ಯಶೋಡೆ ಎಂಬ ಹೆಸರಿನಿಂದ ಹುಟ್ಟಿದಳು.) ಸಚ=ಆ ನಂದನಾದರೂ ।ಶೂರತಾತಸುತಸ್ಯ=ಶೂರನ ತಂಡೆಯ ಮಗನಾದ ಶೂರನಿಂದ ಯತಃ=ಯಾವ ಕಾರಣದಿಂದ ವೈಶ್ಯಾ ಪ್ರಬಾವಃ=ವಿವಾಹ ಧರ್ಮದಿಂದ ಸ್ವೀಕರಿಸಲ್ಪಟ್ಟ ವೈಶ್ಯ ಸ್ತ್ರೀ ಪುತ್ರನಾದ್ದರಿಂದಲೇ ಗೋಪಃ=ಗೋ ಪಾಲಕನು ಆದನು. ॥ ೨೨೭ ॥

ಅವಃ– ನೀನು ದೇವಕಿಯ ಮಗನಾಗು ಎಂಬುದಕ್ಕೆ ಕಾರಣವನ್ನು ಸ್ಪಷ್ಟ ಪಡಿಸುತ್ತಾ ವಸುದೇವ ನಂದ ಗೋಪರಿಗೆ ಕೃಷ್ಣ ಪಿತೃತ್ವವನ್ನು ಕೂಡಿಸುತ್ತಾರೆ.

ತೌ ದೇವಕೀ ವಸುದೇವೌ ಚ ತೇಪತುಸ್ತಪಸ್ವದೀಯಂ ಸುತವಿಚ್ಛಯಾನೌ ।
ತ್ವಾಮೇವ ತಸ್ಮಾತ್ಕಥಮುಂ ಪ್ರದರ್ತ್ಯ ತತ್ರ ಸ್ವರೂಪಂ ಹಿ ತತೋ ವ್ರಜಂ ವ್ರಜ ॥ ೨೨೮ ॥

ತೌ ದೇವಕೀವಸುದೇವೌ=ಆ ವಸುದೇವ ದೇವಕಿಯರು ತ್ವಾಮೇವ=ನಿನ್ನನ್ನೇ ಸುತಂ=ಮಗನನ್ನಾಗಿ ಇಚ್ಛಮಾನೌ ಸಂತೌ=ಇಚ್ಛಿಸುವವರಾಗಿ ತ್ವದೀಯಂ=ನಿನ್ನ ವಿಷಯಕವಾದ ತಪಃ=ತಪಸ್ಸನ್ನು ತೇಪತುಃ ಮಾಡಿದರು. ತಸ್ಮಾತ್= ಆದ್ದರಿಂದ ತ್ವಂ= ನೀನು ಪ್ರಥಮಂ= ಮೊದಲು ತತ್ರ= ನಿನ್ನ ಅವತಾರಾನಂತರ ವ್ರಜಂ= ನಂದಗೋಪನ ಗೋಷ್ಠವನ್ನು ಕುರಿತೂ ವ್ರಜ= ಹೋಗು.ಹಿ= ಪರಮಾತ್ಮನಿಗೆ ತನ್ನ ರೂಪವನ್ನು ಪ್ರಕಟಿಸುವುದೇ ಉತ್ಪತ್ತಿಯು ಬೇರೆ ಅಲ್ಲವೆಂದು ಪ್ರಸಿದ್ಧವು ॥೨೨೮॥

ಇತೀರಿತಃ ಸೋಽಬ್ಜಭವೇನ ಕೇಶವಸ್ತಥೇತಿ ಚೋಕ್ತ್ವಾಪುನರಾಹದೇವತಾಃ ।
ಸರ್ವೇ ಭವಂತೋ ಭವತಾಶುಮಾನುಷೇ ಕಾರ್ಯಾನುಸಾರೇಣ ಯಥಾನುರೂಪತಃ ॥ ೨೨೯ ॥

ಇತಿ = ಈ ರೀತಿಯಾಗಿ ಅಬ್ಜಭವೇನ = ಚತುರ್ಮುಖನಿಂದ ಈರಿತಃ ಸ = ಹೇಳಿಸಿಕೊಳ್ಳಲ್ಪಟ್ಟ ಕೇಶವಃ = ಆ ನಾರಾಯಣನು ತಥೇತಿ= ಹಾಗೆಯೇ ಆಗಲಿ ಎಂದು ಉಕ್ತ್ವಾ ಹೇಳಿ ಪುನಃ=ಮತ್ತು ಭವಂತಃ ಸರ್ವೇ=ನೀವೆಲ್ಲರೂ ಆಶು= ಬೇಗನೇ ಮಾನುಷೇ=ಮನುಷ್ಯ ಲೋಕದಲ್ಲಿ ಕಾರ್ಯಾನುಸಾರೇಣ=ಕುಬೇರನ ಸುಪ್ರತೀಕವೆಂಬ ಆನೆಯ ಪ್ರಾಪ್ತಿಯೇ ಮೊದಲಾದ ಕಾರ್ಯಕ್ಕೆ ಅನುಕೂಲವಾಗಿ ಯಥಾನುರೂಪತಃ=ನಾಲ್ಕು ಬ್ರಾಹ್ಮಣಾದಿ ವರ್ಣಗಳಲ್ಲಿ ಯೋಗ್ಯತಾನುಸಾರವಾಗಿ ಯಾರು ಯಾವ ವರ್ಣದಲ್ಲಿ ಹುಟ್ಟಲು ಯೋಗ್ಯರೋ ತಥಾ=ಹಾಗೆಯೇ ಆವಾವ ವರ್ಣಗಳಲ್ಲಿ ಭವತ=ಹುಟ್ಟಿರಿ ಇತಿ= ಎಂದು ದೇವತಾಃ=ದೇವತೆಗಳನ್ನು (ಕುರಿತು) ಆಹ=ಹೇಳಿದನು. ॥ ೨೨೯ ॥

ಅಥಾವತೀರ್ಣಾಃ ಸಕಲಾಶ್ಚದೇವತಾ ಯಥಾಯಥೈವಾಹ ಹರಿಸ್ತಥಾತಥಾ ।
ವಿತ್ತೇಶ್ವರಃ ಪೂರ್ವಮಭೂದ್ಧಿ ಭೌಮಾದ್ಧರೇಃ ಸುತತ್ವೇಪಿ ತದಿಚ್ಛಯಾಽಸುರಾತ್ ॥ ೨೩೦ ॥

ಅಥ=ಹರಿಯು ಅಪ್ಪಣೆ ಮಾಡಿದ ನಂತರ ಹರಿಃ = ಶ್ರೀನಾರಾಯಣನು ಯಥಾ ಯಥಾ ಆಹ=ಹೇಗೆ ಹೇಗೆ ಹೇಳಿರುವನೋ ತಥಾ ತಥೈವ=ಶ್ರೀಹರಿಯು ಹೇಳಿರುವ ರೀತಿಯಿಂದಲೇ ಸಕಲಾ ದೇವತಾಶ್ಚ =ಎಲ್ಲಾ ದೇವತೆಗಳೂ ಕೂಡ ಅವತೀರ್ಣಾಃ = ಅವತರಿಸಿದರು ಹರೇಃ=ವರಾಹ ರೂಪಿಯಾದ ಪರಮಾತ್ಮನ ಸುತತ್ವೇಪಿ=ಪುತ್ರತ್ವವಿದ್ದರೂ ಕೂಡ ಆಸುರಾತ್= ಅಸುರನಾದ ಭೌಮಾತ್=ಭೂಮಿ ಪುತ್ರನಾದ ನರಕಾಸುರನ ದೆಸೆಯಿಂದ ವಿತ್ತೇಶ್ವರಃ=ಧನಾಧಿಪತಿಯಾದ ಕುಬೇರನು ತದಿಚ್ಛಯೈವ=ಪರಮಾತ್ಮನ ಇಚ್ಛೆಯಿಂದಲೇ ಪೂರ್ವಂ=ಪರಮಾತ್ಮನ ಆ ಜ್ಞಾನ ನಂತರ ಹುಟ್ಟಿದ ದೇವತೆಗಳಿಗಿಂತ ಮೊದಲು ಅಭೂತ್=ಹುಟ್ಟಿದನು. ಹಿ=(ಶಬ್ದವು) ಅಸುರನಿಂದ ಹುಟ್ಟಲು ಸುಪ್ರತೀಕವೆಂಬ ಆನೆಯು ಪ್ರಾಪ್ತಿರೂಪ ಪ್ರಯೋಜನವನ್ನು ಸೂಚಿಸುತ್ತದೆ. ॥ ೨೩೦ ॥

ಪಾಪೇನ ತೇನಾಪಹೃತೋಹಿ ಹಸ್ತೀ ಶಿವಪ್ರದತ್ತಃ ಸುಪ್ರತೀಕಾಭಿಧಾನಃ ।
ತದರ್ಥಮೇವಾಸ್ಯ ಸುತೋಽಭಿಜಾತೋ ಧನೇಶ್ವರೋ ಭಗದತ್ತಾ ಭಿಧಾನಃ ॥ ೨೩೧ ॥

ಪಾಪೇನ= ಪಾಪಿಷ್ಠನಾನ ತೇನ=ಆ ನರಕಾಸುರನಿಂದ ಶಿವಪ್ರದತ್ತಃ=ರುದ್ರನಿಂದ ಕೊಡಲ್ಪಟ್ಟ ಸುಪ್ರತೀಕಾಭಿಧಾನಃ= ಸುಪ್ರತೀಕವೆಂದು ಹೆಸರುಳ್ಳ ಹಸ್ತೀ=ಕುಬೇರನ ಆನೆಯು ಅಪಹೃತಃ=ಅಪಹರಿಸಲ್ಪಟ್ಟಿತು, ಹಿ=ಪ್ರಸಿದ್ಧವು. ತದರ್ಥಮೇವ= ಆ ಸುಪತ್ರೀಕವೆಂಬ ಆನಗೋಸ್ಕರವೇ ಧನೇಶ್ವರಃ=ವಿತ್ತ ಪತಿಯಾದ ಕುಬೇರನು ಭಗದತ್ತಾಭಿಧಾನಃಸನ್=ಭಗದತ್ತನೆಂದು ಹೆಸರುಳ್ಳವನಾಗಿ ಅಸ್ಯ=ಈ ನರಕಾಸುರನ ಸುತಸ್ಸನ್= ಮಗನಾಗಿ ಅಭಿಜಾತನಃ= ಹುಟ್ಟಿದನು, ॥ ೨೩೧ ॥

ಮಹಾಸುರಸ್ಯಾಂಶಯುತಃ ಸ ಏವ ರುದ್ರಾವೇಶಾದ್ಬಲವಾನಸ್ತ್ರವಾಂಶ್ಚ ।
ಶಿಷ್ಯೋ ಮಹೇಂದ್ರಸ್ಯ ಹತೇ ಬಭೂವ ಕಾಲೇ ಸ್ವಧರ್ಮಾಭಿರತಶ್ಚ ನಿತ್ಯಮ್ ॥ ೨೩೨ ॥

ಸಃ = ಆ ಭಗದತ್ತನು ಮಹಾಸುರಸ್ಯ = ಬಾಷ್ಕಲವೆಂದು ಹೆಸರುಳ್ಳ ದೊಡ್ಡ ಅಸುರನ ಅಂಶಯುತಃ= ಕಲಿಯಿಂದ ಕೂಡಿದವನು ರುದ್ರಾವೇಶಾತ್ = ರುದ್ರ ದೇವರ ಸನ್ನಿಧಾನ ನಿಮಿತ್ತದಿಂದ ಬಲವಾನ್ = ಬಲಿಷ್ಠನು ಮಹೇಂದ್ರಸ್ಯ = ದೇವೇಂದ್ರನ ಶಿಷ್ಯಃ = ಅಂತೇ ವಾಸಿಯು ಅಸ್ತ್ರವಾಂಶ್ಚ = ಆದ್ದರಿಂದ ಅಸ್ತ್ರವನ್ನು ತಿಳಿದನು. ತಾತೇ = ತಂದೆಯಾದ ನರಕನು ಹತೇಸತಿ = ಸಾಯುತ್ತಿರಲು ನಿತ್ಯಂ = ಯಾವಾಗಲೂ ಸ್ವಧರ್ಮಾಭಿರತಃ = ದೇವತೆಗಳ ಅವತಾರ ರೂಪಗಳಿಗೆ ಯೋಗ್ಯ

ಗಳಾದ ಧರ್ಮಾಚರಣೆಯಲ್ಲಿಯೇ ಅತ್ಯಂತ ಆಸಕ್ತನು ಬಭೂವ=ಆದನು. (ತಂದೆಯು ಸತ್ತ ನಂತರ ಅಸುರಾವೇಶವು ನಷ್ಟವಾಯಿತು.) ॥ ೨೩೨ ॥

ಅಭೂಚ್ಛಿನಿರ್ನಾಮ ಯದುಪ್ರವೀರಸ್ತಸ್ಯಾತ್ಮಜಃ ಸತ್ಯಕ ಆಸ ತಸ್ಮಾತ್ ॥
ಕೃಷ್ಣಃ ಪಕ್ಷೋ ಯುಯುಧಾನಾಭಿಧೇಯೋ ಗರುತ್ಮತೋಂಶೇನ ಯುತೋ ಬಭೂವ ॥ ೨೩೩ ॥

ಶಿನಿರ್ನಾಮ = ಶಿನಿಯೆಂದು ಪ್ರಸಿದ್ಧನಾದ ಯದುಪ್ರವೀರಃ = ಯಾದವ ಶ್ರೇಷ್ಠನು ಅಭೂತ್ = ಇದ್ದನು. ತಸ್ಯ = ಆ ಶಿನಿಗೆ ಸತ್ಯಕಃ = ಸತ್ಯಕನೆಂಬ ಆತ್ಮಜಃ = ಮಗನು ಆಸ = ಇದ್ದನು ತಸ್ಮಾತ್ = ಆ ಸತ್ಯಕನ ದೆಸೆಯಿಂದ ಕೃಷ್ಣಃ ಪಕ್ಷಃ = ಕೃಷ್ಣ ಪಕ್ಷಕ್ಕೆ ಅಭಿಮಾನಿ ದೇವತೆಯು ಗರುತ್ಮತಃ = ಗರುಡನ ಅಂಶಯುಂಶಃ = ಆವೇಶದಿಂದ ಕೂಡಿದ ಯುಂಯುಂಧಾನಾಭಿಧೇಯಃ = ಯುಯುಧಾನನೆಂದು ಹೆಸರುಳ್ಳವನು ಬಭೂವ = ಹುಟ್ಟಿದನು. ॥ ೨೩೩ ॥

ಯುಃ ಸಂವಹೋ ನಾಮ ಮರುತ್ತದಂಶಶ್ಚಕ್ರಸ್ಯ ವಿಷ್ಣೋಶ್ಚ ಬಭೂವ ತಸ್ಮಿನ್ ।
ಯದುಷ್ವ ಭೂದ್ಧೃದಿಕೋ ಭೋಜವಂಶೇ ಸಿತಃ ಪಕ್ಷಸ್ತಸ್ಯ ಸುತೋ ಬಭೂವ ॥ ೨೩೪ ॥

ತಸ್ಮಿನ್= ಆಯುಂಯುಂಧಾನನಲ್ಲಿ ಸಂವಹೋನಾಮ= ಸಂವಹನೆಂದು ಪ್ರಸಿದ್ಧನಾದ ಯುಃ= ಯಾವ ಮರುತ್ = ವಾಯುವೋ ತದಂಶಃ= ಆ ಸಂವಹನ ಅಂಶವೂ ಚಕ್ರಸ್ಯ= ಸುದರ್ಶನಾಭಿಮಾನಿಯಾದ ಕಾಮನ ಅಂಶವೂ ವಿಷ್ಣೋಶ್ಚ= ಪರಮಾತ್ಮನ ಅಂಶವೂ ಬಭೂವ= ಇತ್ತು. ಯದುಷು= ಯಾದವರಲ್ಲಿ ಭೋಜವಂಶೇ= ಭೋಜವೆಂಬ ಕುಲದಲ್ಲಿ ಹೃದಿಕಃ= ಹೃದಿಕನೆಂಬವನು. ಅಭೂತ್= ಇದ್ದನು. ತಸ್ಯ= ಆ ಹೃದಿಕನಿಗೆ ಸಿತಃ ಪಕ್ಷಃ= ಶುಕ್ಲ ಪಕ್ಷಕ್ಕೆ ಅಭಿಮಾನಿಯಾದ ದೇವತೆಯಂ ಸುತಃ= ಮಗನು ಬಭೂವ= ಆದನು. ॥ ೨೩೪ ॥

ಸಪಾಂಚಜನ್ಯಾಂಶಯುತೋ ಮರುತ್ಸು ತಥಾಂಶಯುಕ್ತ ಪ್ರವಹಸ್ಯವೀರಃ ।
~~**ನಾಮಾಸ್ಯ ಚಾಭೂತ್ಕೃತವರ್ಮೇತ್ಯಥಾನ್ಯೇಯೇಯಾದವ ದಾಸ್ತೇಽಪಿ ಸುರಾಸ್ತ್ಸಗೋಪಾಃ ॥ ೨೩೫ ॥~~

ಸಃ= ಆ ಹೃದಿಕನ ಮಗನು ಪಾಂಚಜನ್ಯಾಂಶಯುಂತಃ= ಪರಮಾತ್ಮನ ಶಂಖಕ್ಕೆ ಅಭಿಮಾನಿಯಾದ ಅನಿರುದ್ಧನ ಅಂಶದಿಂದ ಕೂಡಿದವನು. ತಥಾ= ಹಾಗೆಯೇ ಮರುತ್ಸು= ನಲ್ವತ್ತೊಂಬತ್ತು ಮರುತ್ತುಗಳಲ್ಲಿ ಪ್ರವಹಸ್ಯ= ಪ್ರವಹ ವಾಯುವಿನ ಅಂಶಯುಕ್ತನು. ವೀರಃ= ಆರಂಭ ಮಾಡಿದ್ದನ್ನು ಕೊನೆಗಾಣಿಸುವವನು. ಅಸ್ಯ = ಈ ಹೃದಿಕನ ಮಗನಿಗೆ ಕೃತವರ್ಮೇತಿ = ಕೃತವರ್ಮನೆಂಬ ನಾಮಚ = ಹೆಸರು ಅಭೂತ್ = ಆಯಿತು. ಅಥ = ಅನಂತರ ಸಗೋಪಾಃ = ಗೋಪಾಲಕರಿಂದ ಕೂಡಿದ ಅನ್ಯೇ = ಹಿಂದೆ ಹೇಳಿದವರಿಂದ ಇತರರಾದ ಯೇ = ಯಾವ ಯಾದವಾಃ = ಯಾದವರು ಜಾತಾಃ = ಹುಟ್ಟಿರುವರೋ ತೇಪಿ = ಅವರೂ ಕೂಡ ಸುರಾಃ = ದೇವತೆಗಳು ॥ ೨೩೫ ॥

ಯೇ ಪಾಂಡವಾನಾಮಭವನ್ಸಹಾಯಾ ದೇವಾಶ್ಚ ದೇವಾನುಚರಸ್ಸಮಸ್ತಾಃ ।
ಅನ್ಯೇತು ಸರ್ವೇಪ್ಯ ಸುರಾ ಹಿ ಮಧ್ಯಮಾ ಯೇಮಾನುಷಾಸ್ತೇಚಲಬುದ್ಧಿವೃತ್ತಯಃ ॥ ೨೩೬ ॥

ಯೇ = ಯಾರು ಪಾಂಡವಾನಾಂ = ಪಾಂಡು ಪುತ್ರರಿಗೆ ಸಹಾಯಾಃ = ಸಹಾಯವನ್ನು ಮಾಡತಕ್ಕವರೋ ಅಭವನ್ = ಆಗಿರುವರೋ ತೇ ಸಮಸ್ತಾಃ = ಅವರೆಲ್ಲರೂ ದೇವಾಃ = ದೇವತೆಗಳೆ ಅವತಾರ ಭೂತರು ಚ = ಮತ್ತು ದೇವಾನು ಚರಾಃ = ದೇವತೆಗಳನ್ನು ಅನುಸರಿಸಿರುವ ಗಂಧರ್ವರು (ಭೀಷ್ಮ ದ್ರೋಣಾದಿಗಳು ದುರ್ಯೋಧನನಿಗೆ ಸಹಾಯ ಮಾಡಿದರೂ ಮನಸ್ಸಿನಿಂದ ಪಾಂಡವರ ಸಹಾಯಕರಾದ್ದರಿಂದ ಅವರು ದೇವತೆಗಳೇ.)ಅನ್ಯೇ = ಪಾಂಡವರಿಗೆ ವಿರೋಧಿಗಳಾದ ಸರ್ವೇಪಿ = ಎಲ್ಲರೂ ಕೂಡ ಅಸುರಾಃ = ದೈತ್ಯರು ಚಲಬುದ್ಧಿವೃತ್ತಯಃ = ಚಂಚಲವಾದ ಬುದ್ಧಿಯ ವ್ಯಾಪಾರವುಳ್ಳ ಅಂದರೆ ಸಂಶಯಜ್ಞಾನವುಳ್ಳ ಯೇ = ಯಾರು ತೇ = ಅವರು ಮಾನುಷಾಃ = ಮನುಷ್ಯರು. ಮಧ್ಯಮಾಃ = ಉದಾಸೀನರೋ ॥ ೨೩೬ ॥

ಲಿಂಗಂ ಸುರಾಣಾಂ ಹಿ ಪರೈವ ಭಕ್ತಿರ್ವಿಷ್ಣೌ ತದನ್ಯೇಷು ಚ ತತ್ಪ್ರತೀಪತಾ ।
ಅತೋಽತ್ರಯೇಯೇ ಹರಿಭಕ್ತಿ ತತ್ಪರಾಸ್ತೇತೇಸುರಾಸ್ತದ್ಬರಿತಾ ವಿಶೇಷತಃ ।। ೨೩೭ ।।

ವಿಷ್ಣೌ = ನಾರಾಯಣನಲ್ಲಿ ಪರಾಭಕ್ತಿರೇವ = ಸರ್ವೋತ್ತಮವಾದ ಭಕ್ತಿಯೇ ಸುರಾಣಾಂ = ದೇವತೆಗಳ ಲಿಂಗಂ= ಲಕ್ಷಣವು. "ರಯಿ, ಕಯಿ, ಗಯಿ," ಎಂಬ ಧಾತು ವ್ಯಾಖ್ಯಾನದಿಂದ ಸುರ ಶಬ್ದಕ್ಕೆ ಚೆನ್ನಾಗಿ ಗಾನ ಮಾಡತಕ್ಕ ಗಂಧರ್ವರೆಂದು ಅರ್ಥವಾಗುತ್ತದೆ. ಸುರಾಣಾಂ=ಗಂಧರ್ವರಿಗೆ ಸಹ ವಿಷ್ಣುವಿನಲ್ಲಿ ಉತ್ತಮವಾದ ಭಕ್ತಿಯು ಜ್ಞಾಪಕವು ತದನ್ಯೇಷು ಚ = ಆ ದೇವತೆಗಳಿಗೆ ವಿರೋಧಿಗಳಾದ ದೈತ್ಯರಲ್ಲಿ ತತ್ಪ್ರತೀಪತಾ = ಆ ವಿಷ್ಣುವಿನಲ್ಲಿ ದ್ವೇಷವೂ ವಿಷ್ಣುಭಕ್ತರಲ್ಲಿ ದ್ವೇಷವೂ ಲಿಂಗಂ = ಲಕ್ಷಣವು. ಅತಃ = ಈ ಕಾರಣದಿಂದ ಅತ್ರ = ಈ ಕುರು ಪಾಂಡವರ ಸೈನ್ಯಗಳಲ್ಲಿ ಯೇ ಯೇ = ಯಾರು ಯಾರು ಹರಿಭಕ್ತಿತತ್ಪರಾಃ = ಪರಮಾತ್ಮನ ಭಕ್ತಿಯಲ್ಲಿಯೇ ಆಸಕ್ತರಾದ ಧರ್ಮರಾಜ, ಭೀಮ, ಅರ್ಜುನ, ನಕುಲ, ಸಹದೇವ, ದ್ರೋಣ, ಕರ್ಣ, ಭೀಷ್ಮಾದಿಗಳೋ ತೇತೇ = ಅವರೆಲ್ಲರೂ ಸುರಾಃ = ಸಾಕ್ಷಾತ್ ದೇವತೆಗಳು ಯೇ ಯೇ = ಯಾರು ಯಾರು ಹರಿಭಕ್ತಿತತ್ಪರಾಃ = ಪರಮಾತ್ಮನ ಭಕ್ತಿಯಲ್ಲಿ ಆಸಕ್ತರಾದ ಧೃತರಾಷ್ಟ್ರ, ದ್ರುಪದ, ವಿರಾಟಾದಿಗಳೋ ತೇ ತೇ = ಅವರೆಲ್ಲರೂ ವಿಶೇಷತಃ = ವಿಶೇಷಾಕಾರವಾಗಿ ತದ್ಬರಿತಾಃ = ಆ ದೇವತೆಗಳಿಂದ ಆವಿಷ್ಟರಾದ ಸುರಾಃ = ಚೆನ್ನಾಗಿ ಗಾನ ಮಾಡುವ ಗಂಧರ್ವರು. ಅತಃ= ವಿಷ್ಣುವೈಷ್ಣವರ ದ್ವೇಷವು ಅಸುರ ಲಿಂಗವಾದ್ದರಿಂದ ಯೇ ಯೇ = ಯಾರು ಯಾರು ಅಹರಿಭಕ್ತಿತತ್ಪರಾಃ = ಹರಿಯ ಭಕ್ತಿಯಲ್ಲಿ ಆಸಕ್ತಿವುಳ್ಳವರಲ್ಲವೋ ತೇತೇ = ವಿಷ್ಣು ವೈಷ್ಣವ ದ್ವೇಷಿಗಳಾದ ದುರ್ಯೋಧನಾದಿಗಳೆಲ್ಲರೂ ಅಸುರಾಃ = ಅಸುರರು. ।। ೨೩೭ ।।

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮನ್
ಮಹಾಭಾರತತಾತ್ಪರ್ಯನಿರ್ಣಯೇ ಶ್ರೀಕೃಷ್ಣ ಚರಿತೇ

ಅಂಶಾವತರಣಂ ನಾಮ ಏಕಾದಶೋಽಧ್ಯಾಯಃ ।।

।। ಶ್ರೀ ಕೃಷ್ಣಾರ್ಪಣಮಸ್ತು ।।

★ ★

।। ಹರಿವಾಯೂ ಪ್ರೀಯೇತಾಂ ।।

卐